ಸಂಪಾದಕರು :
ಎಂ.ಎಸ್. ವಿಕಾಸ್


ಗುರುವಾರ, ಅಕ್ಟೋಬರ್ 05, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 143 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



**'ಬುದ್ಧನ ಬೆಳಕು'**

ದಾವಣಗೆರೆ ಬಿಐಇಟಿ ಕಾಲೇಜು ಆವರಣದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ಬುಧವಾರ ಸಂಜೆ 'ಬುದ್ಧನ ಬೆಳಕು' ನಾಟಕ ಪ್ರದರ್ಶನಗೊಂಡಿತು. ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ನಾಟಕಕ್ಕೆ ಚಾಲನೆ ನೀಡಿದರು.

# ಅ.7ರಂದು ಜಿಲ್ಲೆಯಲ್ಲಿ ಬರ ಅಧ್ಯಯನ

## ರಾಜ್ಯದ ಬರ ಪರಿಸ್ಥಿತಿ ಅಧ್ಯಯನಕ್ಕೆ ಮೂರು ತಂಡಗಳಿಂದ ನಾಲ್ಕು ದಿನ ಪ್ರವಾಸ

ಬೆಂಗಳೂರು, ಅ. 4 - ರಾಜ್ಯದ ಬರ ಪರಿಸ್ಥಿತಿ ಅಧ್ಯಯನಕ್ಕೆ ಕೇಂದ್ರದ ಮೂರು ತಂಡಗಳು ರಾಜ್ಯಕ್ಕೆ ಆಗಮಿಸಿದ್ದು, ನಾಳೆಯಿಂದ ನಾಲ್ಕು ದಿನಗಳ ಕಾಲ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಪರಿಶೀಲನೆ ನಡೆಸಲಿವೆ.

ಕೇಂದ್ರ ತಂಡವು ಹತ್ತು ಸದಸ್ಯರನ್ನೊಳಗೊಂಡಿದ್ದು, ರಾಜ್ಯದ ಸ್ಥಳೀಯ ಅಧಿಕಾರಿಗಳೊಂದಿಗೆ ಕೃಷಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಲಿದೆ.

ಈ ಹಿನ್ನೆಲೆಯಲ್ಲಿ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಕೇಂದ್ರ ತಂಡ ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಈ ಸಾಲಿನ ಮಳೆಯ ವಾಸ್ತವ ಪರಿಸ್ಥಿತಿ ಮನವರಿಕೆ ಮಾಡಿಕೊಡಬೇಕು ಎಂಬ ನಿರ್ದೇಶನ ನೀಡಿದ್ದಾರೆ.

ಹಲವು ಕಡೆ ಸಂಪೂರ್ಣ ಬೆಳೆ ಹಾನಿಯಾಗಿದ್ದು, ಕೆಲವೆಡೆ ಬೆಳೆ ಇದ್ದರೂ ಉಂಟಾಗಲಿರುವ ತೀವ್ರ ಇಳುವರಿ ಕುಸಿತದ ಬಗ್ಗೆ ಪರಿಣಾಮಕಾರಿಯಾಗಿ ವಿವರಿಸಿ ಅರ್ಥ ಮಾಡಿ ಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ನಾಳೆ ಮೂರೂ ತಂಡಗಳು ಬೆಳಿಗ್ಗೆ 9-30 ರಿಂದ 10-30 ಗಂಟೆಯವರೆಗೆ ಕರ್ನಾಟಕ ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಲಿವೆ. ಮಧ್ಯಾಹ್ನ 12 ಗಂಟೆಗೆ ವಿಧಾನ ಸೌಧದಲ್ಲಿ ರಾಜ್ಯದ ಬರ ಪರಿಸ್ಥಿತಿಯ ಸಂಕ್ಷಿಪ್ತ (3ನೇ ಪುಟಕ್ಕೆ)



### ಜಿಲ್ಲೆಯಲ್ಲಿ ಶೇ.95ರಷ್ಟು ಬೆಳೆ ಹಾನಿ

**ದಾವಣಗೆರೆ ಜಿಲ್ಲೆಯ ಮಳೆಯಾಶ್ರಿತ ಪ್ರದೇಶದಲ್ಲಿ ಶೇ.95ರಷ್ಟು ಬೆಳೆ ಹಾನಿಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಹೇಳಿದ್ದಾರೆ.**

**ಜಿಲ್ಲೆಯಲ್ಲಿ ಭತ್ತ ಸೇರಿ 2 ಲಕ್ಷದ 23 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತು. ಮಳೆ ಬಾರದೆ ಬಹುತೇಕ ಮೆಕ್ಕೆಜೋಳ ಹಾನಿಗೊಳಗಾಗಿದೆ. ಜೊತೆಗೆ ರಾಗಿ, ಹತ್ತಿ, ಶೇಂಗಾ ಸೇರಿ ಒಟ್ಟಾರೆ 1.50 ಲಕ್ಷ ಹೆಕ್ಟೇರ್ ಬೆಳೆ ನಷ್ಟವಾಗಿದೆ ಎಂದವರು ತಿಳಿಸಿದ್ದಾರೆ.**

# ಉಜ್ವಲ ಸಬ್ಸಿಡಿ 300 ರೂ.ಗೆ ಹೆಚ್ಚಳ

ನವದೆಹಲಿ, ಅ. 4 - ಉಜ್ವಲ ಯೋಜನೆಯಡಿ ನೀಡಲಾಗುವ ಸಿಲಿಂಡರ್‌ಗಳ ಸಬ್ಸಿಡಿಯನ್ನು ಕೇಂದ್ರ ಸರ್ಕಾರ 300 ರೂ.ಗಳಿಗೆ ಹೆಚ್ಚಿಸಿದೆ.

ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪ್ರಸಕ್ತ ವರ್ಷಕ್ಕೆ 12 ಸಿಲಿಂಡರ್‌ಗಳಿಗೆ 200 ರೂ.ಗಳ ಸಬ್ಸಿಡಿ ನೀಡಲಾಗುತ್ತದೆ. ಇದನ್ನು ಪ್ರತಿ ಸಿಲಿಂಡರ್‌ಗೆ 300 ರೂ.ಗಳಿಗೆ ಹೆಚ್ಚಿಸಲಾಗಿದೆ.

ಸರ್ಕಾರದ ಈ ಕ್ರಮ 9.6 ಕೋಟಿ ಕುಟುಂಬಗಳಿಗೆ ನೆರವಾಗಲಿದೆ. ರಾಜಸ್ಥಾನ, ಮಧ್ಯ ಪ್ರದೇಶ ಸೇರಿದಂತೆ ಕೆಲ ರಾಜ್ಯಗಳ ಚುನಾವಣೆ ಸಮೀಪದಲ್ಲಿ ರುವಾಗಲೇ ಸಬ್ಸಿಡಿ ಏರಿಕೆಯ ಕ್ರಮ ತೆಗೆದುಕೊಳ್ಳಲಾಗಿದೆ.



**ಸಿಲಿಂಡರ್ ಬೆಲೆ 603 ರೂ.ಗಳಿಗೆ ಇಳಿಕೆ**

ಕಳೆದ ಆಗಸ್ಟ್‌ನಲ್ಲಿ ಕೇಂದ್ರ ಸರ್ಕಾರ ಅಡುಗೆ ಅನಿಲದ ಸಿಲಿಂಡರ್ ಬೆಲೆಯನ್ನು 200 ರೂ. ಇಳಿಕೆ ಮಾಡಿತ್ತು. ಇದರಿಂದಾಗಿ ಸಿಲಿಂಡರ್ ಬೆಲೆ 900 ರೂ.ಗಳ ಹಂತಕ್ಕೆ ಬಂದಿತ್ತು. (4ನೇ ಪುಟಕ್ಕೆ)

# ಸಿಕ್ಕಿಂನಲ್ಲಿ ಕ್ಷಿಪ್ರ ಪ್ರವಾಹ : 22 ಸೈನಿಕರು ಸೇರಿ 47 ಜನ ಕಣ್ಮರೆ

ಗ್ಯಾಂಗ್‌ಟೋಕ್, ಅ. 4 – ಉತ್ತರ ಸಿಕ್ಕಿಂನಲ್ಲಿ ಮೇಘ ಸ್ಫೋಟದಿಂದ ಉಂಟಾದ ಕ್ಷಿಪ್ರ ಪ್ರವಾಹಕ್ಕೆ ಸಿಲುಕಿ 8 ಜನ ಸಾವನ್ನಪ್ಪಿದ್ದಾರೆ ಹಾಗೂ 69 ಜನ ಕಣ್ಮರೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಧ್ಯಾಹ್ನ 1.30ರ ಸಮಯದಲ್ಲಿ ಪ್ರವಾಹ ಆರಂಭವಾಯಿತು. ಇದೇ ವೇಳೆಗೆ ಚುಂಗ್ತಾಂಗ್ ಅಣೆ ಕಟ್ಟೆಯಿಂದ ನೀರು ಹೊರ ಬಂದು ಪರಿಸ್ಥಿತಿ ಉಲ್ಬಣಿಸಿತು. ಕ್ಷಿಪ್ರ ಪ್ರವಾಹದಲ್ಲಿ 22 ಸೈನಿಕ ಸಿಬ್ಬಂದಿ ಸೇರಿದಂತೆ 47 ಜನ ಕಣ್ಮರೆಯಾಗಿದ್ದಾರೆ. 166 ಜನರನ್ನು ಇದುವರೆಗೂ ರಕ್ಷಿಸಲಾಗಿದೆ. (4ನೇ ಪುಟಕ್ಕೆ)

# ಎಸ್ಸೆಸ್ - ಯಡಿಯೂರಪ್ಪ ವೀರಶೈವ - ಲಿಂಗಾಯತ ಸಮಾಜದ ಎರಡು ಕಣ್ಣುಗಳು

ದಾವಣಗೆರೆ, ಅ. 4- ವೀರಶೈವ - ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ಸ್ಥಾನ-ಮಾನ ಕಲ್ಪಿಸುವಲ್ಲಿ ಅನ್ಯಾಯವಾಗಿದೆ ಎಂಬ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆಯನ್ನು ಶ್ರೀ ಪಂಚಪೀಠದ ಜಗದ್ಗುರುಗಳು ಬೆಂಬಲಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆಯನ್ನು ಉಜ್ಜಿನಿ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ, ಶ್ರೀಶೈಲ ಪೀಠದ ಜಗದ್ಗುರು ಡಾ. ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ, ಕಾಶೀ ಪೀಠದ ಜಗದ್ಗುರು ಡಾ. ಶ್ರೀ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ನೀಡಿದ್ದಾರೆ ಎಂದು ಶ್ರೀಶೈಲ ಮಠದ ದಾವಣಗೆರೆ ಸಮಿತಿಯ ಗೌರವ ಕಾರ್ಯದರ್ಶಿ ಎನ್.ಎ. ಮುರುಗೇಶ್ ಆರಾಧ್ಯ ತಿಳಿಸಿದ್ದಾರೆ.

ಅಖಿಲ ಭಾರತ ವೀರಶೈವ - ಲಿಂಗಾಯತ ಸಮಾಜದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಎಸ್ಸೆಸ್, ವೀರಶೈವ - ಲಿಂಗಾಯತ ಸಮಾಜವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ನೀಡಿರುವ ಹೇಳಿಕೆ ಸ್ವಾಗತಾರ್ಹ ಎಂದು ಜಗದ್ಗುರುಗಳು ಹೇಳಿದ್ದಾರೆ.



**ಸಮಾಜಕ್ಕೆ ಅನ್ಯಾಯ : ಎಸ್ಸೆಸ್ ಹೇಳಿಕೆಗೆ ಪಂಚಪೀಠದ ಜಗದ್ಗುರುಗಳ ಬೆಂಬಲ**

ಶಿವಶಂಕರಪ್ಪ ಅವರ ಹೇಳಿಕೆಯನ್ನು ಬೆಂಬಲಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೂಡ ವೀರಶೈವ - ಲಿಂಗಾಯತ ಸಮಾಜದ ಅಭಿವೃದ್ಧಿಗೆ ಬೆನ್ನೆಲುಬಾಗಿ ನಿಂತಿದ್ದು, ಎಸ್ಸೆಸ್ ಮತ್ತು ಯಡಿಯೂರಪ್ಪ ಇಬ್ಬರೂ ಈ ಸಮಾಜದ ಎರಡು ಕಣ್ಣುಳಿದ್ದಂತೆ ಎಂದು ಜಗದ್ಗುರುಗಳು ಬಣ್ಣಿಸಿದ್ದಾರೆ.

ಈ ಹಿಂದೆ ವೀರಶೈವ-ಲಿಂಗಾಯತ ಒಡೆದು ಆಳುವ ನೀತಿ ಅನುಸರಿಸಿದ ಸಂದರ್ಭದಲ್ಲೂ, (4ನೇ ಪುಟಕ್ಕೆ)

## ಎಸ್.ಎಂ. ಷಡಾಕ್ಷರಯ್ಯ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ, 14ನೇ ಕ್ರಾಸ್, ಡೋರ್ ನಂ. 3364/ A14ರ ವಾಸಿ,

**ಎಸ್.ಎಂ. ಷಡಾಕ್ಷರಯ್ಯ**

ಅವರು, ದಿನಾಂಕ 03.10.2023ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ದಿ|| ಎಸ್.ಎಂ. ಷಡಾಕ್ಷರಯ್ಯ ಅವರ ಪಾರ್ಥಿವ ಶರೀರವನ್ನು ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ, 14ನೇ ಕ್ರಾಸ್, ಡೋರ್ ನಂ. 3364/ A14ರ ಮೃತರ ನಿವಾಸದಲ್ಲಿ ದಿನಾಂಕ 05.10.2023ರ ಗುರುವಾರ ಬೆಳಿಗ್ಗೆ 10 ರಿಂದ 12 ಗಂಟೆಯವರೆಗೆ ಅಂತಿಮ ದರ್ಶನಕ್ಕಾಗಿ ಇರಿಸಲಾಗುವುದು. ನಂತರ ಗುರುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ನರಗನಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಧರ್ಮಪತ್ನಿ, ಪುತ್ರಿ, ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಶಾಂತವೀರಪ್ಪ ಮಠದ ವಂಶಸ್ಥರು, ಹಾಗೂ ಬಂಧು-ಮಿತ್ರರು, ನರಗನಹಳ್ಳಿ. ಮೊ. : 81057 16898

# ಎಂಬಿಬಿಎಸ್ ನಿರ್ಗಮನ ಪರೀಕ್ಷೆಗೆ ಸಮಿತಿ

ನವದೆಹಲಿ, ಅ. 4-ಎಂ.ಬಿ.ಬಿ.ಎಸ್. ಅಂತಿಮ ವರ್ಷದ ವಿದ್ಯಾರ್ಥಿ ಗಳಿಗೆ ರಾಷ್ಟ್ರೀಯ ನಿರ್ಗಮನ ಪರೀಕ್ಷೆ (ಎನ್‌ಇಎಕ್ಸ್‌ಟಿ) ನಡೆಸುವ ಕುರಿತು ಕೇಂದ್ರ ಆರೋಗ್ಯ ಸಚಿವಾಲ ಯವು ಏಳು ಸದಸ್ಯರ ಸಮಿತಿ ರಚಿಸಿದೆ. 2019ರ ಎಂ.ಬಿ.ಬಿ.ಎಸ್. ತಂಡಕ್ಕೆ ಎನ್‌ಇಎಕ್ಸ್‌ಟಿ ಪರೀಕ್ಷೆ ನಡೆಸಬೇಕಿತ್ತು. ಆದರೆ, ಅದನ್ನು 2020 ತಂಡಕ್ಕೆ ಮುಂದೂಡ ಲಾಗಿತ್ತು. ಈ (3ನೇ ಪುಟಕ್ಕೆ)

# ಅರಿಶಿಣ ಬೆಳೆಗಾಗಿ ಕೇಂದ್ರ ಮಂಡಳಿ

ನವದೆಹಲಿ, ಅ. 4 - ಅರಿಶಿಣ ಬೆಳೆ ಹಾಗೂ ರಫ್ತಿಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ರಾಷ್ಟ್ರೀಯ ಅರಿಶಿಣ ಮಂಡಳಿ ಸ್ಥಾಪಿಸಲು ನಿರ್ಧರಿಸಿದೆ.

ಅರಿಶಿಣದ ರಫ್ತನ್ನು 2030ರ ವೇಳೆಗೆ 8,600 ಕೋಟಿ ರೂ.ಗಳಿಗೆ ಹೆಚ್ಚಿಸಲು ಸರ್ಕಾರ ಗುರಿ ಹೊಂದಿದೆ. ಪ್ರಸಕ್ತ 1,600 ಕೋಟಿ ರೂ.ಗಳ ಅರಿಶಿನ ರಫ್ತು ಮಾಡಲಾ ಗುತ್ತಿದೆ. ಸಂಪುಟ ಸಭೆಯ ನಂತರ ಈ ವಿಷಯ (3ನೇ ಪುಟಕ್ಕೆ)

# ಸಮ್ಮತಿ ವಯಸ್ಸು ಇಳಿಕೆ ಬೇಡ: ಸಲಹೆ

ನವದೆಹಲಿ, ಅ. 4 - ಪೋಕ್ಸೋ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಮ್ಮತಿಯ ವಯಸ್ಸನ್ನು ಇಳಿಕೆ ಮಾಡುವ ಅಧಿಕಾರವನ್ನು ಪರೋಕ್ಷವಾಗಿ ನ್ಯಾಯಾ ಲಯಗಳಿಗೆ ನೀಡುವ ಶಿಫಾರಸ್ಸು ಒಪ್ಪಬಾರದು ಎಂದು ಮಕ್ಕಳ ಹಕ್ಕು ಆಯೋಗ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಲಿದೆ.

ಪೋಕ್ಸೋ ಕಾಯ್ದೆ ಅನ್ವಯ 18 ವರ್ಷದೊಳಗಿ ನವರು ಲೈಂಗಿಕ ಸಂಬಂಧಕ್ಕೆ ಸಹಮತ ನೀಡುವುದನ್ನು ಪರಿಗಣಿಸು ವಂತಿಲ್ಲ. (4ನೇ ಪುಟಕ್ಕೆ)




## ಕಕ್ಕರಗೊಳ್ಳದ ಶ್ರೀ ಕೋಡೇರ ರೇವಣಸಿದ್ದಪ್ಪನವರ ಧರ್ಮಪತ್ನಿ
# ಶ್ರೀಮತಿ ಪಾರ್ವತಮ್ಮ ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ 'ಎ' ಬ್ಲಾಕ್, ಗ್ಲಾಸ್ ಹೌಸ್ ರಸ್ತೆ 1ನೇ ಕ್ರಾಸ್ ವಾಸಿ

**ಕಕ್ಕರಗೊಳ್ಳದ ಶ್ರೀ ಕೋಡೇರ ರೇವಣಸಿದ್ದಪ್ಪನವರ ಧರ್ಮಪತ್ನಿ**

**ಶ್ರೀಮತಿ ಪಾರ್ವತಮ್ಮನವರು**

ದಿನಾಂಕ 04.10.2023ರ ಬುಧವಾರ ಮಧ್ಯಾಹ್ನ 1.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 75 ವರ್ಷ ವಯಸ್ಸಾಗಿತ್ತು.

ಪತಿ, ಪುತ್ರ - ಕೆ.ಆರ್. ವೇದಮೂರ್ತಿ (ಸಿದ್ದೇಶ್), ಮೂವರು ಪುತ್ರಿಯರು, ಸಹೋದರ - ಮಾಜಿ ಛೇರ್ಮನ್ ಜಿ.ಹೆಚ್. ರಾಮಚಂದ್ರಪ್ಪ ಸೇರಿದಂತೆ, ಇಬ್ಬರು ಸಹೋದರರು, ಓರ್ವ ಸಹೋದರಿ ಹಾಗೂ ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05.10.2023ರ ಗುರುವಾರ ಬೆಳಿಗ್ಗೆ 11.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
✦ ಕೋಡೇರ ವಂಶಸ್ಥರು, ಕಕ್ಕರಗೊಳ್ಳ ✦ ಗುರಾಳರ ವಂಶಸ್ಥರು, ಶಾಮನೂರು
ಹಾಗೂ ಬಂಧು-ಮಿತ್ರರು. ಮೊ. 98440-64264



# ಇಂದಿನ ಜಗತ್ತಿಗೆ ಗಾಂಧೀಜಿ ಚಿಂತನೆಗಳು ಪ್ರಸ್ತುತ

## ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ




ಹರಿಹರ, ಅ,4- ಇಂದಿನ ಭಾರತಕ್ಕೆ ಮತ್ತು ಜಗತ್ತಿಗೆ ಗಾಂಧೀಜಿಯ ಬದುಕು ಮತ್ತು ಚಿಂತನೆಗಳು ಅತ್ಯಂತ ಪ್ರಸ್ತುತ ಎಂದು ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ ಅಭಿಪ್ರಾಯಪಟ್ಟರು.

ನಗರದ ಶ್ರೀ ಶಕ್ತಿ ಹಿರಿಯ ನಾಗರಿಕರ ವಸತಿ ನಿಲಯದಲ್ಲಿ ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪನವರ ಮಗ ವಿನಯ್ ಕುಮಾರ್ ಹುಟ್ಟುಹಬ್ಬದ ನಿಮಿತ್ಯ ವೃದ್ಧರಿಗೆ ಊಟದ ವ್ಯವಸ್ಥೆ ಹಾಗೂ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜದ ಬಹಳಷ್ಟು ಜನರಿಗೆ ಸಮಾಜ ಮುಖಿ ಚಿಂತನೆ ಇದ್ದಾಗ ಮಾತ್ರ, ಜಗತ್ತು ಉಳಿಯಲು ಸಾಧ್ಯ. ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅಂತಹವರು ಇಂತಹ ಚಿಂತನೆಗಳನ್ನು ಅಳವಡಿಸಿಕೊಂಡಿದ್ದರು. ಗಾಂಧೀಜಿ ಹಾಗೂ ಶಾಸ್ತ್ರೀಯವರು ವ್ಯಕ್ತಿಗಳಲ್ಲ ಅವರು ಭಾರತದ ಶಕ್ತಿ ಎಂದು ಅವರು ಪ್ರತಿಪಾದಿಸಿದರು.

ಹಿರಿಯ ಸಾಹಿತಿ, ನಿವೃತ್ತ ಪ್ರೊ. ಸಿ.ವಿ. ಪಾಟೀಲ್ ಮಾತನಾಡಿ, ಪ್ರಾಮಾಣಿಕವಾಗಿರು, ಉದಾತ್ತವಾಗಿರು, ತ್ಯಾಗ ಮತ್ತು ಸೇವೆಯನ್ನು ನಿರಂತರವಾಗಿ ಮಾಡುತ್ತಿರುವೆ ಎಂದು ಗಾಂಧೀಜಿಯವರು ಕರಕೊಟ್ಟದ್ದನ್ನು ಜನರು ಇಂದಿಗೂ ಸ್ಮರಿಸುತ್ತಾರೆ.

ಸರಳತನದ ಆಚರಣೆ ಅಷ್ಟೊಂದು ಸುಲಭದ್ದಲ್ಲ. ರಾಜಕೀಯ, ಧಾರ್ಮಿಕ, ಅಧ್ಯಾತ್ಮ ಎಲ್ಲದರಲ್ಲೂ ಸರಳತೆಯನ್ನು ರೂಢಿಸಿಕೊಂಡ ವಿಶ್ವನಾಯಕ ಹಾಗೂ ವಿಶ್ವದ ಆರಾಧಕರು ಗಾಂಧೀಜಿ ಮತ್ತು ಶಾಸ್ತ್ರೀಜಿ ಎಂದು ಬಣ್ಣಿಸಿದರು.

ತಪೋವನ ಛೇರ್ಮನ್ ಡಾ. ಶಶಿ ಕುಮಾರ್ ಮಾತನಾಡಿ, ಮಹಾತ್ಮ ಗಾಂಧೀಜಿಯವರ ಶಾಂತಿ ಮಂತ್ರವನ್ನು ಎಲ್ಲರೂ ಮೈಗೂಡಿಸಿಕೊಂಡು ಹೋದಾಗ ಮನುಷ್ಯರ ಬೆಳವಣಿಗೆ ತನ್ನಿಂದ ತಾನೇ ಹೆಚ್ಚುತ್ತಾ ಹೋಗುತ್ತದೆ. ಗಾಂಧೀಜಿಯವರು ಪ್ರಕೃತಿ ಚಿಕಿತ್ಸೆ ಬಗ್ಗೆ ಹೆಚ್ಚು ಆದ್ಯತೆ ನೀಡುತ್ತಿದ್ದರು. ಅವರ ಆಹಾರ ಪದ್ಧತಿಯನ್ನು ಪ್ರಕೃತಿ ವೈದ್ಯರು ನೋಡಿಕೊಳ್ಳುತ್ತಿದ್ದರು. ಹಾಗಾಗಿ ಎಲ್ಲರೂ ಪ್ರಕೃತಿ ಚಿಕಿತ್ಸೆ ಪಡೆಯುವಂತೆ ಮತ್ತು ಗಾಂಧೀಜಿಯವರ ತತ್ವ, ಆದರ್ಶಗಳನ್ನು ಮೈಗೂಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಎಸ್.ಹೆಚ್. ಹೂಗಾರ್, ಸಿ.ಎನ್. ಹುಲಿಗೇಶ್, ಬಿ.ರೇವಣಸಿದ್ದಪ್ಪ, ಜೆ. ಕಲೀಮ್ ಬಾಷಾ, ರಾಜಶೇಖರ್ ಕೆ.ಬಿ., ಹೆಚ್. ಸುಧಾಕರ್, ವೈ. ಕೃಷ್ಣಮೂರ್ತಿ, ಶಶಿಕುಮಾರ್ ಮೆಹರ್ವಾಡೆ, ಎಪಿಎಂಸಿ ಮಾಜಿ ಅಧ್ಯಕ್ಷ ಬಸಪ್ಪ, ಪತ್ರಕರ್ತ ಪಂಚಾಕ್ಷರಿ ಅವರು ಮಾತನಾಡಿದರು.

ಅಧ್ಯಕ್ಷತೆಯನ್ನು ಚಂದ್ರಮ್ಮ ಕೊಟ್ರಪ್ಪ ವಹಿಸಿದ್ದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ನಿಂಬಕ್ಕ ಚಂದಪೂರ್, ನಗರಸಭೆ ಸದಸ್ಯ ಹನುಮಂತಪ್ಪ, ಮಾಜಿ ಜಿಲ್ಲಾ ಕಸಾಪ ಅಧ್ಯಕ್ಷ ಎಸ್.ಹೆಚ್. ಹೂಗಾರ್, ಜೆ. ಕಲೀಂ ಭಾಷಾ, ಕೆಪಿಸಿಸಿ ಸದಸ್ಯ ಬಿ. ರೇವಣಸಿದ್ದಪ್ಪ, ಮಾಜಿ ದೂಡಾ ಸದಸ್ಯ ಹೆಚ್. ನಿಜಗುಣ, ಕಾಳಿದಾಸ ವಿದ್ಯಾಸಂಸ್ಥೆ ಅಧ್ಯಕ್ಷ ಕೆ.ಬಿ. ರಾಜಶೇಖರ, ಸಿ. ಎನ್. ಹುಲಗೇಶ್, ಬಸಣ್ಣ ಚಿಕ್ಕಬಿದರಿ, ಕೆ. ಎನ್. ಹಳ್ಳಿ ಚಂದ್ರಶೇಖರ್, ವೈ. ಕೃಷ್ಣಮೂರ್ತಿ, ಪ್ರಕಾಶ್ ಕೋಳೂರು, ಸುಬ್ರಹ್ಮಣ್ಯ ನಾಡಿಗೇರ್, ಕೆ. ಪಂಚಾಕ್ಷರಿ, ಕಸಾಪ ಗೌರವ ಕಾರ್ಯದರ್ಶಿ ಎಂ. ಚಿದಾನಂದ ಕಂಚಿಕೇರಿ, ಬಿ.ಬಿ. ರೇವಣನಾಯ್ಕ್, ಸದಸ್ಯ ಎ. ರಿಯಾಜ್ ಅಹ್ಮದ್, ಹೆಚ್.ಎಸ್. ಕೊಟ್ರೇಶ್, ವಿ.ಬಿ. ಕೊಟ್ರೇಶ್, ಶೇಖರಗೌಡ ಪಾಟೀಲ್, ಹೆಚ್. ಸಿ. ಕೀರ್ತಿಕುಮಾರ್, ಹೆಚ್. ಸುಧಾಕರ್, ಎನ್.ಇ. ಸುರೇಶ್, ನಾಗರಾಜ್, ಇಲಿಯಾಸ್ ಅಹ್ಮದ್, ಶ್ರೀನಿವಾಸ್ ಕೊಡ್ಲಿ, ಗಂಗಾಧರ ಕೊಟಗಿ, ವೀರಣ್ಣ ಅಂಗಡಿ, ಪ್ರಭು ಕೊಟಗಿ ಇತರರು ಹಾಜರಿದ್ದರು.

ಹೆಚ್.ಕೆ. ಕೊಟ್ರಪ್ಪ ಸ್ವಾಗತಿಸಿದರು. ಕು. ರೇಖಾ ಪ್ರಾರ್ಥಿಸಿದರು, ಬಿ.ಬಿ. ರೇವಣನಾಯ್ಕ ಕಾರ್ಯಕ್ರಮವನ್ನು ನಿರೂಪಿಸಿದರೆ, ವಿ.ಬಿ. ಕೊಟ್ರೇಶಪ್ಪ ವಂದಿಸಿದರು.

# ಜಾತಿ ಗಣತಿಗೆ ಕಾಂಗ್ರೆಸ್ ಲೆಕ್ಕಾಚಾರ

## ಲೋಕಸಭಾ ಚುನಾವಣೆಗೆ ಮುನ್ನವೇ ಜಾತಿ ಗಣತಿ ಬಿಡುಗಡೆ

ಬೆಂಗಳೂರು, ಅ.4 - ಮುಂಬರುವ ಲೋಕಸಭಾ ಚುನಾವಣೆಗೂ ಮುನ್ನವೇ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ವರದಿಯನ್ನು (ಜಾತಿ ಗಣತಿ) ಬಿಡುಗಡೆಗೊಳಿಸಲು ಕಾಂಗ್ರೆಸ್ ಸರ್ಕಾರ ಮುಂದಾಗಿದೆ.

ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಚುನಾವಣೆಯಲ್ಲಿ ದೊಡ್ಡ ಲಾಭ ಗಿಟ್ಟಿಸಬಹುದು ಎಂಬ ಲೆಕ್ಕಾಚಾರದಲ್ಲಿರುವ ಕಾಂಗ್ರೆಸ್ ಕಾಂತರಾಜ್ ವರದಿ ಬಹಿರಂಗೊಳಿಸಿದರೆ, ಪಕ್ಷಕ್ಕೆ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಅನುಕೂಲವಾಗಲಿದೆ ಎಂಬ ಲೆಕ್ಕಾಚಾರದಲ್ಲಿದೆ.

ಈ ಉದ್ದೇಶದಿಂದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ಒಂದು ತಿಂಗಳ ಹಿಂದೆಯೇ ಹಿಂದುಳಿದ ವರ್ಗಗಳ ಆಯೋಗದ ಹಾಲಿ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರಿಗೆ ಪತ್ರ ಬರೆದು ಶೈಕ್ಷಣಿಕ ಹಾಗೂ ಸಾಮಾಜಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕೋರಿದ್ದರು.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಬಿಜೆಪಿ ಆಡಳಿತಾವಧಿಯಲ್ಲಿ ನೇಮಕಗೊಂಡಿದ್ದ ಜಯಪ್ರಕಾಶ್ ಅವರ ಅವಧಿ ನವೆಂಬರ್ ಅಂತ್ಯಕ್ಕೆ ಕೊನೆಗೊಳ್ಳಲಿದ್ದು, ಅದಕ್ಕೂ ಮುನ್ನವೇ ವರದಿ ಸಲ್ಲಿಸುವುದಾಗಿ ಸರ್ಕಾರಕ್ಕೆ ಪತ್ರ ಬರೆದು ತಿಳಿಸಿದ್ದಾರೆ.


ಕಾಂತರಾಜ್ ವರದಿ ಸರ್ಕಾರಕ್ಕೆ ಸಲ್ಲಿಸುವ ಮುನ್ನವೇ ಸೋರಿಕೆಗೊಂಡು, ಸೋರಿಕೆ ಮಾಹಿತಿಯಂತೆ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗ ಮೊದಲ ಸ್ಥಾನದಲ್ಲೂ ಹಾಗೂ ಅಲ್ಪಸಂಖ್ಯಾತರು ಎರಡನೇ ಸ್ಥಾನದಲ್ಲಿದ್ದಾರೆ.

ವೀರಶೈವ ಮತ್ತು ಒಕ್ಕಲಿಗ ಸಮುದಾಯಗಳು ಕ್ರಮವಾಗಿ 4-5 ನೇ ಸ್ಥಾನಗಳನ್ನು ಹಂಚಿಕೊಂಡಿವೆ ಎಂಬ ಮಾಹಿತಿ ಇತ್ತು. ಸೋರಿಕೆಯಾದ ಬಳಿಕ ವರದಿಯ ಬಗ್ಗೆ ಅಪಸ್ವರಗಳು ಕೇಳಿಬಂದವು. ವರದಿ ಸಿದ್ದಗೊಂಡ ನಂತರ ಸಿದ್ದರಾಮಯ್ಯ, ಕುಮಾರಸ್ವಾಮಿ, ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಸೇರಿದಂತೆ, ನಾಲ್ವರು ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದಾರೆ. ಆದರೆ, ಇವರಾರು ವರದಿ ಸ್ವೀಕರಿಸಿ ಜನರ ಮುಂದಿಡಲಿಲ್ಲ.

ಕುಮಾರಸ್ವಾಮಿ ಆಡಳಿತದಲ್ಲಿ ವರದಿ ತಲುಪಿಸಲು ಅಂದಿನ ಆಯೋಗದ ಅಧ್ಯಕ್ಷರು ಮುಂದಾಗಿದ್ದರು. ಆದರೆ, ವರದಿಗೆ ಕಾರ್ಯದರ್ಶಿ ಸಹಿ ಹಾಕಿರಲಿಲ್ಲ. ಅಂತಹ ವರದಿಯನ್ನು ಸ್ವೀಕರಿಸಲು ಮುಂದಾಗಲಿಲ್ಲ.

ಇದೀಗ ಸಿದ್ದರಾಮಯ್ಯ ಅವರು ತಮ್ಮ ಮೊದಲ ಆಡಳಿತಾವಧಿಯಲ್ಲಿ ನಡೆಸಿದ ಸಮೀಕ್ಷಾ ವರದಿಯನ್ನು ಮತ್ತೆ ತಮ್ಮ ಸರ್ಕಾರದಿಂದ ಪಡೆದು ವರದಿಯನ್ನು ಜನರ ಮುಂದಿಡಲು ತೀರ್ಮಾನಿಸಿದ್ದಾರೆ. ವರದಿ ಬಹಿರಂಗಗೊಂಡರೆ, ಕಾಂಗ್ರೆಸ್ ಪಕ್ಷಕ್ಕೆ ಲಾಭವಾಗಲಿದೆ ಎಂಬ ವಿಚಾರ ಆ ಪಕ್ಷದ ಪಡಸಾಲೆಯಲ್ಲಿ ಕೇಳಿಬರುತ್ತಿದೆ.

### ಜಾತಿ ಗಣತಿಯಿಂದ ನಿರ್ದಿಷ್ಟ ವಿವರ



ಕೊಡತರ್ರೈ, ಅ. 4 - ಹಿಂದುಳಿದ ವರ್ಗಗಳ ಗಣತಿ ನಡೆಸುವುದರಿಂದ ಅವರ ಪರಿಸ್ಥಿತಿಯ ನಿಖರ ವಿವರ ಸಿಗಲಿದೆ ಹಾಗೂ ಅವರ ಕಲ್ಯಾಣಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಲು ನೆರವಾಗಲಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಕಾಂಗ್ರೆಸ್ ದೇಶವನ್ನು ಒಡೆಯುತ್ತಿದೆ ಎಂದು ಆರೋಪಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಖರ್ಗೆ, 2024ರಲ್ಲಿ ಇಂತಹ ಆಟಗಳನ್ನು ಮುಂದುವರೆಸಲು ಆಗದು. ದೇಶದ ಜನರಿಗೆ ತಿಳಿವಳಿಕೆ ಬಂದಿದೆ ಎಂದಿದ್ದಾರೆ.

ಈಗಾಗಲೇ ಗ್ಯಾರಂಟಿ ಅನುಷ್ಠಾನದ ಮೂಲಕ ಲೋಕಸಭೆಯಲ್ಲಿ ಭರ್ಜರಿ ವಿಜಯ ಸಾಧಿಸಬಹುದು ಎಂಬ ಲೆಕ್ಕಾಚಾರ ಇಟ್ಟುಕೊಂಡಿರುವ ಆ ಪಕ್ಷದ ಮುಖಂಡರು, ಕಾಂತರಾಜ್ ವರದಿ ಬಹಿರಂಗಗೊಂಡರೆ ನಮಗೆ ಹಿಂದುಳಿದ ವರ್ಗಗಳ ಮತ ಗಟ್ಟಿಯಾಗಲಿವೆ ಎಂಬ ಲೆಕ್ಕಾಚಾರದಲ್ಲಿದ್ದಾರೆ.

ಪ್ರಚಂಡ ಬಹುಮತ ಗಳಿಸಿರುವ ಕಾಂಗ್ರೆಸ್ ಸರ್ಕಾರ ವರದಿಯನ್ನು ಸ್ವೀಕರಿಸಿ, ನಂತರ ಸಂಪುಟ ಸಭೆಯ ಮುಂದಿಟ್ಟು ಬಹಿರಂಗ ಪಡಿಸುವ ಆಲೋಚನೆಯಲ್ಲಿದೆ.

ಸಾಧ್ಯವಾದರೆ ಬೆಳಗಾವಿಯಲ್ಲಿ ಜರುಗಲಿರುವ ವಿಧಾನಮಂಡಲದ ಅಧಿವೇಶನದಲ್ಲಿ ವರದಿ ಮಂಡಿಸಿ, ಚರ್ಚೆಗೆ ಅವಕಾಶ ಕಲ್ಪಿಸಲು ಮುಖ್ಯಮಂತ್ರಿ ಅವರು ಚಿಂತಿಸಿದ್ದಾರೆ ಎನ್ನಲಾಗಿದೆ. ಈ ವರದಿಯಿಂದ ಬಿಜೆಪಿ-ಜೆಡಿಎಸ್‌ಗೆ ಲಾಭವಾಗುವುದಿಲ್ಲ. ಕಾಂಗ್ರೆಸ್‌ಗೆ ದೊಡ್ಡ ತಿರುವು ದೊರೆಯಲಿದೆ ಎಂಬ ಲೆಕ್ಕಾಚಾರದಲ್ಲಿ ವರದಿಯನ್ನು ಸ್ವೀಕರಿಸಿ ಬಹಿರಂಗಪಡಿಸಲು ಕಾತುರವಾಗಿದೆ.

ಜಾತಿ ಗಣತಿಯನ್ನು ಕೇಂದ್ರ ಸರ್ಕಾರವೇ ಮಾಡಬೇಕು. ರಾಜ್ಯ ಸರ್ಕಾರಗಳಿಗೆ ಅಧಿಕಾರವಿಲ್ಲ. ಒಂದು ವೇಳೆ ಜಾತಿ ಗಣತಿ ಮಾಡಿದರೂ ಅಂತಹ ವರದಿಗಳಿಗೆ ಕಾನೂನು ಬದ್ಧ ಮನ್ನಣೆ ಸಿಗುವುದಿಲ್ಲ.

ಬಿಹಾರದಲ್ಲಿ ಬಿಡುಗಡೆಯಾಗಿರುವ ಜಾತಿ ಗಣತಿಯನ್ನು ವಿರೋಧ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಆ ಸರ್ಕಾರದ ವಿರುದ್ಧ ಕಿಡಿ ಕಾರಿದ್ದಾರೆ. ಕಾಂಗ್ರೆಸ್ ಜಾತಿ ಗಣತಿ ಮಾಡಿ ಹಿಂದೂ ಹಾಗೂ ಅಲ್ಪ ಸಂಖ್ಯಾತರನ್ನು ಪ್ರತ್ಯೇಕ ಮಾಡಿದ್ದರು. ಇದೀಗ ಹಿಂದೂಗಳನ್ನೇ ವಿಭಜಿಸಲು ಹುನ್ನಾರ ನಡೆಸಿದ್ದಾರೆ ಟೀಕಿಸಿದ್ದಾರೆ.

# ರಾಜ್ಯ ಶಿಕ್ಷಣ ನೀತಿಗೆ ವಾರದಲ್ಲಿ ತಜ್ಞರ ಸಮಿತಿ

ಬೆಂಗಳೂರು, ಅ.4 - ರಾಜ್ಯದ ಹೊಸ ಶಿಕ್ಷಣ ನೀತಿ ರೂಪಿಸಲು ಇನ್ನೊಂದು ವಾರದಲ್ಲಿ ತಜ್ಞರ ಸಮಿತಿ ರಚಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎನ್.ಸಿ.ಸುಧಾಕರ್ ಇಂದಿಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಿತಿಗೆ ಯಾರು ಅಧ್ಯಕ್ಷರು, ಸದಸ್ಯರು ಇರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧಾರ ಮಾಡಲಿದ್ದಾರೆ ಎಂದರು.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಗುಣಮಟ್ಟದ ಶಿಕ್ಷಣ ನೀಡಲು ಅನುಕೂಲವಾಗುವಂತೆ ವರದಿ ನೀಡಲು ಸಮಿತಿ ರಚಿಸಲಾಗುವುದು. ಸಮಿತಿಗೆ ನಿರ್ದಿಷ್ಟ ನಿಯಮಗಳನ್ನು ನೀಡಿ ಎಲ್ಲರ ಭಾವನೆಗಳನ್ನು ಕ್ರೋಢೀಕರಿಸಿ ವರದಿ ನೀಡುವಂತೆ ಸೂಚಿಸಲಾಗುವುದು ಎಂದು ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿ ರದ್ದುಪಡಿಸಿ ಹೊಸ ಶಿಕ್ಷಣ ನೀತಿ ಜಾರಿಗೆ ತರುವ ಪ್ರಕ್ರಿಯೆ ಪ್ರಾರಂಭವಾಗಿದೆ. ಈಗಾಗಲೇ ಎನ್‌ಇಪಿಯಡಿ ವ್ಯಾಸಂಗ ಪ್ರಾರಂಭಿಸಿರುವವರು ಅದೇ ಹಳೆಯ ಪದ್ಧತಿಯಲ್ಲೇ ಮುಂದುವರೆಯುತ್ತಾರೆ. ಹೊಸದಾಗಿ ವ್ಯಾಸಂಗ ಆರಂಭಿಸುವವರಿಗೆ ಹೊಸ ಶಿಕ್ಷಣ ನೀತಿಯಡಿ ಶಿಕ್ಷಣ ದೊರೆಯಲಿದೆ.

ಸರ್ಕಾರಿ ಕಾಲೇಜಿನ ಅಧ್ಯಾಪಕರು, ಖಾಸಗಿ ಕೋಚಿಂಗ್ ಸೆಂಟರ್‌ಗಳಲ್ಲಿ ಬೋಧನೆ ಮಾಡುವವರ ಬಗ್ಗೆ ಹೆಚ್ಚು ದೂರುಗಳು ಬಂದಿಲ್ಲ. ಕಾಲೇಜಿನ ಅವಧಿಯಲ್ಲಿ ಕೋಚಿಂಗ್ ಸೆಂಟರ್‌ನಲ್ಲಿ ಬೋಧನೆ ಮಾಡುವ ಅಥವಾ ಅವರ ಹೆಸರಿನಲ್ಲಿ ಕೋಚಿಂಗ್ ಸೆಂಟರ್ ತೆರೆದಿರುವ ಬಗ್ಗೆ ದೂರುಗಳಿಲ್ಲ. ಸರ್ಕಾರಿ ಅಧ್ಯಾಪಕರಾದವರು ಖಾಸಗಿಯಾಗಿ ಕೋಚಿಂಗ್ ಸೆಂಟರ್‌ಗಳಲ್ಲಿ ಬೋಧನೆ ಮಾಡಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು.

ನಗರ ಕೇಂದ್ರಿತ ಎಂಜಿನಿಯರ್ ಕಾಲೇಜುಗಳಲ್ಲಿ ಮನಸೋ ಇಚ್ಛೆ ಸೀಟುಗಳನ್ನು ಹೆಚ್ಚಳ ಮಾಡುವುದಕ್ಕೆ ಕಡಿವಾಣ ಹಾಕಲಾಗುವುದು. ಇಲ್ಲದಿದ್ದರೆ ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಶಿಕ್ಷಣ ದೊರೆಯುವುದಿಲ್ಲ.

ಹಳೆಯ ಎಂಜಿನಿಯರ್ ಕಾಲೇಜುಗಳು ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿವೆ. ಆದರೆ ಅದಕ್ಕೆ ತಕ್ಕಂತೆ ಪ್ರಯೋಗಾಲಯ, ಬೋಧಕ ಸಿಬ್ಬಂದಿ ನೇಮಕ ಇರುವುದಿಲ್ಲ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಆನ್‌ಲೈನ್ ಮೂಲಕ ಪರಿಶೀಲನೆ ನಡೆಸಿ, ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವ ಷರತ್ತಿನೊಂದಿಗೆ ಅನುಮೋದನೆ ನೀಡುತ್ತದೆ.

ಆ ನ್ಯೂನತೆಗಳ ಬಗ್ಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್‌ಗೂ ಪತ್ರ ಬರೆಯಲಾಗಿದೆ. ಯುಜಿಸಿಗೂ ಪತ್ರ ಬರೆಯಲಾಗುವುದು. ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಕಾನೂನು ತಿದ್ದುಪಡಿ ತರಲು ಪರಿಶೀಲಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

# ಸಿದ್ಧಗಂಗಾ ಸ್ಕೌಟ್ಸ್ ಗೈಡ್ಸ್‌ನಿಂದ 'ಸ್ವಚ್ಛತೆಯೇ ಸೇವೆ' ಅಭಿಯಾನ



ದಾವಣಗೆರೆ, ಅ.4- ಭಾರತ್ ಸ್ಕೌಟ್ಸ್ ಗೈಡ್ಸ್‌ನ ಸಿದ್ಧಗಂಗಾ ಸ್ಥಳೀಯ ಸಂಸ್ಥೆಯ 600 ಕ್ಕೂ ಹೆಚ್ಚು ಕಬ್ಸ್ ಬುಲ್ ಬುಲ್ಸ್ ಸ್ಕೌಟ್ ಗೈಡ್ ಮಕ್ಕಳು ಗಾಂಧಿ ಜಯಂತಿ ಅಂಗವಾಗಿ 'ಸ್ವಚ್ಛತೆಯೇ ಸೇವೆ' ಅಭಿಯಾನದಲ್ಲಿ ಪಾಲ್ಗೊಂಡರು.

ಕಾರ್ಯದರ್ಶಿ ಎಂ. ಸಿ ಮಹೇಶ್, ಎಲ್.ಟಿ. ಶಶಿಕಲಾ, ಗೈಡ್ಸ್ ಎಡಿಸಿ ರೇಖಾರಾಣಿ ಹಾಗೂ ಸ್ಕೌಟ್ಸ್ ಗೈಡ್ಸ್ ಕ್ಯಾಪ್ಟನ್‌ಗಳ ನೇತೃತ್ವದಲ್ಲಿ ಮಕ್ಕಳು ಸಾಮೂಹಿಕ ಪ್ರಾರ್ಥನೆ ಮಾಡಿ ಸ್ವಚ್ಛ ಭಾರತ ಶಪಥ ಸ್ವೀಕರಿಸಿದರು.

ನಂತರ ಮಕ್ಕಳು ತಂಡ ತಂಡವಾಗಿ ಶಾಲೆಯ ಆಟದ ಮೈದಾನ, ಪಾರ್ಕ್ ಮತ್ತು ಸುತ್ತಲಿನ ಆವರಣವನ್ನು ಸ್ವಚ್ಛಗೊಳಿಸಿದರು. ದೈಹಿಕ ಶಿಕ್ಷಕರಾದ ರಘು, ಶ್ರೀನಿವಾಸ್, ದುಗ್ಗಪ್ಪ, ಆರೋಗ್ಯಮೇರಿ, ಸುನೀತಾ ಮಾರ್ಗದರ್ಶನ ಮಾಡಿದರು. ಇತರೆ ಮಕ್ಕಳು ಈ ಮಕ್ಕಳಿಗೆ ನೆರವು ನೀಡಿದರು.

# ಹರಿಹರ : ಗಣೇಶ ವಿಸರ್ಜನೆ ವೇಳೆ ಮಾತಿನ ಚಕಮಕಿ

ಹರಿಹರ, ಅ.4- ನಗರದ ಬೆಂಕಿನಗರ ಬಡಾವಣೆಯ ಗಣೇಶ ವಿಸರ್ಜನೆ ಮೆರವಣಿಗೆ ಸಂದರ್ಭದಲ್ಲಿ ಎರಡು ಕೋಮಿನ ಯುವಕರ ಮಧ್ಯೆ ಮಾತಿನ ಚಕಮಕಿ ನಡೆದಿದೆ.

ತಕ್ಷಣ ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಸ್ಥಿತಿ ಹತೋಟಿಗೆ ತಂದಿದ್ದು, ನಂತರ ಗಣೇಶನ ಮೂರ್ತಿಯನ್ನು ಮೆರವಣಿಗೆ ಮೂಲಕ ವಿಸರ್ಜನೆ ಮಾಡಲಾಯಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರನ್ನೂ ಬಂಧಿಸಿಲ್ಲ. ಸ್ಥಳಕ್ಕೆ ಡಿವೈಎಸ್ಪಿ ಜಿ.ಎಸ್. ಬಸವರಾಜ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಆಗಮಿಸಿ, ಸ್ಥಳ ಪರಿಶೀಲನೆ ನಡೆಸಿದರು.

# ವಿಜೃಂಭಣೆಯಿಂದ ಗಾಂಧಿ ಮೈದಾನದ ಗಣೇಶ ವಿಸರ್ಜನೆ



**ಹರಿಹರ**

ಹರಿಹರ, ಅ.4- ನಗರದ ಗಾಂಧಿ ಮೈದಾನದಲ್ಲಿ ಸಾರ್ವಜನಿಕ ವಿನಾಯಕ ಮಹೋತ್ಸವ ಸಮಿತಿ ವತಿಯಿಂದ ಪ್ರತಿಷ್ಠಾಪನೆ ಮಾಡಿದ್ದ ವಿನಾಯಕನನ್ನು ಅದ್ದೂರಿ ಮೆರವಣಿಗೆಯೊಂದಿಗೆ ಇಂದು ವಿಸರ್ಜನೆ ಮಾಡಲಾಯಿತು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮೆರವಣಿಗೆಗೆ ಚಾಲನೆ ನೀಡಿದರು. ನೂತನವಾಗಿ ಮಂಜು ಸೌಂಡ್ ಸಿಸ್ಟಮ್ ನವರು ತರಿಸಿದ್ದ ಟಗರು ಸೌಂಡ್ ಸಿಸ್ಟಮ್, ಡೊಳ್ಳು, ನಂದಿಕೋಲು, ಸಮಾಳ ಸೇರಿದಂತೆ ವಿವಿಧ ಕಲಾ ಮೇಳಗಳು ಮೆರವಣಿಗೆಗೆ ಮೆರಗನ್ನು ನೀಡಿದವು.

ಡಿ.ಜೆ.ಸೌಂಡ್ ಸಿಸ್ಟಮ್ ತಾಳಕ್ಕೆ ತಕ್ಕಂತೆ ಯುವಕರು, ಮಕ್ಕಳು ಕುಣಿದರು. ನಂದಿಗಾವಿ ಶ್ರೀನಿವಾಸ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಡೊಳ್ಳು ಭಾರಿಸುತ್ತ ಯುವಕರನ್ನು ಹುರಿದುಂಬಿಸಿದರು.

ಮೆರವಣಿಗೆ ನಗರದ ಗಾಂಧಿ ಮೈದಾನದಿಂದ ಪ್ರಾರಂಭಗೊಂಡು ಹಳೆ ಪಿ.ಬಿ. ರಸ್ತೆ, ಗಾಂಧಿ ವೃತ್ತ, ಮುಖ್ಯ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ದೇವಸ್ಥಾನ ರಸ್ತೆ, ಶಿಬಾರ ವೃತ್ತ, ದರ್ಗಾ ಮುಂಭಾಗದ ರಸ್ತೆ ಮುಖಾಂತರ ಸಂಚರಿಸಿ ತದನಂತರ ರಾಜನಹಳ್ಳಿ ಬಳಿ ಇರುವ ಸೇತುವೆಯಲ್ಲಿ ಗಣೇಶ ವಿಸರ್ಜನೆ ಮಾಡಿದರು.

ತುಂಗಭದ್ರಾ ನದಿಯ ದಂಡೆಯಲ್ಲಿ ಶ್ರೀ ವಿನಾಯಕನಿಗೆ ಪಂಡಿತ ಚಿದಂಬರ ಜೋಯಿಸರು ಮತ್ತು ಲಕ್ಷ್ಮೀ ಕಾಂತ ಜೋಯಿಸರು ವಿಶೇಷ ಪೂಜೆ, ಅಲಂಕಾರ ಮಹಾಮಂಗಳಾರತಿ ನೆರವೇರಿಸಿದ ನಂತರ ತುಂಗಭದ್ರಾ ನದಿಯಲ್ಲಿ ಗಣೇಶನನ್ನು ವಿಸರ್ಜನೆ ಮಾಡಲಾಯಿತು.

ಮೆರವಣಿಗೆಯಲ್ಲಿ ಉತ್ಸವ ಸಮಿತಿಯ ಅಧ್ಯಕ್ಷ ಕೆ.ಜಿ. ಸಿದ್ದೇಶ್, ಕಾಂಗ್ರೆಸ್ ಮುಖಂಡ ಜಿ.ಬಿ. ವಿನಯಕುಮಾರ್, ತಾ.ಪಂ. ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಮಂಜುನಾಥ್ ಪಾಟೀಲ್, ಕೆ.ಪಿ. ಗಂಗಾಧರ, ನಗರಸಭೆ ಸದಸ್ಯ ಎಂ. ಎಸ್. ಬಾಬುಲಾಲ್, ದಾದಾಪೀರ್ ಭಾನುವಳ್ಳಿ, ನಜ್ರುಲ್, ವಾಸುದೇವ ಕುಂಬಳೂರು, ಸಂತೋಷ ನೋಟದರ್, ಮಲ್ಲೇಶ್ ಕಮಲಾಪುರ, ತಿಪ್ಪೇಸ್ವಾಮಿ, ಪ್ರವೀಣ್, ನಿಧಿ ನಾರಾಯಣ, ಅರುಣ್ ಕುಮಾರ್, ಭಾಗಮ್ಮ, ನಾಗಮ್ಮ, ಅರುಣ್ ಬೊಂಗಾಳೆ, ಇತರರು ಹಾಜರಿದ್ದರು.

ಸಿಪಿಐ ಸುರೇಶ್ ಸಗರಗಿ, ಪಿಎಸ್‌ಐ ದೇವಾನಂದ್, ಚಿದಾನಂದ, ಪ್ರಸನ್ನ, ಮಲೇಬೆನ್ನೂರು ಪಿಎಸ್‌ಐ ಪ್ರಭು ಕೆಳಗಿನ ಮನೆ, ಎಎಸ್‌ಐ ಶಿವಪ್ಪ, ಪೊಲೀಸ್ ಸಿಬ್ಬಂದಿಗಳಾದ ಶ್ರೀನಿವಾಸ್ ಡಿ.ಟಿ. ರವಿಕುಮಾರ್, ರಾಘವೇಂದ್ರ, ಮಂಜುನಾಥ್, ಮಂಜುನಾಥ್ ಕೆ, ದೇವರಾಜ್ ಇತರರು ಹಾಜರಿದ್ದರು.

# ರೈಲ್ವೆ ನಿಲ್ದಾಣಕ್ಕೆ ಮೆಣಸಿನಾಳ ತಿಮ್ಮನಗೌಡರ ಹೆಸರಿಡಿ

## ಶ್ರೀ ನೊಳಂಬ ವೀರಶೈವ ಲಿಂಗಾಯತ ಸಮ್ಮೇಳನದಲ್ಲಿ ಮಾಜಿ ಶಾಸಕ ಪೂಜಾರ



ರಾಣೇಬೆನ್ನೂರು,ಅ.4- ನಗರದ ಬಿಎಜಿಎಸ್‌ಎಸ್ ಕಾಲೇಜಿನಲ್ಲಿ ಶ್ರೀ ನೊಳಂಬ ವೀರಶೈವ ಲಿಂಗಾಯತ ಸಮಾಜದ ಪ್ರತಿಭಾ ಪುರಸ್ಕಾರ ಹಾಗೂ ತಾಲ್ಲೂಕು ಮಟ್ಟದ ವಾರ್ಷಿಕ ಸಮ್ಮೇಳನ ನಡೆಯಿತು.

ನೊಳಂಬ ಸಮಾಜದ ರಾಜ್ಯಾಧ್ಯಕ್ಷ ಎಸ್. ಆರ್. ಪಾಟೀಲ ಸಮ್ಮೇಳನ ಉದ್ಘಾಟಿಸಿ, ಸಮಾಜದ ಏಳಿಗೆಗೆ ಎಲ್ಲರೂ ಕೈ ಜೋಡಿಸಲು ಕರೆ ನೀಡಿದರು.

ಬಿಎಜಿಎಸ್‌ಎಸ್ ಕಾಲೇಜಿನ ಆಡಳಿತಾಧಿಕಾರಿ ಡಾ. ಆರ್. ಎಂ.ಕುಬೇರಪ್ಪ ಮಾತನಾಡಿ, ಸಮಾಜದ ಸಂಘಟ ನೆಯಿಂದ ಮಾತ್ರ ಏನನ್ನಾದರೂ ಪಡೆಯಲು ಸಾಧ್ಯ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶಾಸಕ ಪ್ರಕಾಶ ಕೋಳಿವಾಡ ಮಾತನಾಡಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಈ ಸಮಾಜದ ವ್ಯಕ್ತಿ ಮೆಣಸಿನಹಾಳ ತಿಮ್ಮನಗೌಡರ ಸಾಹಸಗಳನ್ನು ದೇಶ ಪ್ರೇಮವನ್ನೂ ಮೆಲುಕು ಹಾಕಿದರು.


ಇನ್ನೊಬ್ಬ ಅತಿಥಿ ಮಾಜಿ ಶಾಸಕ ಅರುಣಕುಮಾರ ಪೂಜಾರಿ ಮಾತನಾಡಿ, ಈ ಸಮಾಜ ಸಣ್ಣದಾಗಿದ್ದರೂ ಅದರ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದರು. ರಾಣೇಬೆನ್ನೂರು ರೈಲ್ವೆ ನಿಲ್ದಾಣಕ್ಕೆ ಮೆಣಸಿನಾಳ ತಿಮ್ಮನ ಗೌಡರ ಹೆಸರಿಡಲು ಶಾಸಕರಲ್ಲಿ ಮನವಿ ಮಾಡಿದರು.

ನಂದಿಗುಡಿ ಶ್ರೀಗಳಾದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಆಶೀರ್ವಚನ ನೀಡಿದರು. ವೇದಿಕೆಯಲ್ಲಿ ಸಮಾಜದ ಹಂಗಾಮಿ ಅಧ್ಯಕ್ಷ ಕುಮಾರ ಸ್ವಾಮಿ. ಸಲಹಾ ಸಮಿತಿ ಅಧ್ಯಕ್ಷ ಎಂ. ಎನ್. ಕೆಂಪಗೌಡ್ರು, ಉಪಾಧ್ಯಕ್ಷ ಆರ್. ಜೆ. ಪಾಟೀಲ, ಕಾರ್ಯದರ್ಶಿ ಆನಂದ ದೇವರಮನಿ, ಕೇಂದ್ರ ಸಮಿತಿ ಸದಸ್ಯ ಪ್ರಭು ದೊಡ್ಡಮನಿ ಮುದಿಗೌಡ್ರ, ಗೌರವ ಕಾರ್ಯದರ್ಶಿ ಎಸ್. ಬಿ. ಮೂಲೇರ, ಇನ್ನೂ ಹಲವರು ಭಾಗಿಯಾಗಿದ್ದರು. ಇದೇ ಸಂದರ್ಭದಲ್ಲಿ ಅಗಲಿದ ಮಹಾ ಚೇತನರಾದ ವಿ.ಎನ್. ಶಾಂತನವರ, ಶಿವಮೂರ್ತೆಪ್ಪ ಮಡ್ಲೂರ, ಚನ್ನೇಶ ಉಪನ್ಯಾಸಕರು, ಚನ್ನಬಸಪ್ಪ ಕ್ಯಾತನಕೇರಿ ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.

## ನಾಳೆ ರೈತರ ಸಭೆ

ರಾಣೇಬೆನ್ನೂರು, ಅ.4- ಗೋಲ್ಡನ್ ಹ್ಯಾಚರೀಜ್ (ಚಿಕನ್ ಫ್ಯಾಕ್ಟರಿ)ಗೆ ಸಂಬಂಧಿಸಿದಂತೆ ರೈತರ ಮತ್ತು ಉದ್ಯೋಗಾಕಾಂಕ್ಷಿಗಳ ಸಭೆಯನ್ನು ಇದೇ ದಿನಾಂಕ 7 ರಂದು ಬೆಳಿಗ್ಗೆ 10 ಗಂಟೆಗೆ ಫ್ಯಾಕ್ಟರಿಯ ಆವರಣದಲ್ಲಿ ನಡೆಯಲಿದೆ.

## ದೊಡ್ಡಬಾತಿ ಮಹೇಶ್ವರಪ್ಪ ನಿಧನ



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ಸಿಕ್ಕಣ್ಣೆಪ್ಪರ ದಿ. ರೇವಣಸಿದ್ದಪ್ಪನವರ ಪುತ್ರ ಮಹೇಶ್ವರಪ್ಪ (81) ಅವರು ದಿನಾಂಕ 04.10.2023 ಬುಧವಾರ ರಾತ್ರಿ 9.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಮೂವರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 05.10.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ದೊಡ್ಡಬಾತಿಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

# ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಲು ಶಿಕ್ಷಕರಿಗೂ ಪ್ರತಿಭೆ ಮುಖ್ಯ



**ಮಲೇಬೆನ್ನೂರು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಕೃಷ್ಣಪ್ಪ ಅಭಿಮತ**

ಮಲೇಬೆನ್ನೂರು, ಅ.4- ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಲು ಶಿಕ್ಷಕರಿಗೂ ಪ್ರತಿಭೆ ಇರಬೇಕು. ಮಕ್ಕಳ ನಿಜವಾದ ಪ್ರತಿಭೆ ಗುರುತಿಸುವಿಕೆಯಿಂದ ಅಂತಹ ಮಕ್ಕಳು ದೇಶದ ಆಸ್ತಿಗಳಾಗುತ್ತಾರೆ ಎಂದು ಹರಿಹರ ತಾ. ಕ್ಷೇತ್ರ ಸಮನ್ವಯಾಧಿಕಾರಿ ಹೆಚ್. ಕೃಷ್ಣಪ್ಪ ಹೇಳಿದರು.

ಪಟ್ಟಣದ ಪಿಡಬ್ಲ್ಯೂಡಿ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಳೆದ ವಾರ ಹಮ್ಮಿಕೊಂಡಿದ್ದ ಮಲೇಬೆನ್ನೂರು ಕ್ಲಸ್ಟರ್ ಮಟ್ಟದ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಲ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿರುವ ಸೂಕ್ಷ್ಮ ಪ್ರತಿಭೆಯನ್ನು ಪತ್ತೆ ಹಚ್ಚುವ ಶಕ್ತಿಯನ್ನು ನಮ್ಮ ಶಿಕ್ಷಕರು ಬೆಳೆಸಿಕೊಳ್ಳಬೇಕು. ಮಕ್ಕಳ ಪ್ರತಿಭೆಗೆ ಧಕ್ಕೆ ಬರದಂತೆ ಫಲಿತಾಂಶ ಅಥವಾ ತೀರ್ಪು ನೀಡಬೇಕೆಂದು ಕೃಷ್ಣಪ್ಪ ಅವರು ಶಿಕ್ಷಕರಿಗೆ ಕಿವಿಮಾತು ಹೇಳಿದರು.

ಹರಿಹರ ಸಿಆರ್‌ಪಿ ಎಸ್.ಎನ್. ರೂಪಾ, ಮಲೇಬೆನ್ನೂರು ಸಿಆರ್‌ಪಿ ಕೆ.ಜಿ. ನಂಜುಂಡಪ್ಪ, ಎಸ್‌ಡಿಎಂಸಿ ಸದಸ್ಯರಾದ ಪವನ್ ದೇಶ್ ಪಾಂಡೆ, ಯೋಗೇಶ್ ಮಾತನಾಡಿ, ಪ್ರತಿಭಾ ಕಾರಂಜಿ ಮಕ್ಕಳಿಗೆ ವರದಾನವಾಗಿದೆ ಎಂದರು.

ಈ ವೇಳೆ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಹಾಗೂ ಎಸ್‌ಬಿಕೆಎಂ ಶಾಲೆಯ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪುರಸಭೆ ಸದಸ್ಯರಾದ ಶ್ರೀಮತಿ ಸುಲೋಚನಮ್ಮ ಓ.ಜಿ. ಕುಮಾರ್, ಗೌಡ್ರ ಮಂಜಣ್ಣ, ತಾ. ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷೆ ಶ್ರೀಮತಿ ಸಾಕಮ್ಮ, ಶಿಕ್ಷಣ ಸಂಯೋಜಕ ಹರೀಶ್ ನೋಟಗಾರ್, ಬಿಆರ್‌ಪಿಗಳಾದ ಕೆ. ವೀರಪ್ಪ, ಚನ್ನವೀರಯ್ಯ ಹಿರೇಮಠ್, ಲಯನ್ಸ್ ಶಾಲೆಯ ಮುಖ್ಯಶಿಕ್ಷಕ ಕೆ. ಚಂದ್ರಶೇಖರ್, ಬೀರಲಿಂಗೇಶ್ವರ ಶಾಲೆಯ ಡಿ.ಕೆ. ಕರಿಬಸಪ್ಪ, ಆಶ್ರಯ ಕಾಲೋನಿ ಶಾಲೆಯ ಹೆಚ್. ಶಶಿಕುಮಾರ್, ಶಾಲೆಯ ಎಸ್‌ಡಿಎಂಸಿ ಉಪಾಧ್ಯಕ್ಷ ಶ್ರೀಮತಿ ರೋಜಾ, ಸದಸ್ಯರಾದ ಗೌರಮ್ಮ, ಮಮತಾ, ಜ್ಯೋತಿ, ಮುಖ್ಯ ಶಿಕ್ಷಕ ಎ.ಕೆ. ಕುಮಾರ್ ಸೇರಿದಂತೆ ಇನ್ನೂ ಅನೇಕ ಶಿಕ್ಷಕರು ಭಾಗವಹಿಸಿದ್ದರು.

ಶಿಕ್ಷಕಿ ಸುನೀತಾ ಸ್ವಾಗತಿಸಿದರು. ಶಿಕ್ಷಕಿ ಪ್ರೇಮಾಕುಮಾರಿ ನಿರೂಪಿಸಿದರೆ, ಕೊನೆಯಲ್ಲಿ ತಾ. ಸರ್ಕಾರಿ ನೌಕರರ ಸಂಘದ ನಿರ್ದೇಶಕ ಬಿ.ಹೆಚ್. ಶಿವಕುಮಾರ್ ವಂದಿಸಿದರು.

# ಬರಗಾಲ ಕಾಮಗಾರಿ ವಲಸೆ ಹೋಗದಂತೆ ಮನವಿ



**ರಾಣೇಬೆನ್ನೂರು ತಾಲ್ಲೂಕು**

ರಾಣೇಬೆನ್ನೂರು, ಅ.4- ಮಳೆ ಕೊರತೆಯಿಂದ ತಾಲ್ಲೂಕಿನಲ್ಲಿ ಬರಗಾಲ ಘೋಷಣೆ ಮಾಡಿದ್ದು ನರೇಗಾ ಯೋಜನೆಯಲ್ಲಿ ಎಲ್ಲ ಕಾರ್ಮಿಕರಿಗೂ ಕೆಲಸ ಕೊಡಲಾಗುತ್ತದೆ. ಕಾರಣ ಯಾರೂ ಕೆಲಸ ಹುಡುಕಿಕೊಂಡು ವಲಸೆ ಹೋಗಬಾರದು ಎಂದು ತಾಪಂ ಸಹಾಯಕ ನಿರ್ದೇಶಕ ಪರಶುರಾಮ ಪೂಜಾರ ಹೇಳಿದರು.

ಅವರು ಹನುಮಾಪೂರ ಗ್ರಾಮದ ಪ್ರತಿ ಮನೆಗೂ ತೆರಳಿ ಸರ್ಕಾರದ ಜನೋಪಯೋಗಿ ಕಾರ್ಯಕ್ರಮದ ಮಾಹಿತಿ ನೀಡುತ್ತಿದ್ದರು.

ರೈತರು ಹೊಲಗಳಲ್ಲಿ ಇಂಗುಗುಂಡಿ ಮಾಡಿಕೊಳ್ಳಲು ರೋಜಗಾರ್ ಯೋಜನೆ ಲಭ್ಯವಿದ್ದು ತೋಟಗಾರ ಬೆಳೆಗಳಾದ ವೀಳೆಯದೆಲೆ, ತೆಂಗು, ಬಾಳೆ, ಚಿಕ್ಕು, ಕರಬೇವು ಮುಂತಾದ ಬೆಳೆಗಳಿಗೆ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ನಿರ್ದೇಶಕ ದಿಂಗಾಲೇಶ ಅಂಗೂರ ಹೇಳಿದರು. ಗ್ರಾಪಂ ಸದಸ್ಯೆ ನೀಲಮ್ಮ ಮಾದರ, ಗ್ರಾಪಂ ಕಾರ್ಯದರ್ಶಿ ಮೋಹನ್ ಜಾಡರ ಉಪಸ್ಥಿತರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ತೆಲಂಗಾಣದಲ್ಲಿ ಸಮಕ್ಕ ಸರಕ್ಕ ಬುಡಕಟ್ಟು ವಿ.ವಿ. ಸ್ಥಾಪನೆಗೆ ಒಪ್ಪಿಗೆ**
ನವದೆಹಲಿ : ತೆಲಂಗಾಣದಲ್ಲಿ ಸಮಕ್ಕ ಸರಕ್ಕ ಕೇಂದ್ರ ಬುಡಕಟ್ಟು ವಿಶ್ವವಿದ್ಯಾನಿಲಯ ಸ್ಥಾಪನೆಗಾಗಿ ಕೇಂದ್ರ ವಿಶ್ವವಿದ್ಯಾನಿಲಯ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾಪಕ್ಕೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ತೆಲಂಗಾಣದಲ್ಲಿ ವಿಶ್ವವಿದ್ಯಾನಿಲಯ ಸ್ಥಾಪಿಸುವುದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾನುವಾರ ತಿಳಿಸಿದ್ದರು. ಈ ವಿಶ್ವವಿದ್ಯಾಲಯಕ್ಕೆ ಬುಡಕಟ್ಟು ದೇವತೆಗಳಾದ ಸಮಕ್ಕ ಹಾಗೂ ಸರಕ್ಕ ಹೆಸರಿಡಲಾಗಿದೆ.

**ಆಸ್ಪತ್ರೆ ಮುಖ್ಯಸ್ಥನಿಂದ ಬಲವಂತವಾಗಿ ಶೌಚಾಲಯ ಸ್ವಚ್ಛತೆ**
ಥಾಣೆ : ನಾಂದೇಡ್‌ನ ಸರ್ಕಾರಿ ವೈದ್ಯಕೀಯ ಆಸ್ಪತ್ರೆಯ ಮುಖ್ಯಸ್ಥ ಎಸ್.ಆರ್. ವಕೊಡೆ ಅವರು ಕೊಳಕು ಶೌಚಾಲಯ ಸ್ವಚ್ಛಗೊಳಿಸುವಂತೆ ಮಾಡಿದ್ದ ಶಿವಸೇನೆ ಸಂಸದ ಹೇಮಂತ್ ಪಾಟೀಲ್ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಮಹಾರಾಷ್ಟ್ರದ ಐ.ಎಂ.ಎ. ಘಟಕ ಒತ್ತಾಯಿಸಿದೆ. ಈ ಆಸ್ಪತ್ರೆಯಲ್ಲಿ 48 ಗಂಟೆಗಳಲ್ಲಿ 31 ರೋಗಿಗಳು ಸಾವನ್ನಪ್ಪಿದ್ದರು. ಆದರೆ, ಅವರೆಲ್ಲರೂ ಚಿಂತಾಜನಕ ಸ್ಥಿತಿಯಲ್ಲಿ ಆಸ್ಪತ್ರೆಗೆ ಬಂದಿದ್ದರು, ಸರ್ಕಾರಿ ಆಸ್ಪತ್ರೆಯು ತೃತೀಯ ಹಂತದ್ದಾಗಿದೆ ಎಂದು ಐ.ಎಂ.ಎ. ಹೇಳಿದೆ.

**ಮೊದಲ ತೇಜಸ್ ವಿಮಾನ ವಾಯುಪಡೆಗೆ ಹಸ್ತಾಂತರ**
ಬೆಂಗಳೂರು : ಹಿಂದೂಸ್ತಾನ್ ಏರೋನಾಟಿಕ್ಸ್ ಸಂಸ್ಥೆಯು ಮೊದಲ ಎಲ್.ಸಿ.ಎ. ತೇಜಸ್ ವಿಮಾನವನ್ನು ವಾಯುಪಡೆಗೆ ಹಸ್ತಾಂತರಿಸಿದೆ. ಈ ವಿಮಾನವು ತರಬೇತಿಗೆ ಅಗತ್ಯ ವ್ಯವಸ್ಥೆ ಹೊಂದಿದೆ ಹಾಗೂ ಅಗತ್ಯವಾದಲ್ಲಿ ಸಮರದಲ್ಲೂ ಬಳಸಿಕೊಳ್ಳಬಹುದು ಎಂದು ಏರೋನಾಟಿಕ್ಸ್ ತಿಳಿಸಿದೆ. ಎಲ್.ಸಿ.ಎ. ತೇಜಸ್ ಹಗುರ ವಿಮಾನವಾಗಿದ್ದು, 4.5 ಪೀಳಿಗೆಯ ಬಹು ಉಪಯೋಗಿ ದರ್ಜೆಯದ್ದಾಗಿದೆ.

**ಅಬಕಾರಿ ನೀತಿ ಪ್ರಕರಣದಲ್ಲಿ ಸಂಸದ ಸಂಜಯ್ ಸಿಂಗ್ ಬಂಧನ**
ನವದೆಹಲಿ : ಆಮ್ ಆದ್ಮಿ ಪಾರ್ಟಿಯ ರಾಜ್ಯಸಭಾ ಸಂಜಯ್ ಸಿಂಗ್ ಅವರನ್ನು ಅಬಕಾರಿ ನೀತಿ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಬಂಧಿಸಿದೆ. ಅಬಕಾರಿ ಹಗರಣದ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕ್ರಮ ತೆಗೆದುಕೊಳ್ಳಲಾಗಿದೆ. ಸಿಂಗ್ ಬಂಧನ ರಾಜಕೀಯ ಪ್ರೇರಿತ ಎಂದು ಆಮ್ ಆದ್ಮಿ ಪಾರ್ಟಿ ಆರೋಪಿಸಿದೆ.

**ಭದ್ರತಾ ಪಡೆಗಳ ಗುಂಡಿಗೆ ಇಬ್ಬರು ಉಗ್ರರು ಹತ**
ಶ್ರೀನಗರ : ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಗುಂಡಿನ ಚಕಮಕಿಯಲ್ಲಿ ಇಬ್ಬರು ಹಿಜ್ಬುಲ್ ಮುಜಾಹಿದ್ದೀನ್ ಉಗ್ರರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

**ನ್ಯೂಸ್‌ಕ್ಲಿಕ್ ಸ್ಥಾಪಕ ಏಳು ದಿನ ಪೊಲೀಸ್ ಕಸ್ಟಡಿಗೆ**
ನವದೆಹಲಿ : ಉಗ್ರವಾದ ವಿರೋಧಿ ಕಾಯ್ದೆಯಾದ ಯು.ಎ.ಪಿ.ಎ. ಅನ್ವಯ ದಾಖಲಾದ ಪ್ರಕರಣದಲ್ಲಿ ಬಂಧಿತ ನ್ಯೂಸ್‌ಕ್ಲಿಕ್ ಸ್ಥಾಪಕ ಪ್ರಬೀರ್ ಪುರಕಾಯಸ್ಥ ಹಾಗೂ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನು ಏಳು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ವಹಿಸಲಾಗಿದೆ.

**ನಟ ರಣಬೀರ್ ಕಪೂರ್‌ಗೆ ಇ.ಡಿ. ನೋಟಿಸ್**
ನವದೆಹಲಿ : ಛತ್ತೀಸ್‌ಘಡದ ಮಹದೇವ್ ಬೆಟ್ಟಿಂಗ್ ಆಪ್ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಶುಕ್ರವಾರ ವಿಚಾರಣೆಗೆ ಬರುವಂತೆ ಬಾಲಿವುಡ್ ನಟ ರಣಬೀರ್ ಕಪೂರ್‌ಗೆ ಜಾರಿ ನಿರ್ದೇಶನಾಲಯ ಸಮನ್ಸ್ ಕಳಿಸಿದೆ.

**ಲಾಲು, ಪತ್ನಿ, ಪುತ್ರನಿಗೆ ಜಾಮೀನು**
ನವದೆಹಲಿ : ಉದ್ಯೋಗಕ್ಕಾಗಿ ಜಮೀನು ಹಗರಣಕ್ಕೆ ಸಂಬಂಧಿಸಿದಂತೆ ಆರ್.ಜೆ.ಡಿ. ಮುಖ್ಯಸ್ಥ ಲಾಲು ಪ್ರಸಾದ್, ಪತ್ನಿ ರಾಬ್ಡಿ ದೇವಿ ಹಾಗೂ ಅವರ ಮಗ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್‌ಗೆ ದೆಹಲಿ ನ್ಯಾಯಾಲಯ ಜಾಮೀನು ನೀಡಿದೆ. ಲಾಲು ರೈಲ್ವೆ ಸಚಿವರಾಗಿದ್ದ ಸಮಯದಲ್ಲಿ ಉದ್ಯೋಗ ನೀಡಲು ಜಮೀನನ್ನು ಕಡಿಮೆ ಬೆಲೆಗೆ ಖರೀದಿಸಿದ ಹಗರಣ ನಡೆದಿದೆ ಎಂದು ಸಿ.ಬಿ.ಐ. ಪ್ರಕರಣ ದಾಖಲಿಸಿದೆ.

**ಆಮ್ ಆದ್ಮಿ ಪಾರ್ಟಿ ಏಕೆ ಆರೋಪಿಯಾಗಿಲ್ಲ ಎಂದು ಸುಪ್ರೀಂ ಕೋರ್ಟ್ ಪ್ರಶ್ನೆ**
ನವದೆಹಲಿ : ದೆಹಲಿ ಅಬಕಾರಿ ಹಗರಣದಲ್ಲಿ ಫಲಾನುಭವಿಯಾಗಿರುವ ಆಮ್ ಆದ್ಮಿ ಪಾರ್ಟಿಯನ್ನು ಏಕೆ ಆರೋಪಿಯನ್ನಾಗಿ ಮಾಡಿಲ್ಲ ಎಂದು ಜಾರಿ ನಿರ್ದೇಶನಾಲಯಕ್ಕೆ ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

## ನಗರದಲ್ಲಿಂದು ಸೈಕಲ್ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಇಂದು ಸಂಜೆ 5.30 ರಿಂದ 7ರವರೆಗೆ ಗಾಂಧಿ ಜಯಂತಿ, ಬಡವರಿಗೆ ಸೈಕಲ್ ವಿತರಣೆ ಹಾಗೂ 'ಮಾನವತಾವಾದಿ ಮಹಾತ್ಮಗಾಂಧಿ' ವಿಷಯವಾಗಿ ಚಿಂತನೆ ಮತ್ತು ಸಂವಾದ ನಡೆಯಲಿದೆ.

ಚಿಂತಕರು: ಸಾಹಿತಿ ಡಾ. ಎಂ.ಜಿ. ಈಶ್ವರಪ್ಪ, ಮುಖ್ಯ ಅತಿಥಿಗಳಾಗಿ ಬಸವರಾಜ್ ವಡೆಯರ್, ಸಿ.ಎನ್. ಜಯ ಪ್ರಕಾಶ್, ಕೆ.ಪಿ. ಪರಮೇಶ್ವರಪ್ಪ ಉಪಸ್ಥಿತರಿರುವರು. ಡಾ. ಹೆಚ್. ಎನ್. ಮಲ್ಲಿಕಾರ್ಜುನ್ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಭಾಗವಹಿಸುವವರು: ಪ್ರೊ. ಎಂ.ಬಸವರಾಜ್, ಎಸ್. ಗುರು ಮೂರ್ತಿ, ಆರ್.ಆರ್.ಕುಸ ಗೂರು, ಮಲ್ಲಾಬಾದಿ ಬಸ ವರಾಜ್, ಆವರಗೆರೆ ರುದ್ರ ಮುನಿ, ಕಲೀಂ ಭಾಷಾ, ಭಿಕ್ಷಾವರ್ತಿಮಠ್.

# ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಹೆಚ್ಚು ಅವಕಾಶ

### ಹರಪನಹಳ್ಳಿ: 'ಕನ್ನಡ ರತ್ನ' ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶಾಸಕಿ ಎಂ.ಪಿ. ಲತಾ



ಹರಪನಹಳ್ಳಿ, ಅ.4- ದೇಶದಲ್ಲಿಯೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ಭಾಷೆ ಹೆಚ್ಚು ಶ್ರೀಮಂತವಾಗಿದೆ ಎಂದು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆಯಿಂದ ನಿನ್ನೆ ಆಯೋಜಿಸಿದ್ದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಕನ್ನಡ ಭಾಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ 'ಕನ್ನಡ ರತ್ನ' ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ನೆರವೇರಿಸಿ ಅವರು ಮಾತನಾಡಿದರು.

ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಹೆಚ್ಚು ಅವಕಾಶಗಳಿವೆ. ಪಠ್ಯದ ಜೊತೆಗೆ ಕನ್ನಡ ಕಾವ್ಯ, ಕಥೆ, ಕಾದಂಬರಿ ಓದುವ ಹವ್ಯಾಸ ಬೆಳೆಸಿಕೊಳ್ಳಿ. ಪ್ರತಿವರ್ಷ ನವಜ್ಯೋತಿ ಸಾಂಸ್ಕೃತಿಕ ಸಂಸ್ಥೆ 'ಕನ್ನಡ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಿ ವಿದ್ಯಾರ್ಥಿಗಳ ಪ್ರತಿಭೆ ಅರಳಲು ಮಾಡುತ್ತಿರುವ ಕೆಲಸ ಹಾಗೂ ಮಲ್ಲಿಕಾರ್ಜುನ್ ದಂಪತಿ ಅನೇಕ ವರ್ಷಗಳಿಂದ ಸಾಹಿತ್ಯ, ಸಂಗೀತ, ಕಲೆ, ನೃತ್ಯ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಮಾಜ ಸೇವೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಎಸ್.ಯು.ಜೆ.ಎಂ. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್. ಮಲ್ಲಿಕಾರ್ಜುನ್ ಮಾತನಾಡಿ, ವಿದ್ಯಾರ್ಥಿಗಳು ಕನ್ನಡ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಉದ್ಯೋಗ ಪಡೆದು ಸಮಾಜ ಸೇವೆ ಮಾಡಬೇಕು. ಜಗತ್ತಿನಲ್ಲಿಯೇ ಸರಳ ಮತ್ತು ಸುಂದರವಾದ ಭಾಷೆ ಮತ್ತೊಂದಿಲ್ಲ. ವಿದ್ಯಾರ್ಥಿಗಳು ಕನ್ನಡ ಭಾಷೆ ಉಳಿಸಿ, ಬೆಳೆಸುವ ಜವಾಬ್ದಾರಿ ನಿಮ್ಮದಾಗಿದೆ.

ತಂದೆ-ತಾಯಿ, ಗುರುಗಳಿಗೆ ವಿಧೇಯರಾಗಿ ನಡೆದುಕೊಳ್ಳಬೇಕು. ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆಯುವುದರ ಜೊತೆಗೆ ಮುಖ್ಯವಾಗಿ ಅತ್ಯುತ್ತಮ ಗುಣಗಳೊಂದಿಗೆ ಉತ್ತಮ ವ್ಯಕ್ತಿ ಎಂದು ಬದುಕಿನಲ್ಲಿ ರ್‍ಯಾಂಕ್ ಪಡೆಯಬೇಕು ಎಂದರು.

ಪುಷ್ಪಾ ದಿವಾಕರ್, ಪ್ರಾಚಾರ್ಯರಾದ ಕೆ. ಶಶಿಧರ್, ವಕೀಲರ ಸಂಘದ ಅಧ್ಯಕ್ಷ ಮತ್ತಿಹಳ್ಳಿ ಅಜ್ಜಣ್ಣ, ಡಾ. ಸೀಮಾ ಅಧಿಕಾರ್, ಮುಖ್ಯಶಿಕ್ಷಕ ಸುರೇಶ್ ಅಂಗಡಿ, ಸಮಾಜ ಸೇವಕರಾದ ಎಚ್.ಟಿ.ವನಜಾಕ್ಷಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಡಾ. ಎಸ್.ಎನ್. ಮಹೇಶ್, ನಾಗಲಿಂಗಪ್ಪ ಬಣಕಾರ್, ಗುತ್ತಿಗೆದಾರ ಆರ್. ಲೋಕೇಶ್, ವರ್ತಕ ಉತ್ತಮ್ ಚಂದ್ ಜೈನ್, ಮಹಾವೀರ ಭಂಡಾರಿ, ಶಿಕ್ಷಕರಾದ ಶೋಭಾ ಆರ್. ಹುಲ್ಲುಮನಿ, ವಕೀಲರಾದ ಮನೋಜ್ ತಳವಾರ್, ಸಾಯಿ ಮೋಟರ್ಸ್ ಚಂದ್ರು, ಹೆಚ್.ಸಣ್ಣಪ್ಪ ಜೈನ್, ಗುತ್ತಿಗೆದಾರ ಡಿ.ಮಹಮ್ಮದ್ ಯೂಸೂಫ್, ಪುರಸಭಾ ಮಾಜಿ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಿ.ಕೆ.ಪ್ರಕಾಶ್, ಪುರಸಭಾ ಸದಸ್ಯರಾದ ಟಿ.ವೆಂಕಟೇಶ್, ಪೈಲ್ವಾನ್ ಗಣೇಶ, ಲಾರಿ ದಾದಾಪೀರ್, ಆರ್ಯವೈಶ್ಯ ಸಮಾಜದ ಅಧ್ಯಕ್ಷ ಮುದುಗಲ್ ನಾಗರಾಜ ಶೆಟ್ಟಿ ಪ್ರಶಸ್ತಿ ಪ್ರದಾನ ಮಾಡಿದರು. ಸಂಸ್ಥೆಯ ಸಪ್ನ ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಿದ್ದರು.

ಲಿಕ್ವಿಡ್ ತಂಡದ ಚನ್ನವೀರ ಎಂ.ಎಂ. ನೃತ್ಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಪಿಯುಸಿಯಲ್ಲಿ ರ್‍ಯಾಂಕ್ ಪಡೆದ ಕುಶ್‌ನಾಯ್ಕ ಜಿ.ಎಲ್, ಎಂ.ಮಲ್ಲಮ್ಮ, ದಡ್ಡಿ ಕರಿಬಸಮ್ಮ, ಕೆ. ಕೃಷ್ಣ, ಎ.ನಿಸರ್ಗ ಇವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಎಸ್. ಮಕ್ಬೂಲ್ ಬಾಷಾ, ಕೊಟ್ರಸ್ವಾಮಿ, ಗಿರೀಶ್ ಕಾರ್ಯಕ್ರಮ ನಿರ್ವಹಿಸಿದರು.

# ನಾಳೆ ಬೆಳ್ಳಿ ಇಟ್ಟಿಗೆ ಸಮರ್ಪಣೆ : ಹಿಂದೂ ಯುವಕರಿಂದ ಬೈಕ್ ರ್‍ಯಾಲಿ



ದಾವಣಗೆರೆ, ಅ. 4- ನಾಡಿದ್ದು ದಿನಾಂಕ 6 ರಂದು ನಗರದಲ್ಲಿ ನಡೆಯುವ ಶ್ರೀರಾಮ ಮಂದಿರಕ್ಕೆ ಬೆಳ್ಳಿ ಇಟ್ಟಿಗೆ ಸಮರ್ಪಿಸುವ ಸಮಾರಂಭದ ಭಾಗವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಹಿನ್ನೆಲೆಯಲ್ಲಿ ಜಿಲ್ಲೆಯ ಹಿಂದೂ ಕಾರ್ಯಕರ್ತರಿಂದ ಬೈಕ್ ರಾ ್ಯಲಿಯನ್ನು ಇಂದು ನಗರದಲ್ಲಿ ನಡೆಸಲಾಯಿತು.

ಇದೇ ವೇಳೆ ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡಿ, ನಾಡಿದ್ದು ದಿನಾಂಕ 6 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಅಭಿನವ ರೇಣುಕಾ ಮಂದಿರದಲ್ಲಿ ಬೆಳ್ಳಿ ಇಟ್ಟಿಗೆ ಸಮರ್ಪಣಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಮಾತನಾಡಿ, 1990 ರ ಅಕ್ಟೋಬರ್ 6 ರಂದು ದಾವಣಗೆರೆಗೆ ಶ್ರೀರಾಮ ಜ್ಯೋತಿ ರಥಯಾತ್ರೆ ಬಂದಾಗ ಕೆಲ ಕಿಡಿಗೇಡಿಗಳಿಂದ ಕೋಮು ಗಲಭೆ ನಡೆದು, ಗೋಲಿಬಾರ್‌ನಲ್ಲಿ 8 ಜನ ರಾಮಭಕ್ತರು ಹುತಾತ್ಮರಾದರು. 70 ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು ಎಂದರು.

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಅವರ ಆಸೆಯಾಗಿತ್ತು. 33 ವರ್ಷಗಳ ನಂತರದ ಆಸೆ ನೇರವೇರುತ್ತಿದ್ದು, ಅವರ ಸ್ಮರಣಾರ್ಥ ಅವರ ಹೆಸರುಗಳು, ಶ್ರೀರಾಮ ಮಂದಿರ ಹಾಗೂ ಶ್ರೀರಾಮ ಚಿತ್ರವನ್ನು ಬೆಳ್ಳಿ ಇಟ್ಟಿಗೆ ಮೇಲೆ ಕೆತ್ತಿಸಲಾಗಿದೆ. ಈ ಬೆಳ್ಳಿ ಇಟ್ಟಿಗೆಯನ್ನು ಉಡುಪಿಯ ಪೇಜಾವರ ಸ್ವಾಮಿಗಳ ಮುಖಾಂತರ ಶ್ರೀರಾಮ ಮಂದಿರಕ್ಕೆ ಕೊಂಡೊಯ್ಯಲಾಗುವುದು ಎಂದು ಹೇಳಿದರು.

ಬೇತೂರು ರಸ್ತೆಯ ವೆಂಕಟೇಶ್ವರ ವೃತ್ತದಿಂದ ಆರಂಭವಾದ ಬೈಕ್ ರ್‍ಯಾಲಿ ಬಂಬೂ ಬಜಾರ್, ವಿಠಲ ಮಂದಿರ, ಕೆ.ಆರ್. ರಸ್ತೆ, ಮಂಡಿಪೇಟೆ, ಗಡಿಯಾರ ಕಂಬ, ಬಿ.ಎಸ್. ಚನ್ನಬಸಪ್ಪ ಬಟ್ಟೆ ಅಂಗಡಿ, ಹಗೇದಿಬ್ಬ ವೃತ್ತ, ದುರ್ಗಾಂಬಿಕ ದೇವಸ್ಥಾನ, ವೀರಮದಕರಿ ನಾಯಕ ವೃತ್ತ, ವೀರರಾಣಿ ಕಿತ್ತೂರು ಚನ್ನಮ್ಮ ವೃತ್ತದ ಮೂಲಕ ರೇಣುಕಾ ಮಂದಿರದ ಆವರಣದಲ್ಲಿ ಸಮಾಪನಗೊಂಡಿತು.

ಈ ಸಂದರ್ಭದಲ್ಲಿ ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮುಖಂಡರಾದ ಟಿಂಕರ್ ಮಂಜಣ್ಣ, ಕಿಶೋರ್ ಕುಮಾರ್, ಬೇತೂರು ಬಸವರಾಜ್, ರಮೇಶ್ ನಾಯಕ್, ಕುಮಾರ್, ಹೆಚ್.ಬಿ. ನವೀನ್, ಅಮರ್, ಗೌತಮ್ ಜೈನ್, ಪಿ.ಸಿ. ಶ್ರೀನಿವಾಸ್ ಮತ್ತಿತರರು ಪಾಲ್ಗೊಂಡಿದ್ದರು.

# ಅ.7ರಂದು ಜಿಲ್ಲೆಯಲ್ಲಿ ಬರ ಅಧ್ಯಯನ

(1ನೇ ಪುಟದಿಂದ) ವಿವರ ಪಡೆದು ಜಿಲ್ಲೆಗಳಿಗೆ ತೆರಳಲಿವೆ.

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಜಿತ್ ಕುಮಾರ್ ಸಾಹು ಅವರ ನೇತೃತ್ವದ ಮೊದಲ ತಂಡದಲ್ಲಿ ಎಣ್ಣೆ ಬೀಜಗಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾದ ಡಾ. ಜೆ. ಪೊನ್ನುಸ್ವಾಮಿ, ವೆಚ್ಚ ವ್ಯವಹಾರಗಳ ಇಲಾಖೆಯ ಸಹಾಯಕ ನಿರ್ದೇಶಕ ಮಹೇಂದ್ರ ಚಂಡೇಲಿಯ, ನೀತಿ ಆಯೋಗದ ಸಂಶೋಧನಾಧಿಕಾರಿ ಶಿವಚರಣ್ ಮೀನಾ, ರಾಜ್ಯ ಕೃಷಿ ಆಯುಕ್ತ ಎಸ್. ಪಾಟೀಲ್ ಅವರಿದ್ದಾರೆ. ಈ ತಂಡವು ನಾಳೆ ಬೆಳಗಾವಿಗೆ ತೆರಳಿದೆ.

ಅಕ್ಟೋಬರ್ 6 ರಂದು ಬೆಳಗಾವಿ ಹಾಗೂ ವಿಜಾಪುರ ಜಿಲ್ಲೆಗಳಲ್ಲಿ, ಅಕ್ಟೋಬರ್ 7 ರಂದು ಬಾಗ ಲಕೋಟೆ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಬರ ಪರಿಶೀ ಲನೆ ನಡೆಸಿ ಅಕ್ಟೋಬರ್ 8 ರಂದು ಬೆಂಗಳೂರಿಗೆ ಮರಳಲಿದೆ.

ಕೇಂದ್ರ ಕುಡಿಯುವ ನೀರು ಹಾಗು ಸ್ವಚ್ಛತಾ ಸಚಿವಾಲಯದ ಹೆಚ್ಚುವರಿ ಸಲಹೆಗಾರ ಡಿ. ರಾಜಶೇಖರ್ ನೇತೃತ್ವದ ಎರಡನೇ ತಂಡದಲ್ಲಿ ಪಶುಸಂಗೋಪನೆ ಇಲಾಖೆ ನಿರ್ದೇಶಕ ಆರ್ ಥಾಕರೆ, ಗ್ರಾಮೀಣಾಭಿವೃದ್ಧಿ ಇಲಾಖೆಯ ಸಹಾಯಕ ಆಯುಕ್ತ ಮೋತಿರಾಂ, ರಾಜ್ಯದ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರದ ನಿರ್ದೇಶಕ ಕರೀಗೌಡ ಅವರನ್ನು ಒಳಗೊಂಡಿದೆ.

ಈ ತಂಡವು ಗದಗ, ಕೊಪ್ಪಳ, ಬಳ್ಳಾರಿ, ವಿಜಯ ನಗರ ಜಿಲ್ಲಾ ಪ್ರವಾಸದಲ್ಲಿ ಬರ ಅಧ್ಯಯನ ಮಾಡಲಿದೆ. ನಾಳೆ ಬೆಂಗಳೂರಿನಿಂದ ಹುಬ್ಬಳಿಗೆ ತೆರಳಲಿದ್ದು, ಅಕ್ಟೋಬರ್ 6 ರಂದು ಗದಗ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ, ಅಕ್ಟೋಬರ್ 7 ರಂದು ವಿಜಯನಗರ, ಬಳ್ಳಾರಿ ಜಿಲ್ಲೆಗಳ ಬರ ಅಧ್ಯಯನ ಕೈಗೊಂಡು ಅಕ್ಟೋಬರ್ 8 ರಂದು ಬೆಂಗಳೂರಿಗೆ ವಾಪಾಸ್ಸಾಗಲಿದೆ.

ಕೇಂದ್ರ ಜಲ ಆಯೋಗದ ನಿರ್ದೇಶಕರಾದ ಅಶೋಕ್ ಕುಮಾರ್ ಇವರ ನೇತೃತ್ವದ ಮೂರನೇ ತಂಡದಲ್ಲಿ ಎಂ.ಎನ್.ಸಿ.ಎಫ್.ಸಿ.ಯ ಉಪ ನಿರ್ದೇಶಕರಾದ ಕರಣ್ ಚೌಧರಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ಕಾರ್ಯದರ್ಶಿ ಸಂಗೀತ್ ಕುಮಾರ್ ಹಾಗೂ ರಾಜ್ಯದ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರದ ಹಿರಿಯ ಸಲಹೆಗಾರ ಡಾ. ಶ್ರೀನಿವಾಸ ರೆಡ್ಡಿ ಇರಲಿದ್ದಾರೆ.

ಈ ತಂಡವು ಅಕ್ಟೋಬರ್ 6 ರಂದು ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳ ಪ್ರವಾಸ ನಡೆಸಿ, ಚಿತ್ರದುರ್ಗದಲ್ಲಿ ವಾಸ್ತವ್ಯ ಹೂಡಲಿದೆ. ಅಕ್ಟೋಬರ್ 7 ರಂದು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲಾ ಪ್ರವಾಸ ನಡೆಸಿ ಬೆಂಗಳೂರಿಗೆ ಮರಳಲಿದೆ. ಅಕ್ಟೋಬರ್ 8 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬರ ಪರಿಸ್ಥಿತಿ ಅಧ್ಯಯನ ಕೈಗೊಳ್ಳಲಿದೆ.

ಮೂರೂ ತಂಡಗಳು ಅಕ್ಟೋಬರ್ 8 ರಂದು ಬೆಂಗಳೂರಿಗೆ ಆಗಮಿಸಿ ಅಕ್ಟೋಬರ್ 9 ರಂದು ಬೆಂಗಳೂರಿನಲ್ಲಿ ಮತ್ತೊಮ್ಮೆ ಸ್ಥಳೀಯ ಅಧಿಕಾರಿಗಳಿಂದ ಸಂಕ್ಷಿಪ್ತ ವಿವರಣೆ ಪಡೆದು ದೆಹಲಿಗೆ ಮರಳಲಿವೆ.

# ಮಲೇಬೆನ್ನೂರಿನಲ್ಲಿ 'ಪಿಂಚಣಿ' ದಿನ ಆಚರಣೆ



ಮಲೇಬೆನ್ನೂರು, ಅ. 4- ಇಲ್ಲಿನ ನಾಡಕಛೇರಿ ವತಿಯಿಂದ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಮಂಗಳವಾರ 'ಪಿಂಚಣಿ' ದಿನ ಕಾರ್ಯಕ್ರಮ ಆಚರಿಸಲಾಯಿತು. ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಗಳಿಗೆ ಸಂಬಂಧಿಸಿದಂತೆ ಪಿಂಚಣಿದಾರರು ತಮ್ಮ ಕುಂದು-ಕೊರತೆಗಳನ್ನು ನೋಂದಾಯಿಸಲು ಮತ್ತು ಪಿಂಚಣಿ ಕುರಿತಾದ ಮಾಹಿತಿ ಪಡೆಯಲು ಹಾಗೂ ಹಂಚಿಕೊಳ್ಳಲು ಪರಸ್ಪರ ಭೇಟಿಯಾಗುವ ಉದ್ದೇಶದಿಂದ ಕಂದಾಯ ಇಲಾಖೆ ಪ್ರತಿ ತ್ರೈಮಾಸಿಕದಲ್ಲಿ ಒಂದು ಬಾರಿ 'ಪಿಂಚಣಿ' ದಿನವನ್ನು ನಗರ, ಪಟ್ಟಣ ಹಾಗೂ ಗ್ರಾ.ಪಂ. ಮಟ್ಟದಲ್ಲಿ ಆಯೋಜಿಸಲು ತಿಳಿಸಿದೆ ಎಂದು ಉಪ ತಹಶೀಲ್ದಾರ್ ಆರ್. ರವಿ ತಿಳಿಸಿದರು.

ಈ ವೇಳೆ ಫಲಾನುಭವಿಗಳಿಗೆ 'ಪಿಂಚಣಿ' ಆದೇಶ ಪ್ರತಿಗಳನ್ನು ವಿತರಿಸಲಾಯಿತು. ಪುರಸಭೆ ಮುಖ್ಯಾಧಿ ಕಾರಿ ಎ. ಸುರೇಶ್, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಷಾ ಅಬ್ರಾರ್, ಬೆಣ್ಣೆಹಳ್ಳಿ ಸಿದ್ದೇಶ್, ದಾದಾಪೀರ್, ನಯಾಜ್, ಸಾಬೀರ್ ಅಲಿ, ಎಂ.ಬಿ. ರುಸ್ತುಂ, ಟಿ. ಹನುಮಂತಪ್ಪ, ಕೆ.ಪಿ. ಗಂಗಾಧರ್, ಬಿ. ಸುರೇಶ್, ಯುಸೂಫ್, ಜಿಗಳೇರ ಹಾಲೇಶಪ್ಪ, ಎ. ಆರೀಫ್ ಅಲಿ, ಓ.ಜಿ. ಕುಮಾರ್ ಮತ್ತು ರೈತ ಮುಖಂಡ ಮುದೇಗೌಡ್ರ ತಿಪ್ಪೇಶ್, ದೇವಸ್ಥಾನ ಕಮಿಟಿಯ ಕೆ.ಜಿ. ಪರಮೇಶ್ವರಪ್ಪ, ಅಂಗವಿಕಲರ ಸಂಘದ ಪೂಜಾರ್ ಗಂಗಾಧರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ನಗರದಲ್ಲಿ ಇಂದು ಮಹಿಳೆಯರಿಗಾಗಿ ಕಾನೂನು ಜಾಗೃತಿ ವಿಚಾರ ಸಂಕಿರಣ

ದಾವಣಗೆರೆ, ಅ.4- ಕರ್ನಾಟಕ ದಲಿತ ಸಂಘರ್ಷ ಸಮಿತಿ (ಸಾಮಾಜಿಕ ನ್ಯಾಯಕ್ಕಾಗಿ) ವತಿಯಿಂದ ಮಹಿಳೆಯರಿಗಾಗಿ ಕಾನೂನು ಜಾಗೃತಿ, ವಿಚಾರ ಸಂಕಿರಣ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭವನ್ನು ನಾಳೆ ದಿನಾಂಕ 5ರ ಗುರುವಾರ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಜಿಲ್ಲಾಧ್ಯಕ್ಷ ಎಸ್.ವಿ. ಜಿಗಳಿ ಹಾಲೇಶ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ವಿದ್ಯಾರ್ಥಿನಿಯರು ಹಾಗೂ ಮಹಿಳೆಯರಲ್ಲಿ ಕಾನೂನಿನ ಜಾಗೃತಿ ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮವನ್ನು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಸಂಘಟನೆಯ ರಾಜ್ಯಾಧ್ಯಕ್ಷ ಡಾ.ಸಿ.ಎಸ್. ರಘು, ಶ್ರೀ ಷಡಕ್ಷರಿಮುನಿ ಸ್ವಾಮೀಜಿ ಉದ್ಘಾಟಿಸಲಿದ್ದಾರೆ.

ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣನವರ್, ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್, ಎಸ್ಪಿ ಉಮಾ ಪ್ರಶಾಂತ್, ಜಿಪಂ ಸಿಇಒ ಸುರೇಶ್ ಬಿ. ಇಟ್ನಾಳ್, ದಾವಿವಿ ಕುಲಪತಿ ಡಾ.ಬಿ.ಡಿ. ಕುಂಬಾರ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ.ಏಕಾಂತಪ್ಪ ಹಾಗುಇತರರು ಆಗಮಿಸಲಿದ್ದಾರೆ ಎಂದರು.

ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಹೆಚ್.ಸಿ. ಸಿದ್ದೇಶ್ ಬಾತಿ, ಪರಮೇಶ್ ಪುರದಾಳ್, ಹೆಚ್.ಮಂಜುನಾಥ್ ಹಲೇ ಕುಂದುವಾಡ, ಹೆಚ್.ಮಂಜುನಾಥ್ ಇಂದ್ರನಗರ, ಹೆಚ್. ಹನುಮಂತ ಶಾಮನೂರು, ನಾಗರಾಜ್ ಪುಟಗನಾಳ್, ಬಿ. ನಿಂಗಪ್ಪ ಹಳೇ ಚಿಕ್ಕನಹಳ್ಳಿ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಬಿಜೆಪಿ ಸರ್ಕಾರದಲ್ಲಿ 7 ಸಾವಿರ ರೌಡಿ ಶೀಟರ್‌ಗಳಿಗೆ ಕ್ಲೀನ್‌ಚಿಟ್

**ಡಿಕೆಶಿ ಆರೋಪ**

ಬೆಂಗಳೂರು, ಅ.4 - ಏಳು ಸಾವಿರಕ್ಕೂ ಹೆಚ್ಚು ರೌಡಿ ಶೀಟರ್‌ಗಳಿಗೆ ಬಿಜೆಪಿ ಸರ್ಕಾರ ಕ್ಲೀನ್ ಚಿಟ್ ನೀಡಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಗುರುತರ ಆರೋಪಿಸಿದ್ದಾರೆ. ಶಿವಮೊಗ್ಗ ಕೋಮುಗಲಭೆ ಹಾಗೂ ಹುಬ್ಬಳ್ಳಿ ಪ್ರಕರಣವನ್ನು ಮುಂದಿಟ್ಟುಕೊಂಡು ಮಾತನಾಡಿದ ಶಿವಕುಮಾರ್ ಬಿಜೆಪಿ ಆಡಳಿತದಲ್ಲಿ ಮಾಡಬಾರದ್ದನ್ನು ಮಾಡಿ ನಮಗೆ ಬುದ್ಧಿವಾದ ಹೇಳಲು ಹೊರಟಿದ್ದಾರೆ.

ಬಿಜೆಪಿ ಸರ್ಕಾರ ಕೋಮು ಘಟನೆಗೆ ಸಂಬಧಪಟ್ಟ ಸಾವಿರಾರು ಪ್ರಕರಣಗಳನ್ನು ಕೈಬಿಟ್ಟಿದೆ. ಜತೆಗೆ ಸಾವಿರಾರು ರೌಡಿ ಶೀಟರ್‌ಗ ಳನ್ನು ಬೀದಿಗೆ ಬಿಟ್ಟಿದೆ. ಬಿಜೆಪಿಯವರಿಗೆ ತಮ್ಮ ಮನೆ ಹುಳುಕು, ದೋಸೆ ತೂತು ಕಾಣುತ್ತಿಲ್ಲ. ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡದವರು ನಮಗೆ ಪ್ರಶ್ನೆ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು. ಬಿಜೆಪಿಯವರು ಅವರ ಅಧಿಕಾರವಧಿಯಲ್ಲಿ ಏನೇನು ಮಾಡಿದರು ಎಂಬುದು ಜನರಿಗೆ ಗೊತ್ತಿಲ್ಲ ಎಂದು ತಿಳಿದುಕೊಂಡಿದ್ದಾರೆ. ಜನ ಅವರನ್ನು ಎಲ್ಲಿ ಕೂರಿಸಬೇಕೋ ಅಲ್ಲಿ ಕೂರಿಸಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಯಾವ, ಯಾವ ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಮನವಿ ಮಾಡಿದವರ ಪಟ್ಟಿ ನಮ್ಮ ಬಳಿ ಇದೆ ಎಂದರು.

## ಅರಿಶಿಣ ಬೆಳೆಗಾಗಿ ಕೇಂದ್ರ ಮಂಡಳಿ

(1ನೇ ಪುಟದಿಂದ) ತಿಳಿಸಿರುವ ಕೇಂದ್ರ ಸಚಿವ ಅನುರಾಗ್ ಠಾಕೂರ್, ಈ ಮಂಡಳಿಯು ಅರಿಶಿಣದ ಗುಣಮಟ್ಟ ಹಾಗೂ ಆಹಾರ ಸುರಕ್ಷತೆ ಮಾನದಂಡಗಳಿಗೆ ಉತ್ತೇಜನ ನೀಡಲಿದೆ ಎಂದಿದ್ದಾರೆ.

## ನಿರ್ಗಮನ ಪರೀಕ್ಷೆಗೆ ಸಮಿತಿ

(1ನೇ ಪುಟದಿಂದ) ಪರೀಕ್ಷೆ ನಡೆಸಲು ರಾಜ್ಯಗಳು ಹಾಗೂ ವೈದ್ಯಕೀಯ ಕಾಲೇಜುಗಳು ಮಾಡಿಕೊಂಡಿರುವ ಸಿದ್ಧತೆ ಪರಿಶೀಲನೆಗಾಗಿ ಸಮಿತಿ ರಚಿಸಲಾಗಿದೆ. ಸಮಿತಿ ಎರಡು ವಾರಗಳಲ್ಲಿ ವರದಿ ಸಲ್ಲಿಸಬೇಕೆಂದು ಗಡುವು ನಿಗದಿ ಪಡಿಸಲಾಗಿದೆ.

# ವೃದ್ಧಾಪ್ಯದ ಒಂಟಿತನ ನಿವಾರಣೆಗೊಂದು ಆನ್‌ಲೈನ್ ಅವತಾರ!





ನವದೆಹಲಿ, ಅ. 4 - ಒಂಟಿತನ ಸಮಸ್ಯೆ ತರುತ್ತದೆ. ಅದರಲ್ಲೂ ವೃದ್ಧಾಪ್ಯದಲ್ಲಿನ ಒಂಟಿತನ ಇನ್ನಷ್ಟು ಕಠಿಣ. ವಿಶ್ವದಾದ್ಯಂತ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿರುವಂತೆಯೇ, ಒಂಟಿತನದ ಸಮಸ್ಯೆಯೂ ಉಲ್ಬಣಿಸುತ್ತಿದೆ.

ಒಂಟಿತನ ನಿವಾರಿಸಲು ಮನುಷ್ಯರ ಸೃಷ್ಟಿ ಮಾಡುವಂತಿದ್ದರೆ ಸಮಸ್ಯೆ ಬಗೆಹರಿಯುತ್ತಿತ್ತೇನೋ? ಹಾಗೆ ಮಾಡಲು ನಾವೇನೂ ವಿಶ್ವಾಮಿತ್ರರಲ್ಲ. ಆದರೆ, ವಿಜ್ಞಾನಿಗಳು ಆಧುನಿಕ ವಿಶ್ವಾಮಿತ್ರರಿಗೆ ಕಡಿಮೆ ಏನಿಲ್ಲ.

ಈ ಒಂಟಿತನ ನಿವಾರಣೆಗೆ ಕೃತಕ ಬುದ್ಧಿವಂತಿಕೆಯ ಆನ್‌ಲೈನ್ ಮನುಷ್ಯರ ಮೂಲಕ ಉತ್ತರ ದೊರಕಿಸಿಕೊಡಲು ವಿಜ್ಞಾನಿಗಳು ಚಿಂತನೆಯಲ್ಲಿ ತೊಡಗಿದ್ದಾರೆ.

ಈ ಹಿಂದೆ ರೋಬೋಟ್‌ಗಳು ವೃದ್ಧರಿಗೆ ಸಹಾಯಕವಾಗಬಲ್ಲವೇ ಎಂಬ ಚಿಂತನೆ ಇತ್ತು. ಆದರೆ, ರೋಬೋಟ್‌ಗಳು ದುಬಾರಿ. ಅಲ್ಲದೇ ನಿರ್ದಿಷ್ಟ ಕೆಲಸಕ್ಕೆ ಮಾತ್ರ ಸೂಕ್ತ. ಹೀಗಾಗಿ ಅವುಗಳು ವೃದ್ಧರಲ್ಲಿ ಹೆಚ್ಚು ಜನಪ್ರಿಯವಾಗಲಿಲ್ಲ.

ಕೃತಕ ಬುದ್ಧಿವಂತಿಕೆಯ ಈ ಕಾಲದಲ್ಲಿ, ಆನ್‌ಲೈನ್ ಮೂಲಕ 'ಅವತಾರ'ಗಳನ್ನು ಸೃಷ್ಟಿಸುವುದು ಸುಲಭ. ಪ್ರತಿ ವ್ಯಕ್ತಿಯ ಅಗತ್ಯಗಳಿಗೆ ಅನುಗುಣವಾಗಿ 'ಆನ್‌ಲೈನ್ ಅವತಾರ'ಗಳನ್ನು ರೂಪಿಸಬಹುದು. ಹೀಗಾಗಿ ವರ್ಚ್ಯುಯಲ್ ಮನುಷ್ಯರ ಕಡೆ ಹೆಚ್ಚಿನ ಗಮನ ಹರಿಯುತ್ತಿದೆ.

ವಿಜ್ಞಾನಿಗಳು ಅಂದುಕೊಂಡಂತೆ ನಡೆದಲ್ಲಿ ಅತಿ ಶೀಘ್ರದಲ್ಲೇ ವರ್ಚ್ಯುಯಲ್ ಮನುಷ್ಯರು ವೃದ್ಧರಿಗೆ ಆಪ್ತರಾಗಬಹುದು. ಅವರ ಕಷ್ಟ, ಸುಖಗಳನ್ನು ಹಂಚಿಕೊಳ್ಳಬಲ್ಲರು.

ಏಷಿಯಾ, ಯುರೋಪ್ ಹಾಗೂ ಉತ್ತರ ಅಮೆರಿಕಗಳ ಮುಂದುವರೆದ ದೇಶಗಳಲ್ಲಿ ವೃದ್ಧರ ಸಂಖ್ಯೆ ವೇಗವಾಗಿ ಹೆಚ್ಚಾಗುತ್ತಿದೆ. 2066ರ ವೇಳೆಗೆ ಆಸ್ಟ್ರೇಲಿಯಾದ ಶೇ.20ರಷ್ಟು ಜನರು ವೃದ್ಧರಾಗಿರುತ್ತಾರೆ ಎಂಬ ಅಂದಾಜಿದೆ. ಇದರಿಂದಾಗಿ ದೇಶಗಳಲ್ಲಿ ಕೌಶಲ್ಯ ಹೊಂದಿದವರ ಸಂಖ್ಯೆ ಕುಸಿಯಲಿದೆ. ಇದು ಸಾಮಾಜಿಕ – ಆರ್ಥಿಕ ಸವಾಲುಗಳನ್ನೂ ತರಲಿದೆ.

ಬಹುತೇಕ ವೃದ್ಧರು ವೃದ್ಧಾಶ್ರಮದಲ್ಲೇ ಇದ್ದರೂ, ಮನೆಯಲ್ಲೇ ಇದ್ದರೂ ಸಾಮಾಜಿಕ ಸಂವಾದದಿಂದ ವಂಚಿತರಾಗಬಹುದು ಎಂಬ ಕಳವಳ ಇದೆ. ಇದಕ್ಕಾಗಿ ಕೃತಕ ಬುದ್ಧಿವಂತಿಕೆಯ ವರ್ಚ್ಯುಯಲ್ ಮನುಷ್ಯರು ಒಂಟಿತನ ನಿವಾರಿಸಬಲ್ಲರು ಎಂಬ ವಾದಗಳು ಕೇಳಿ ಬರುತ್ತಿವೆ.

ಕೃತಕ ಬುದ್ಧಿವಂತಿಕೆಯ ಮೂಲಕ ರೂಪಿಸಲಾದ ಮನುಷ್ಯ ಸ್ವರೂಪಿ ಅವತಾರಗಳನ್ನು ಆಗ್ಮೆಂಟೆಡ್ ರಿಯಾಲಿಟಿ ಕನ್ನಡಕಗಳ ಮೂಲಕ ನಿಜ ಜಗತ್ತಿನ ಜೊತೆ ಬೆರೆಸಿ ನೋಡಲು ಸಾಧ್ಯವಾಗಲಿದೆ.

ಕಂಪ್ಯೂಟರ್ ಆಧರಿತ ಅವತಾರಗಳು ಭೌತಿಕ ಜಗತ್ತಿನಲ್ಲೂ ಸುಗಮವಾಗಿ ಬೆರೆಯುವಂತೆ ಮಾಡುವುದು ಹೊಸ ಅವಕಾಶಗಳ ಬಾಗಿಲು ತೆರೆಯಲಿದೆ. ಇದು ನೈಜ ಹಾಗೂ ಕಾಲ್ಪನಿಕ ಜಗತ್ತಿನ ಅಂತರ ಕಡಿಮೆ ಮಾಡಲಿದೆ.

ಈ ಕಂಪ್ಯೂಟರ್ ಅವತಾರಗಳು ನೈಜ ಮನುಷ್ಯರಂತೆ ವರ್ತಿಸಬಲ್ಲವು. ಮನೆಯ ಸದಸ್ಯರ ರೀತಿ ನಡೆದುಕೊಳ್ಳಬಲ್ಲವು. ಇವು ತಮ್ಮ ಸುತ್ತಲಿನ ಪರಿಸರ ಹಾಗೂ ವ್ಯಕ್ತಿಗಳನ್ನು ನೈಜ ವ್ಯಕ್ತಿಗಳ ರೀತಿಯಲ್ಲೇ ಅರ್ಥ ಮಾಡಿಕೊಳ್ಳಬಲ್ಲವು.

ಇತ್ತೀಚಿನ ದಿನಗಳಲ್ಲಿ ಜನರು ದೂರವಾಣಿ ಮೂಲಕ ಆರೋಗ್ಯ ಸೇವೆ ಪಡೆಯುವುದು ಹೆಚ್ಚಾಗುತ್ತಿದೆ. ದುರ್ಗಮ ಪ್ರದೇಶಗಳಲ್ಲಿ ಆರೋಗ್ಯ ಸೇವೆ ಪಡೆಯುವಲ್ಲಿ ಕೃತಕ ಬುದ್ಧಿವಂತಿಕೆ ತಂತ್ರಜ್ಞಾನ ಹೆಚ್ಚಿನ ಪ್ರಮಾಣದಲ್ಲಿ ನೆರವಾಗಲಿದೆ.ಇದರ ಮುಂದುವರೆದ ಸ್ವರೂಪವೇ ಹೋಲೋಪೋರ್ಟೇಷನ್. ಇತ್ತೀಚಿನ ವರ್ಷಗಳಲ್ಲಿ ಹೋಲೋಪೋರ್ಟೇಷನ್ ತಂತ್ರಜ್ಞಾನವು ಆನ್‌ಲೈನ್ ವ್ಯಕ್ತಿಗಳು ಕ್ಷಣಾರ್ಧದಲ್ಲೇ ಒಂದೆಡೆಯಿಂದ ಮತ್ತೊಂದೆಡೆ ಸಾಗಲು ಅವಕಾಶ ನೀಡಿದೆ. ಹೋಲೋಪೋರ್ಟೇಷನ್ ಮೂಲಕ ಮೂರು ಆಯಾಮದ ಮಾದರಿಗಳನ್ನು ಎಲ್ಲಿಗೆ ಬೇಕಾದರೂ ಕಳಿಸಬಹುದು.

ಐದು ವರ್ಷಗಳ ಹಿಂದೆ ಈ ರೀತಿಯ ತಂತ್ರಜ್ಞಾನ ವೈಜ್ಞಾನಿಕ ಕಟ್ಟುಕಥೆ ಎನ್ನಬಹುದಿತ್ತು. ಆದರೆ, ಆಗ್ಮೆಂಟೆಡ್ ರಿಯಾಲಿಟಿ, ಕಂಪ್ಯೂಟರ್ ಗ್ರಾಫಿಕ್ಸ್, ಕೃತಕ ಬುದ್ಧಿವಂತಿಕೆ, ಯಂತ್ರಗಳ ಕಲಿಕೆ ಹಾಗೂ ಕಂಪ್ಯೂಟರ್ ವಿಷನ್ ಮೂಲಕ ಹೋಲೋಪೋರ್ಟೇಷನ್ ಈಗ ವಾಸ್ತವಿಕ ತಂತ್ರಜ್ಞಾನವಾಗಿದೆ.

ಆಗ್ಮೆಂಟೆಡ್ ರಿಯಾಲಿಟಿ ಉಪಕರಣಗಳು ಜನಸಾಮಾನ್ಯರ ಕೈಗೆಟಕುವ ದಿನಗಳು ಬರುತ್ತಿವೆ. ಕಂಪ್ಯೂಟರ್ ಗ್ರಾಫಿಕ್ ಸೂತ್ರಗಳನ್ನು ಕೃತಕ ಬುದ್ಧಿವಂತಿಕೆಯ ಜೊತೆ ಜೋಡಿಸಿದಾಗ ವರ್ಚ್ಯುಯಲ್ ಮನುಷ್ಯರನ್ನು ರೂಪಿಸುವುದು ಸುಲಭವಾಗುತ್ತದೆ.

ಆಧುನಿಕ ಕೃತಕ ಬುದ್ಧಿವಂತಿಕೆ ಹಾಗೂ ಯಂತ್ರಗಳ ಕಲಿಕೆಯ ಮೂಲಕ ಆಧುನಿಕ ಉಪಕರಣಗಳು ಮನುಷ್ಯರಂತೆ ಯೋಚಿಸುವುದು ಸಾಧ್ಯವಾಗಲಿದೆ.

ಈ ಎಲ್ಲ ತಂತ್ರಜ್ಞಾನಗಳು ವೃದ್ಧಾಪ್ಯದಲ್ಲಿರುವವರಿಗೆ ಸಾಕಷ್ಟು ನೆರವಾಗಲಿವೆ. ಮಾನಸಿಕ ಆರೋಗ್ಯ ಸುಧಾರಣೆಗೆ ನೆರವಾಗಲಿವೆ ಹಾಗೂ ಜೀವನದ ಗುಣಮಟ್ಟ ಸುಧಾರಿಸಲಿವೆ ಎಂಬ ನಿರೀಕ್ಷೆ ಇದೆ. ಆದರೆ, ಈ ದಿಸೆಯಲ್ಲಿ ಇನ್ನೂ ಸಾಕಷ್ಟು ಸವಾಲುಗಳಿವೆ. ತಂತ್ರಜ್ಞಾನದಲ್ಲಿ ಸಾಕಷ್ಟು ಸುಧಾರಣೆಯಾಗಬೇಕಿದೆ.

ಆಗ್ಮೆಂಟೆಡ್ ರಿಯಾಲಿಟಿ ಉಪಕರಣಗಳ ಮೂಲಕ ರೂಪಿಸಲಾಗುವ ಚಿತ್ರಗಳು ಇನ್ನೂ ಉತ್ತಮ ಗುಣಮಟ್ಟದವಲ್ಲ. ಈ ರೀತಿಯ ಉಪಕರಣಗಳನ್ನು ಗಂಟೆಗಟ್ಟಲೇ ಬಳಸಿದಾಗ ಆಗುವ ಪರಿಣಾಮಗಳ ಬಗ್ಗೆ ಇನ್ನೂ ಅಧ್ಯಯನ ನಡೆಸಬೇಕಿದೆ.

ಈ ತಂತ್ರಜ್ಞಾನವು ಜನರ ಮಾಹಿತಿಯನ್ನು ನಿರಂತರವಾಗಿ ಸಂಗ್ರಹಿಸುತ್ತದೆ. ಹೀಗಾಗಿ ಖಾಸಗಿತನದ ಪ್ರಶ್ನೆಯೂ ಉದ್ಭವಿಸುತ್ತದೆ.

ಇಷ್ಟಾದರೂ, ವರ್ಚ್ಯುಯಲ್ ಮಾನವರ ಕುರಿತ ತಂತ್ರಜ್ಞಾನ ಸಂಶೋಧನೆಗೆ ಅಪಾರ ಅವಕಾಶ ನೀಡಿದೆ. ಮುಂದಿನ ದಿನಗಳಲ್ಲಿ ವರ್ಚ್ಯುಯಲ್ ಮನುಷ್ಯರನ್ನು ನಿಜವಾದ ಮನುಷ್ಯರು ಯಾವ ರೀತಿ ಸ್ವೀಕರಿಸುತ್ತಾರೆ ಎಂಬ ಪ್ರಶ್ನೆಯೂ ಇದೆ. ಇದಕ್ಕೆ ಕಾಲವೇ ಉತ್ತರಿಸಬೇಕಿದೆ.

# ಏನಿದು ಖಲಿಸ್ತಾನ? ಕೆನಡಾಕ್ಕು ಇದಕ್ಕು ಏನು ಸಂಬಂಧ

ಇತ್ತೀಚೆಗೆ ಭಾರತೀಯ ಮೂಲದ ಕೆನಡಾ ಪ್ರಜೆ ಹರ್ದೀಪ್ ಸಿಂಗ್ ನಿಜ್ಜರ್‌ನನ್ನು ಕೆನಡಾದಲ್ಲಿ ಹತ್ಯೆ ಮಡಾಲಾಗಿದೆ. ಈತ ಕೆನಡಾದಲ್ಲಿ ಸಿಖ್ಖರ ಪ್ರತ್ಯೇಕವಾದಿ ಚಳುವಳಿಯಾದ ಖಲಿಸ್ತಾನದ ಪ್ರಮುಖ ಧ್ವನಿಯಾಗಿದ್ದ. ಹಾಗಾಗಿ ಖಲಿಸ್ತಾನ ಚಳವಳಿಯ ಇತಿಹಾಸವನ್ನೊಮ್ಮೆ ತಿರುವಿ ಹಾಕೋಣ.

ಮುಸ್ಲಿಂ ಲೀಗ್ 1930ರ ಸುಮಾರಿಗೆ ಲಾಹೋರ್ ಸಭೆಯ ನಿರ್ಣಯದಂತೆ ಪಂಜಾಬನ್ನು ಮುಸ್ಲಿಂ ರಾಜ್ಯವೆಂದು ಘೋಷಿಸಬೇಕೆಂದು ಬೇಡಿಕೆಯನ್ನಿಟ್ಟಿತ್ತು. ಅದಕ್ಕುತ್ತರವಾಗಿ ಶಿರೋಮಣಿ ಅಕಾಲಿದಳವು ಹಿಂದೂ ರಾಜ್ಯವಲ್ಲದ ಮತ್ತು ಮುಸ್ಲಿಂ ರಾಜ್ಯವೂ ಅಲ್ಲದ ಪ್ರತ್ಯೇಕವಾದ ಖಲಿಸ್ತಾನದ ಹೆಸರನ್ನು ತೇಲಿಬಿಟ್ಟಿತು.

ಧರ್ಮದ ಆಧಾರದಲ್ಲಿ 1947ರಲ್ಲಿ ದೇಶ ವಿಭಜನೆಯಾದಾಗ ಪಂಜಾಬ್ ಪ್ರಾಂತ್ಯವನ್ನು ಈಸ್ಟ್ ಪಂಜಾಬ್ (ಭಾರತದ ಭಾಗ) ವೆಸ್ಟ್ ಪಂಜಾಬ್ (ಪಾಕಿಸ್ತಾನದ ಭಾಗ)ಗಳನ್ನಾಗಿ ವಿಭಜಿಸಲಾಯಿತು. ಬಹುಪಾಲು ಸಿಖ್ಖರು ಹಾಗೂ ಹಿಂದೂಗಳು ಪಾಕಿಸ್ತಾನದಿಂದ ಭಾರತದ ಪಂಜಾಬ್‌ಗೆ ವಲಸೆ ಬಂದರು. ಹಾಗಾಗಿ ಈಗಿನ ಪಂಜಾಬ್, ಹರಿಯಾಣ ಮತ್ತು ಹಿಮಾಚಲ ಪ್ರದೇಶದಲ್ಲಿ ಸಿಖ್ಖರ ಸಂಖ್ಯೆ ಕ್ರೋಢೀಕೃತಗೊಂಡಿತು.

1955ರ ಸುಮಾರಿಗೆ ಅಕಾಲಿದಳವು ಪಂಜಾಬಿ ಸುಬಾ ಚಳವಳಿಯನ್ನು ಶುರು ಮಾಡಿತು. ಅದರ ಪ್ರಮುಖ ಬೇಡಿಕೆ ಸಾರ್ವಭೌಮ ರಾಜ್ಯ (ಖಲಿಸ್ತಾನ) ಇಲ್ಲವಾದಲ್ಲಿ ಸ್ವಾಯತ್ತ ರಾಜ್ಯ.ಅದಾಗಲೇ ಧರ್ಮದ ಆಧಾರದಿಂದ ದೇಶದ ವಿಭಜನೆಯಾಗಿ ರಕ್ತಪಾತವಾಗಿದ್ದರಿಂದ ಅಂತಹ ಇನ್ನೊಂದು ಕೂಗು ನಮಗೆ ಮಗ್ಗುಲ ಮುಳ್ಳಾಗುತ್ತದೆಂಬ ಅರಿವಾಗಿ ಭಾರತ ಸರ್ಕಾರವು 1966ರಲ್ಲಿ ಪಂಜಾಬ್ ಮರು ಸಂಘಟನೆ ಕಾಯಿದೆಯನ್ನು ಸಂಸತ್ತಿನಲ್ಲಿ ಮಂಡಿಸುತ್ತದೆ. ಅದರಂತೆ ಪಂಜಾಬ್ ಅನ್ನು ಭಾಷೆಯ ಆಧಾರದ ಮೇಲೆ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳನ್ನಾಗಿ ಮತ್ತು ಪಂಜಾಬ್‌ನ ಕೆಲ ಪ್ರದೇಶಗಳನ್ನು ಹಿಮಾಚಲ ಪ್ರದೇಶಕ್ಕೆ ಸೇರಿಸಲಾಗುತ್ತದೆ. ಆದಾಗ್ಯೂ ಚಂಡೀಘಡವನ್ನು ಪಂಜಾಬ್ ಮತ್ತು ಹರಿಯಾಣ ಎರಡೂ ರಾಜ್ಯದ ರಾಜಧಾನಿಯಾಗಿಯೂ ಮತ್ತು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಲಾಗುತ್ತದೆ. ಇದು ಪಂಜಾಬಿಗರ ಅಸಮಾಧಾನಕ್ಕೆ ಕಾರಣವಾಗುತ್ತದೆ.

1940ರಲ್ಲಿ ಖಲಿಸ್ತಾನದ ಕೂಗು ಶುರುವಾಗಿದ್ದರೂ ಅದಕ್ಕೆ ಬಲವಾದ ಇಂಧನ ಒದಗಿಸಿದ್ದು 1980ರ ಸುಮಾರಿನ ಭಾರತ ಸರ್ಕಾರದ ರವಿ-ಬಿಯಾಸ್ ನದಿಯ ನೀರು ಹಂಚಿಕೆ ನಿರ್ಣಯ. ಇದರ ಅನ್ವಯ ಪಂಜಾಬಿಗೆ ಶೇ. 23 ನೀರು ಮತ್ತು ಉಳಿದದ್ದು ಹರಿಯಾಣ ಮತ್ತು ರಾಜಸ್ಥಾನಕ್ಕೆ ಹಂಚಿಕೆಯಾಗಬೇಕೆಂದು ತೀರ್ಮಾನಿಸಲಾಗುತ್ತದೆ. ಇದು ಸಿಖ್ಖರ ಮತ್ತಷ್ಟು ಅಸಮಾಧಾನಕ್ಕೆ ಗುರಿಯಾಗುತ್ತದೆ.

ಈ ಸಮಯದಲ್ಲಿ ಕಾಂಗ್ರೆಸ್ ಮತ್ತು ಅಕಾಲಿ ದಳದ ಮಧ್ಯೆ ಪಂಜಾಬಿನಲ್ಲಿ ರಾಜಕೀಯ ಪೈಪೋಟಿ ಶುರುವಾಗಿರುತ್ತದೆ. ಏಕೆಂದರೆ ಅಕಾಲಿದಳವು ಸಿಖ್ ಸಮುದಾಯದ ಪ್ರತಿನಿಧಿಯಾಗಿ ಗುರುತಿಸಿಕೊಂಡಿರುತ್ತದೆ.

ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆ ಈ ಹೊತ್ತಿನಲ್ಲಿ ಖಲಿಸ್ತಾನ್ ಚಳವಳಿಯನ್ನು ಮುನ್ನಡೆಸಲು ಶುರು ಮಾಡುತ್ತಾನೆ. ಕಾಂಗ್ರೆಸ್ ಇವನನ್ನು ಶುರುವಿನಲ್ಲಿ ಅಕಾಲಿ ದಳದ ವಿರುದ್ಧವಾಗಿ ಉಪಯೋಗಿಸಿ ರುತ್ತದೆ. ಆದರೆ ಖಲಿಸ್ತಾನದ ಕಲ್ಪನೆಯಿಂದ ಉತ್ತೇಜಿತಗೊಂಡಿದ್ದ ಈತ ಭಾರತ ಸರ್ಕಾರದ ವಿರುದ್ಧವಾಗಿಯೇ ತಿರುಗಿ ಬೀಳುತ್ತಾನೆ.

ಬಾಂಗ್ಲಾದೇಶದ ವಿಭಜನೆಗೆ ಪ್ರತೀಕಾರವಾಗಿ ಪಾಕಿಸ್ತಾನದ ಐಎಸ್‌ಐ ಇವನಿಗೆ ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡುತ್ತದೆ. ಪಂಜಾಬ್ ಪ್ರತ್ಯೇಕತೆಯ ಕೂಗು ಹಿಂದೆಂದಿಗಿಂತಲೂ ಜೋರಾಗಿ ಕೇಳಿಸಲಾರಂಭಿಸುತ್ತದೆ ಮತ್ತು ಭಿಂದ್ರನ್‌ವಾಲೆ ಖಲಿಸ್ತಾನ ಬೆಂಬಲಿಗರ ಕಣ್ಣಿಗೆ ಹೀರೋ ಆಗಲಾರಂಭಿಸುತ್ತಾನೆ.

**ಆಪರೇಷನ್ ಬ್ಲೂಸ್ಟಾರ್**

1984 ಜನವರಿ ಮತ್ತು ಜೂನ್ ತಿಂಗಳ ಮಧ್ಯೆ ಪಂಜಾಬ್‌ನಾದ್ಯಂತ ಸಾವಿರಾರು ದಂಗೆಗಳಾಗುತ್ತವೆ. ಕೊಲೆ, ಸುಲಿಗೆ, ದರೋಡೆ, ಕಿಡ್ನಾಪ್‌ನಂತಹ ಪ್ರಸಂಗಗಳು ದಿನಚರಿಗಳಾಗಿರುತ್ತವೆ. ಮತ್ತು ಅದೆಲ್ಲದಕ್ಕೂ ಗುರುದ್ವಾರಗಳು ಆಶ್ರಯತಾಣಗಳಾಗುತ್ತಿವೆ ಎಂದು ಸರ್ಕಾರಕ್ಕೆ ಗೊತ್ತಿದ್ದರೂ ಅವು ಸಿಖ್ಖರ ಪವಿತ್ರ ಸ್ಥಾನಗಳಾಗಿರುವುದರಿಂದ ಗುರುದ್ವಾರಗಳ ಮೇಲೆ ದಾಳಿ ಮಾಡಬಾರದೆಂಬುದಾಗಿ ಸರ್ಕಾರ ನಿರ್ಣಯಿಸುತ್ತದೆ ಮತ್ತು ಈ ಎಲ್ಲಾ ಗಲಭೆಗಳ ಹಿಂದೆ ಭಿಂದ್ರನ್‌ವಾಲೆಯ ಕೈವಾಡ ಇರುತ್ತದೆ. ಈ ಎಲ್ಲಾ ಅವ್ಯವಸ್ಥೆಗಳಿಂದಾಗಿ ಕೇಂದ್ರ ಸರ್ಕಾರ ಪಂಜಾಬಿನ ಮೇಲೆ ಎಮರ್ಜೆನ್ಸಿಯನ್ನು ಹಾಕುತ್ತದೆ.

ಇಂತಹ ಸಮಯದಲ್ಲಿ ಭಿಂದ್ರನ್‌ವಾಲೆ ಅಮೃತಸರದ ಸ್ವರ್ಣಮಂದಿರದಲ್ಲಿ ಆಶ್ರಯ ಪಡೆದಿರುತ್ತಾನೆ. ಪಂಜಾಬ್‌ನಾದ್ಯಂತ ಅಸಂಖ್ಯಾತ ಹಿಂಸಾಚಾರ ಪ್ರಕರಣಗಳಾಗುತ್ತಿರುವುದರಿಂದಲೂ ಮತ್ತು ಭಿಂದ್ರನ್‌ವಾಲೆ ಸ್ವರ್ಣಮಂದಿರವನ್ನು ಶಸ್ತ್ರಾಗಾರವನ್ನಾಗಿ ಮಾಡಿಕೊಳ್ಳುವ ಸಾಧ್ಯತೆಯಿಂದ 'ಆಪರೇಷನ್ ಬ್ಲೂಸ್ಟಾರ್' ಕಾರ್ಯಾಚರಣೆಗೆ ಇಂದಿರಾಗಾಂಧಿ ಸಮ್ಮತಿಯನ್ನು ಕೊಡುತ್ತಾರೆ. ಸರ್ಕಾರಿ ದಾಖಲೆಗಳ ಪ್ರಕಾರ ಈ ಕಾರ್ಯಾಚರಣೆಯಲ್ಲಿ 80ಕ್ಕೂ ಅಧಿಕ ಸೈನಿಕರು ಹುತಾತ್ಮರಾಗುತ್ತಾರೆ. ಆದರೆ 700ಕ್ಕೂ ಅಧಿಕ ಸೈನಿಕರು ಮೃತರಾದರೆಂದು ಹಾಗೂ 500ಕ್ಕೂ ಅಧಿಕ ಉಗ್ರಗಾಮಿಗಳು ಹತರಾದರೆಂದು ಅಧಿಕೃತ ಮೂಲಗಳು ಇದನ್ನು ಬಹಿರಂಗಪಡಿಸಿವೆ.

ಇದರ ಪ್ರತೀಕಾರವಾಗಿ 1984 ಅಕ್ಟೋಬರ್ 31ರಂದು ಇಂದಿರಾ ಗಾಂಧಿಯವರನ್ನು ಅವರ ಸಿಖ್ ಅಂಗರಕ್ಷಕರಾದ ಸತ್ವಂತ್ ಸಿಂಗ್ ಮತ್ತು ಬಿಯಾಂತ್ ಸಿಂಗ್ ಹತ್ಯೆ ಮಾಡುತ್ತಾರೆ. ಇದು ಉತ್ತರ ಭಾರತದಾದ್ಯಂತ ದಂಗೆಗೆ ಕಾರಣವಾಗುತ್ತದೆ ಮತ್ತು ಈ ದಂಗೆಗೆ ಕಾಂಗ್ರೆಸ್‌ನ ಪ್ರಚೋದನೆಯೇ ಕಾರಣವೆಂದು ಆರೋಪಿಸಲಾಗುತ್ತದೆ.

ಇದರ ನಂತರ ಖಲಿಸ್ತಾನ ಲಿಬರೇಷನ್ ಫೋರ್ಸ್, ಖಲಿಸ್ತಾನಿ ಕಮ್ಯಾಂಡೋ, ಫೋರ್ಸ್ ಹಾಗೂ ಇತರರು ಖಲಿಸ್ತಾನದ ಪರವಾಗಿ ಗುರುತಿಸಿಕೊಳ್ಳುತ್ತಾರೆ. ಆದರೆ ಪಂಜಾಬ್ ಪೊಲೀಸರು 1990 ರ ಸುಮಾರಿಗೆ ನಿಧಾನವಾಗಿ ಇದರ ಸದ್ದಡಗಿಸುವ ಕೆಲಸವನ್ನು ಮಾಡುತ್ತಾರೆ.

**ಖಲಿಸ್ತಾನಿ ಚಳವಳಿ ಈಗಿನ ಪರಿಸ್ಥಿತಿ**

ಈಗಿನ ಖಲಿಸ್ತಾನಿ ಚಳವಳಿಗೆ ಪಂಜಾಬಿನಲ್ಲಿ ಮೊದಲಿನಷ್ಟು ಸೆಳೆತವಾಗಲೀ, ಆಕರ್ಷಣೆಯಾಗಲೀ ಉಳಿದಿಲ್ಲ. ಆದರೆ ಅದಕ್ಕೆ ಸೈದ್ಧಾಂತಿಕವಾಗಿ ಮತ್ತು ಆರ್ಥಿಕವಾಗಿ ಕೆನಡಾ, ಯುಕೆ ಮತ್ತು ಅಮೆರಿಕಾದಲ್ಲಿರುವ ಬಹಳಷ್ಟು ಸಿಖ್ಖರ ಬೆಂಬಲವಿದೆ. ಐಎಸ್‌ಐ ಕೂಡಾ ಇದಕ್ಕೆ ಉತ್ತೇಜನ ಕೊಡುತ್ತಿದೆ.

**ಕೆನಡಕ್ಕೂ ಖಲಿಸ್ತಾನಕ್ಕೂ ಏನು ಸಂಬಂಧ ?**

ಭಾರತದಲ್ಲಿರುವ ಸಿಖ್ಖರ ಜನಸಂಖ್ಯೆ ಸರಿಸುಮಾರು 2 ಕೋಟಿ ಹಾಗೂ ಶೇಕಡಾವಾರು 1.7%. ಕೆನಡಾದ ಪ್ರಸ್ತುತ ಜನಸಂಖ್ಯೆ 3.8 ಕೋಟಿ ಮತ್ತು ಅದರಲ್ಲಿ ಸಿಖ್ಖರ ಸಂಖ್ಯೆ ಸುಮಾರು 8 ಲಕ್ಷ ಹಾಗೂ ಶೇಕಡಾವಾರು 2.2%. ಕ್ರಿಶ್ಚಿಯನ್, ಮುಸ್ಲಿಂ ಹಾಗೂ ಹಿಂದೂಗಳಂತಹ ಸಿಖ್ಖರು ಕೆನಡಾದಲ್ಲಿ ನಾಲ್ಕನೆಯ ಅತಿದೊಡ್ಡ ಸಂಖ್ಯೆಯಲ್ಲಿದ್ದಾರೆ. ಇಂಗ್ಲಿಷ್ ಮತ್ತು ಫ್ರೆಂಚಿನ ಬಳಿಕ ಕೆನಡಾದಲ್ಲಿ ಪಂಜಾಬಿ ಜನಪ್ರಿಯ ಭಾಷೆ. 1980ರ ನಂತರ ಕೆನಡಾದಲ್ಲಿ ಸಿಖ್ಖರ ಜನಸಂಖ್ಯೆ ಏರುಗತಿಯನ್ನು ಕಂಡಿತು. ಕಟ್ಟಡ ನಿರ್ಮಾಣ, ಬ್ಯಾಂಕಿಂಗ್, ಸಾರಿಗೆ, ಹೋಟೆಲ್ ಮತ್ತು ಪೆಟ್ರೋಲ್ ಬಂಕ್ ಉದ್ದಿಮೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ರಾಜಕೀಯವಾಗಿ ನೋಡುವುದಾದರೆ ಕೆನಡಾದ ಒಟ್ಟು 338 ಎಂ.ಪಿ.ಗಳಲ್ಲಿ 18 ಜನರು ಸಿಖ್ಖರು. 8 ಕ್ಷೇತ್ರಗಳು ಇವರ ನಿಯಂತ್ರಣದಲ್ಲಿದ್ದರೆ 15 ಕ್ಷೇತ್ರಗಳ ಫಲಿತಾಂಶವನ್ನು ಇವರು ನಿಯಂತ್ರಿಸಬಲ್ಲರು. ಹಾಗಾಗಿ ಕೆನಡಾದ ಎಲ್ಲಾ ರಾಜಕೀಯ ಪಕ್ಷಗಳು ಇವರನ್ನು ಖುಷಿಯಾಗಿಡಲು ಪ್ರಯತ್ನಿಸುತ್ತಿವೆ.

ಮೇಲೆ ತೋರಿಸಿದ ಸಂಖ್ಯೆಗಿಂತ ಬಲಿಷ್ಠವಾಗಿ ಸಿಖ್ಖರು ಕೆನಡಾದಲ್ಲಿ ಆಯೋಜಿತವಾಗಿದ್ದಾರೆ. ಗುರುದ್ವಾರಗಳ ಮೂಲಕ ಧನಸಹಾಯ ಮಾಡುತ್ತಾರೆ. ಎಲೆಕ್ಷನ್ ಸಮಯದಲ್ಲಿ ಪ್ರಚಾರಕ್ಕೆ ಮಾನವ ಸಂಪನ್ಮೂಲ ಹೇರಳವಾಗಿ ಸಿಗುತ್ತದೆ.

ಕೆನಡಾದ ಈಗಿನ ಆಡಳಿತಾರಾಢ ಲಿಬರಲ್ ಪಾರ್ಟಿಯ ಪ್ರಧಾನಿ ಜಸ್ಟಿನ್ ಟ್ರೂಡೋ ಅಧಿಕಾರದಲ್ಲಿರುವುದು New Democratic Party (NDA) ಸಹಾಯದಿಂದ ಮತ್ತು (NDA) ಸರ್ಕಾರದ ಅಂಗಪಕ್ಷ. NDA 2021ರ ಚುನಾವಣೆಯನ್ನು ಎದುರಿಸಿದ್ದು, ಜಗಮೀತ್ ಸಿಂಗ್ ನೇತೃತ್ವದಲ್ಲಿ. ಪ್ರಸ್ತುತ ಟ್ರೂಡೋ ಸರ್ಕಾರ ಬದುಕಿರುವುದು ಜಗಮೀತ್ ಸಿಂಗ್ ಬೆಂಬಲದಿಂದ. ಜಗಮೀತ್ ಸಿಂಗ್ ಖಲಿಸ್ತಾನಿ ಪರ ಸಹಾನುಭೂತಿ ಮತ್ತು ಭಾರತ ವಿರೋಧಿ ನೀತಿ ಹೊಂದಿರುವವ. ಈ ಜಗಮೀತ್ ಸಿಂಗ್‌ಗೆ 2013ರಲ್ಲಿ ಭಾರತದ ವೀಸಾ ನಿರಾಕರಿಸಲಾಗಿತ್ತು.

**ಸಂಬಂಧ ಹಳಸಲು ಕಾರಣಗಳು**

2018ರಲ್ಲಿ ಭಾರತಕ್ಕೆ ಭೇಟಿ ಕೊಟ್ಟ ನಿಯೋಗದಲ್ಲಿ ಭಾರತೀಯ ಮೂಲದ ಜಸ್ವಾಲ್ ಅತ್ವಾಲ್ ಇದ್ದ. ಈತ ISYF (Internation Sikh Youth Federation)ನಲ್ಲಿ ಗುರುತಿಸಿಕೊಂಡಿದ್ದ ಮತ್ತು ISYF ಸಂಘಟನೆಯನ್ನು ಉಗ್ರ ಸಂಘಟನೆಯೆಂದು ಭಾರತ ಸರ್ಕಾರ ನಿಷೇಧಿಸಿದೆ. ಭಾರತ ಸರ್ಕಾರದ ಒತ್ತಡದಿಂದ ಈತ ತನ್ನ ನಿಯೋಗದ ಪ್ರತಿನಿಧಿಯಲ್ಲವೆಂದೂ, ಆತನಿಗೂ, ತನಗೂ ಸಂಬಂಧವಿಲ್ಲವೆಂದೂ ಕೆನಡಾ ಸ್ಪಷ್ಟೀಕರಣ ಕೊಟ್ಟು ಮುಜುಗರದಿಂದ ಪಾರಾಯಿತು. ಆದರೆ ಆತ ಕೆನಡಾ ಸರ್ಕಾರಕ್ಕೆ ಆತ್ಮೀಯನೆಂದು ಜಗಜ್ಜಾಹೀರಾಯಿತು.

ಜಸ್ಟಿನ್ ಟ್ರೋಡೋ ಇತ್ತೀಚೆಗೆ ಹತ್ಯೆಯಾದ ಹರ್ದೀಪ್ ಸಿಂಗ್ ನಿಜ್ಜರ್ ಪ್ರಕರಣದಲ್ಲಿ ಭಾರತದ ಕೈವಾಡವಿದೆ ಎಂದು ಆರೋಪಿಸಿದರು ಮತ್ತು ಆ ಆರೋಪಕ್ಕೆ ತಮ್ಮ ಬಳಿ ಸಾಕ್ಷಿಗಳಿವೆ ಎಂದು ಹೇಳಿಕೊಂಡಿತು. ಆದರೆ ಭಾರತ ನಿಜ್ಜರ್‌ನನ್ನು ಉಗ್ರಗಾಮಿಯೆಂದು ಘೋಷಿಸಿಯಾಗಿತ್ತು. ನಿಜ್ಜರ್‌ಗೂ ಮುನ್ನ ಇಬ್ಬರು ಖಲಿಸ್ತಾನಿ ಬೆಂಬಲಿಗರ ಹತ್ಯೆಯಾಗಿತ್ತು ಮತ್ತು ತಾನು ಹಿಟ್‌ಲಿಸ್ಟ್‌ನಲ್ಲಿದ್ದೇನೆಂದು ನಿಜ್ಜರ್‌ಗೆ ಆಗಲೇ ಮನವರಿಕೆಯಾಗಿತ್ತು. ಮೇ ತಿಂಗಳಿನಲ್ಲಿ ಲಾಹೋರ್‌ನಲ್ಲಿ ವಾಸವಾಗಿದ್ದ ಪರಂಜೀತ್ ಸಿಂಗ್‌ನನ್ನು ಗುಂಡಿಟ್ಟು ಹತ್ಯೆಗೈಯಲಾಗಿತ್ತು. ಜೂನ್ 15ರಂದು ಬರ್ಮಿಂಗ್ ಹ್ಯಾಮ್‌ನ ಆಸ್ಪತ್ರೆಯಲ್ಲಿ ಇನ್ನೊಬ್ಬ ತೀವ್ರಗಾಮಿ ಅವತಾರ್ ಸಿಂಗ್ ಕೂಡಾ ಮೃತಪಟ್ಟಿದ್ದ. ಅವನ ಹಿಂಬಾಲಕರ ಪ್ರಕಾರ ಅವನಿಗೆ ವಿಷ ಉಣಿಸಿ ಹತ್ಯೆಗೈಯ್ಯಲಾಗಿತ್ತು. ಅವತಾರ್ ಸಿಂಗ್ ಮಾರ್ಚ್ 2023ರಲ್ಲಿ ಭಾರತದ ಹೈ ಕಮೀಷನರ್ ಕಛೇರಿಯ ಮುಂದಿನ ಭಾರತದ ಧ್ವಜವನ್ನು ಕಿತ್ತೆಸದಿದ್ದ.

ಹಾಗಾಗಿ ಟ್ರುಡೋ ನೇರವಾಗಿ ನಿಜ್ಜರ್ ಪ್ರಕರಣದಲ್ಲಿ ತನ್ನ ಮತ ಬ್ಯಾಂಕ್ ಗಟ್ಟಿಗೊಳಿಸಲು ಮಿತ್ರ ಪಕ್ಷವನ್ನು ಓಲೈಸಲು ಭಾರತದ ಮೇಲೆ ಆರೋಪ ಹೊರಿಸಿದ್ದಾರೆ. ಸ್ವತಃ ಇದನ್ನು ಕೆನಡಾದ ವಿರೋಧ ಪಕ್ಷವಾದ ಕನ್ಸರ್ವೇಟಿವ್ ಪಕ್ಷ ವಿರೋಧಿಸಿದೆ. ಟ್ರುಡೋ ಹೇಳಿಕೆ ಭಾರತ ಮತ್ತು ಕೆನಡಾದ ರಾಜತಾಂತ್ರಿಕ ಸಂಬಂಧವನ್ನು ನಿಲುಗಡೆಗೊಳಿಸಿದೆ. ಅಮೆರಿಕಾ, ಯುಕೆ ಮತ್ತು ಆಸ್ಟ್ರೇಲಿಯಾ ದೇಶಗಳು ಕೆನಡಾದ ಈ ಹೇಳಿಕೆಯಿಂದ ಅಂತರವನ್ನು ಕಾಯ್ದು ಕೊಂಡಿವೆ ಮತ್ತು ಈ ವಿಷಯದಲ್ಲಿ ತಾನು ಭಾಗವಹಿಸುವುದಿಲ್ಲವೆಂದು ಪರೋಕ್ಷವಾಗಿ ಹೇಳಿದೆ. ಏಕೆಂದರೆ ಈ ಎಲ್ಲಾ ದೇಶಗಳಿಗೆ ಚೀನಾಗೆ ಚೆಕ್‌ಮೇಟ್ ಕೊಡಲು ಬೇಕಾಗಿರುವುದು ಕೆನಡಾವಲ್ಲ. ಬದಲಿಗೆ ಭಾರತ!



- ಅಖಿನ್ ಹೆಚ್.ಎಸ್., ಮರಬನಹಳ್ಳಿ

## ಮಲೇಬೆನ್ನೂರಿನಲ್ಲಿ ಹೆಚ್ಚಾದ ಮುಷ್ಯಗಳ ಉಪಟಳ - ಸೆರೆ ಹಿಡಿಯಲು ಮನವಿ



ಮಲೇಬೆನ್ನೂರು, ಅ. 4 - ಪಟ್ಟಣದಲ್ಲಿ ಮುಷ್ಯಗಳ ಕಾಟ ಹೆಚ್ಚಾಗಿದ್ದು, ಜನ ಭಯದಿಂದ ಓಡಾಡುವಂತಾಗಿದೆ. ಶಾಲೆಗೆ ತೆರಳುತ್ತಿರುವ ಮಕ್ಕಳ ಮೇಲೆ ದಾಳಿ ನಡೆಸಿದ್ದು, ಮಹಿಳೆಯರು, ವೃದ್ದರು ಮನೆಯಿಂದ ಹೊರಬರಲು ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. 4ನೇ ಮತ್ತು 5ನೇ ವಾರ್ಡ್‌ಗಳಲ್ಲೂ ಮುಷ್ಯಗಳ ಕಾಟ ಹೆಚ್ಚಾಗಿದ್ದು, ಜಯ್ಯಪ್ಪ ಮತ್ತು ವಿಜಯಕುಮಾರ್ ಇವರ ಮೇಲೆ ದಾಳಿ ಮಾಡಿದ್ದು, ಇವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂದು ಪುರಸಭೆ ಸದಸ್ಯ ಬೆಣ್ಣೆಹಳ್ಳಿ ಸಿದ್ದೇಶ್ ತಿಳಿಸಿದ್ದಾರೆ. ಮುಷ್ಯಗಳ ಕಾಟ ತಪ್ಪಿಸುವಂತೆ ನಿವಾಸಿಗಳು ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಇವರಿಗೆ ಮನವಿ ಮಾಡಿದ್ದಾರೆ. ಪಟ್ಟಣದ ಕಲ್ಲೇಶ್ವರ ಬಡಾವಣೆ ಸರ್ಕಾರಿ ಶಾಲೆಯ ಬಳಿ ಮುಷ್ಯಗಳನ್ನು ಹಿಡಿದು ಹಾಕಲು ಬೋನುಗಳ ವ್ಯವಸ್ಥೆ ಮಾಡಲಾಗಿದೆ. ಬರಿ ಬೋನುಗಳ ವ್ಯವಸ್ಥೆ ಮಾಡಿದರೆ ಸಾಲದು, ಕಾರ್ಯಾಚರಣೆ ಮೂಲಕ ಮುಷ್ಯಗಳನ್ನು ಹಿಡಿದು ಕಾಡಿಗೆ ಬಿಡಬೇಕೆಂದು ಮುದೇಗೌಡ್ರ ತಿಪ್ಪೇಶ್ ಒತ್ತಾಯಿಸಿದ್ದಾರೆ.

## ಕುಂಬಳೂರು : ಹಿರಿಯ ನಾಗರಿಕರಿಗೆ ಸನ್ಮಾನ



ಮಲೇಬೆನ್ನೂರು, ಅ. 4 - ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಪ್ರಯುಕ್ತ ಮುಖ್ಯ ಚುನಾವಣಾಧಿಕಾರಿಗಳ ನಿರ್ದೇಶನದಂತೆ ಉಪ ತಹಶೀಲ್ದಾರ್ ಆರ್. ರವಿ ಅವರು ಭಾನುವಾರ ಕುಂಬಳೂರು, ಮಲೇಬೆನ್ನೂರು, ಕೊಮಾರನಹಳ್ಳಿ ಮತ್ತು ಹಿಂಡಸಘಟ್ಟ ಗ್ರಾಮಗಳಿಗೆ ತರಳಿ, ಹಿರಿಯ ನಾಗರಿಕರನ್ನು ಸನ್ಮಾನಿಸಿ, ಗೌರವಿಸಿದರು. ಕುಂಬಳೂರಿನಲ್ಲಿ ಗ್ರಾ.ಪಂ. ಉಪಾಧ್ಯಕ್ಷ ನಾಗೋಳ್ ಕಲ್ಮೇಶ್, ಗ್ರಾ.ಪಂ. ಮಾಜಿ ಅಧ್ಯಕ್ಷ ಆರ್.ಹೆಚ್. ಬಸವರಾಜ್, ಮಲೇಬೆನ್ನೂರಿನಲ್ಲಿ ಪುರಸಭೆ ಸದಸ್ಯ ಬಿ. ಮಂಜುನಾಥ್, ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ, ಮುಖಂಡರಾದ ಮುದೇಗೌಡ್ರು ತಿಪ್ಪೇಶ್, ಓ.ಜಿ. ಕುಮಾರ್ ಮತ್ತು ಗ್ರಾಮ ಲೆಕ್ಕಾಧಿಕಾರಿಗಳಾದ ಕೊಟ್ರೇಶ್, ಆನಂದ ತೀರ್ಥ, ಗ್ರಾಮ ಸಹಾಯಕರಾದ ಮಾರುತಿ, ಶಶಿ ಹಾಗೂ ನಾಡ ಕಛೇರಿಯ ಕಂಪ್ಯೂಟರ್ ಆಪರೇಟರ್ ಬಸವರಾಜ್ ಮತ್ತಿತರರು ಹಾಜರಿದ್ದರು.

## ಸಿಕ್ಕಿಂನಲ್ಲಿ ಕ್ಷಿಪ್ರ ಪ್ರವಾಹ : ಜನ ಕಣ್ಮರೆ

(1ನೇ ಪುಟದಿಂದ) ನೇಪಾಳ ಹಾಗೂ ಸುತ್ತಲಿನ ಪ್ರದೇಶದಲ್ಲಿ ಮಂಗಳವಾರ ಸಂಭವಿಸಿದ್ದ ಭೂಕಂಪ ಕ್ಷಿಪ್ರ ಪ್ರವಾಹಕ್ಕೆ ಕಾರಣವೇ ಎಂಬ ಬಗ್ಗೆ ವಿಜ್ಞಾನಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

## ಪಶುಗಳಿಗೆ ಕಾಲುಬಾಯಿ ಜ್ವರ ಲಸಿಕೆ



ಮಲೇಬೆನ್ನೂರು, ಅ. 4 - ಹೊಳೆಸಿರಿಗೆರೆ ಗ್ರಾಮದಲ್ಲಿ ಬುಧವಾರ ಪಶುಗಳಿಗೆ ಕಾಲುಬಾಯಿ ಜ್ವರ ಲಸಿಕೆ ನೀಡಲಾಯಿತು. ಪಶು ವೈದ್ಯಾಧಿಕಾರಿ ಡಾ॥ ಬುಡೇನ್ ಸಾಬ್, ಡಿ.ಆರ್. ಶ್ವೇತಾ, ಓಲೇಕಾರ ತಿಪ್ಪಣ್ಣ, ಕುಂದೂರು ಮಂಜಪ್ಪ ಹಾಜರಿದ್ದರು.

## ಉಜ್ವಲ ಸಬ್ಸಿಡಿ 300 ರೂ.ಗೆ ಹೆಚ್ಚಳ

(1ನೇ ಪುಟದಿಂದ) ಉಜ್ವಲ ಫಲಾನುಭವಿಗಳಿಗೆ 200 ರೂ. ಸಬ್ಸಿಡಿ ನೀಡಲಾಗುತ್ತಿದ್ದ ಕಾರಣ, ಪ್ರತಿ ಸಿಲಿಂಡರ್ ಬೆಲೆ 703 ರೂ.ಗಳಿಗೆ ಇಳಿಕೆಯಾಗಿತ್ತು. ಈಗ ಸಿಲಿಂಡರ್ ಬೆಲೆ 603 ರೂ.ಗಳ ಹಂತಕ್ಕೆ ಬರಲಿದೆ. ಸಿಲಿಂಡರ್ ಸಬ್ಸಿಡಿಯನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು. ಅಡುಗೆ ಅನಿಲ ಬೆಲೆ ಹೆಚ್ಚಿಸಲಾಗಿದೆ ಎಂದು ಪ್ರತಿಪಕ್ಷಗಳು ತರಾಟೆಗೆ ತೆಗೆದುಕೊಂಡಿದ್ದವು. ಅಧಿಕಾರಕ್ಕೆ ಬಂದರೆ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು 500 ರೂ.ಗಳಿಗೆ ಇಳಿಕೆ ಮಾಡುವುದಾಗಿ ಕಾಂಗ್ರೆಸ್ ಭರವಸೆ ನೀಡಿತ್ತು.

## ಸಮ್ಮತಿ ವಯಸ್ಸು ಇಳಿಕೆ ಬೇಡ : ಸಲಹೆ

(1ನೇ ಪುಟದಿಂದ) ಆದರೆ, 16-18 ವರ್ಷದವರು ಸಹಮತದ ಸಂಬಂಧಕ್ಕೆ ಒಳಪಟ್ಟರೆ ಅದನ್ನು ಪರಿಗಣಿಸುವುದನ್ನು ನ್ಯಾಯಾಲಯದ ವಿವೇಚನೆಗೆ ಬಿಡಬೇಕು ಎಂದು ಕಾನೂನು ಆಯೋಗ ಶಿಫಾರಸ್ಸು ಮಾಡಿದೆ.

ಈ ಶಿಫಾರಸ್ಸನ್ನು ಒಪ್ಪಬಾರದು ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ ಸರ್ಕಾರಕ್ಕೆ ಶಿಫಾರಸ್ಸು ಮಾಡಲಿದೆ. ಕಾನೂನು ಆಯೋಗದ ವರದಿಯಲ್ಲಿನ ವಾದವು ತಪ್ಪು ದಾರಿಗೆ ಎಳೆಯುವಂಥದ್ದಾಗಿದೆ ಎಂದು ಆಯೋಗ ಭಾವಿಸಿದೆ ಎಂದು ಮೂಲಗಳು ತಿಳಿಸಿವೆ.

ಪೋಕ್ಸೋ ಕಾಯ್ದೆಯಡಿ ದಾಖಲಾಗುವ ಶೇ.25ರಷ್ಟು ಪ್ರಕರಣಗಳು ಪ್ರಣಯ ಸಂಬಂಧದವು ಎಂದು ಎನ್‌ಫೋಲ್ಡ್ ಎಂಬ ಸಂಸ್ಥೆ ವರದಿ ನೀಡಿದ್ದನ್ನು ಕಾನೂನು ಆಯೋಗ ಉಲ್ಲೇಖಿಸಿತ್ತು. ಆದರೆ, ಎನ್‌ಫೋಲ್ಡ್ ಸಂಸ್ಥೆಯು ವಿವಿಧ ನ್ಯಾಯಾಲಯಗಳ ಆದೇಶಗಳ ವಿಶ್ಲೇಷಣೆ ಮಾಡಿದೆಯೇ ಹೊರತು, ಪ್ರಕರಣಗಳ ವೈಯಕ್ತಿಕ ಅಧ್ಯಯನ ನಡೆಸಿಲ್ಲ. ವಾಸ್ತವಾಂಶವೇ ಬೇರೆ ಇದೆ ಎಂದು ಮಕ್ಕಳ ಆಯೋಗ ಹೇಳಿದೆ.

ಎನ್‌ಫೋಲ್ಡ್ ಸಂಸ್ಥೆಯ ವರದಿಯನ್ನು ಯುನಿಸೆಫ್ ಸಹ ಪ್ರಕಟಿಸಿತ್ತು. ಈ ದಾಖಲೆಯನ್ನು ವಾಪಸ್ ಪಡೆಯುವಂತೆ ಯುನಿಸೆಫ್‌ಗೂ ಮಕ್ಕಳ ಆಯೋಗ ಪತ್ರ ಬರೆದಿದೆ.

ಮಧ್ಯ ಪ್ರದೇಶ ಹಾಗೂ ಕರ್ನಾಟಕ ಹೈಕೋರ್ಟ್‌ಗಳು ನೀಡಿದ್ದ ಎರಡು ತೀರ್ಪುಗಳನ್ನು ಪ್ರಸ್ತಾಪಿಸಿರುವ ಮಕ್ಕಳ ಆಯೋಗ, ಈ ತೀರ್ಪುಗಳು ಬಾಲ್ಯ ವಿವಾಹಕ್ಕೆ ಸಂಬಂಧಿಸಿದವು. ಅಪ್ರಾಪ್ತರಾಗಿದ್ದರೂ ಮದುವೆ ಮಾಡಿಕೊಳ್ಳಬಹುದು ಎಂದು ಅನುಮತಿ ನೀಡುವುದಾದರೆ ಬಾಲ್ಯ ವಿವಾಹ ಕಾಯ್ದೆಯ ಉಲ್ಲಂಘನೆಯಾಗುತ್ತದೆ ಹಾಗೂ ಇದು ಸಂವಿಧಾನದ ಮೂಲ ತತ್ವಗಳಿಗೆ ವಿರುದ್ಧವಾಗಿದೆ ಎಂದು ಮಕ್ಕಳ ಆಯೋಗ ಹೇಳಿದೆ.

ಅಪ್ರಾಪ್ತರ ಪ್ರಣಯ ಸಂಬಂಧಕ್ಕೆ ಒಪ್ಪಿಗೆ ನೀಡುವುದು ಸಮಸ್ಯೆಗಳಿಗೆ ದಾರಿ ಮಾಡಿಕೊಡಲಿದೆ. ಅಪ್ರಾಪ್ತೆ ಗರ್ಭಿಣಿಯಾದಾಗ ಎದುರಾಗುವ ಸಮಸ್ಯೆಗಳನ್ನು ಕಡೆಗಣಿಸಲಾಗದು ಎಂದೂ ಮಕ್ಕಳ ಹಕ್ಕುಗಳ ಆಯೋಗ ಹೇಳಿದೆ.

## ಬೆನಕನಹಳ್ಳಿ ಮಕ್ಕಳಿಗೆ ಕ್ರೀಡಾ ಸಮವಸ್ತ್ರ ವಿತರಣೆ



ಹೊನ್ನಾಳಿ, ಅ.4- ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದ ತರಳಬಾಳು ಶ್ರೀ ವಿನಾಯಕ ಪ್ರೌಢಶಾಲೆ ಯಲ್ಲಿ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಜಯಂತಿ ಆಚರಿಸಲಾಯಿತು. ಮಕ್ಕಳಿಗೆ ಎ.ಜಿ.ಹನುಮಂತಪ್ಪನವರ ಮಗ ಡಾ.ರೇವಣಸಿದ್ದಪ್ಪ ನೀಡಿದ ಕ್ರೀಡಾ ಸಮವಸ್ತ್ರ ಗಳನ್ನು ಉಚಿತವಾಗಿ ನೀಡಲಾಯಿತು. ಡಾ.ರೇವಣಸಿದ್ದಪ್ಪ ಅಧ್ಯಕ್ಷತೆ ವಹಿಸಿದ್ದರು. ಶಾಲಾಭಿವೃದ್ಧಿ ಅಧ್ಯಕ್ಷ ಎ.ಜಿ.ಹನುಮಂ ತಪ್ಪ, ಸಮಿತಿ ಸದಸ್ಯ ಹೆಚ್.ಜಿ.ರುದ್ರೇಶಪ್ಪ, ಉಪಾಧ್ಯಕ್ಷ ವೀರ ಶೇಖರಪ್ಪ, ಸದಸ್ಯರಾದ ಎಂ.ನಾಗಪ್ಪ, ಕಮ್ಮಾರಗಟ್ಟೆ ಶಿವ ಕುಮಾರ, ಪಿ.ವೀರಣ್ಣ ಮಾತನಾಡಿದರು. ಈ ಸಂದರ್ಭದಲ್ಲಿ ಹೆಚ್.ಜಿ.ಸಂತೋಷ್, ವೀರಕೇಶ್, ಶಾಲಾ ಮುಖ್ಯೋ ಪಾಧ್ಯಾಯ ವಸಂತ ಬಡಿಗೇರ, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

## ವೀರಶೈವ - ಲಿಂಗಾಯಿತ ಸಮಾಜದ ಎರಡು ಕಣ್ಣುಗಳು

(1ನೇ ಪುಟದಿಂದ) ಅಂತಹ ಹೇಳಿಕೆ ಮತ್ತು ನಡೆಯಬಹುದಾದ ಕ್ರಮಗಳನ್ನು ಬಲವಾಗಿ ಖಂಡಿಸಿ, ಸಮಾಜದ ಒಗ್ಗಟ್ಟಿಗೆ ಶ್ರಮಿಸಿದ್ದ ಎಸ್ಸೆಸ್ ಅವರ ಸಮಾಜದ ಕಳಕಳಿಯನ್ನು ಶ್ರೀಗಳು ಮೆಲುಕು ಹಾಕಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ವೀರಶೈವ - ಲಿಂಗಾಯತ ಸಮಾಜದ ವಿರುದ್ಧ ಆಗಾಗ್ಗೆ ನಡೆಯುತ್ತಲೇ ಇರುವ ಅನ್ಯಾಯ ಮತ್ತು ಒಡೆದು ಆಳುವ ನೀತಿಯ ಹೇಳಿಕೆಗಳು ಬಂದಾಗಲೆಲ್ಲಾ ಯಾವುದಕ್ಕೂ ಹೆದರದೆ, ಸಮಾಜದ ಶ್ರೇಯೋಭಿವೃದ್ಧಿಗಾಗಿ ಕಾಳಜಿ ವಹಿಸಿರುವ ಶಾಮನೂರು ಶಿವಶಂಕರಪ್ಪ ಅವರನ್ನು ಜಗದ್ಗುರುಗಳು ಅಭಿನಂದಿಸಿದ್ದಾರೆ.


**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಪಿ.ಜೆ. ಬಡಾವಣೆ ಪಶ್ಚಿಮ 80x80, ಉತ್ತರ 120x150, (3 ಕಡೆ ಕಾರ್ನರ್) ಎಂ.ಸಿ.ಸಿ. 'ಎ' ಬ್ಲಾಕ್, ಪೂರ್ವ-ದಕ್ಷಿಣ 44x60, ವಿದ್ಯಾನಗರ ಮುಖ್ಯ ರಸ್ತೆ, ಪೂರ್ವ-ದಕ್ಷಿಣ 60x65.
ಐಗೂರು ವಿಜಯಕುಮಾರ
99457 02495

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಶಾಮನೂರು ರಸ್ತೆ (ಲಕ್ಷ್ಮಿ ಫ್ಲೋರ್ ಮಿಲ್ ಕೆಳಗೆ) ಪೂರ್ವ 3000 ಚದುರ, ಹಳೇ ಬನಶಂಕರಿ ಬಡಾವಣೆ ಪೂರ್ವ-ಉತ್ತರ ಕಾರ್ನರ್ 40x50, ಉತ್ತರ 32x40, ಪೂರ್ವ-ದಕ್ಷಿಣ ಕಾರ್ನರ್ 40x65.
ಐಗೂರು ವಿಜಯಕುಮಾರ
99457 02495

**ಸೈಟ್,ಮನೆ ಮಾರಾಟಕ್ಕೆ**
ಎಂ.ಸಿ.ಸಿ.'ಬಿ' ಬ್ಲಾಕ್ 40x60 ವೆಸ್ಟ್, ಮಾಲ್ ಹತ್ತಿರ 40x60 ಉತ್ತರ ಸಿದ್ದವೀರಪ್ಪ ಬಡಾವಣೆ 30x40 ಡುಪ್ಲೆಕ್ಸ್ ಮನೆ, ನಿಜಲಿಂಗಪ್ಪ 30x50 ಉತ್ತರ ವಿದ್ಯಾನಗರ 30x40 ಸೌತ್ ವಿನಾಯಕ ಬಡಾವಣೆ 45x48 ದಕ್ಷಿಣ 40x60 ಪೂರ್ವ
ಕಿರಣ್ ಭೂಸನೂರ್ (ಏಜೆಂಟ್)
98440 63409

**ಬೇಕಾಗಿದ್ದಾರೆ**
3D ಡ್ರಾಯಿಂಗ್‌ನಲ್ಲಿ ಅನುಭವವಿರುವ ಸಿವಿಲ್ ಇಂಜಿನಿಯರ್ಸ್, ಬಿಲ್ಲಿಂಗ್‌ನಲ್ಲಿ Tally ಅನುಭವವಿರುವ MBA ಮಾಡಿದವರಿಗೆ ಫ್ಯಾಕ್ಟರಿಗೆ ಮಾರ್ಕೆಟಿಂಗ್‌ಗಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ :
83100 61181

**ನುರಿತ ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ**
ರಾಜು ಪ್ರಿಂಟರ್ಸ್
ಶಿವಪ್ಪಯ್ಯ ರಸ್ತೆ, ದಾವಣಗೆರೆ.
99640 28818

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**WANTED**
We are hiring
Store Incharge & Billing, Interior Designer (3D)
Required : (Male/Female)
Salary : 8000 to 15000 depends on Experience.
Location : RCB DECORS
Raitha Sanga Compound P.B.Road, Near Apoorva Restorent, Davangere.
99722 60333, 72046 23133

**ಮನೆ ಲೀಸ್‌ಗಿದೆ**
ದಾವಣಗೆರೆ ಕುವೆಂಪು ನಗರದಲ್ಲಿ 2BHK ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ.
99006 17813

**ಸೈಟು ಮಾರಾಟಕ್ಕಿದೆ**
(KHB) ಕರ್ನಾಟಕ ಗೃಹ ಮಂಡಳಿ 40 ಅಡಿ ರಸ್ತೆಗೆ ಬರುವಂತಹ 40x60 ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕಿದೆ.
87622 85869, 76763 81314

**JOB OPORTUNITY**
Looking for fluent English speaking Telecallers with Telesales experience. Join us for outbound calls, competitive pay and growth opportunities. This position offers the flexibility to work from the office or at home.
Call: 82969 57816

**ಡಾ॥ ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿನಾಂಕ 5.10.2023ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಬಾಡಿಗೆಗೆ ಇದೆ**
2ನೇ ಮಹಡಿಯಲ್ಲಿ 2 ಬೆಡ್ ರೂಮ್ಸ್, ಕಾರ್ಪೊರೇಷನ್ & ಬೋರ್ ನೀರಿನ ಸೌಲಭ್ಯವಿದೆ. # 874, 1ನೇ ಮೇನ್, 5ನೇ ಕ್ರಾಸ್, ಕೆಟಿಜೆ ನಗರ, ದಾವಣಗೆರೆ.
89706 70442

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಕೆಲಸಕ್ಕೆ ಅನುಭವ ಉಳ್ಳ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
77602 68105

**ಬೇಕಾಗಿದ್ದಾರೆ**
ಸೆಲ್ಫ್ ಸರ್ವೀಸ್ ಹೋಟೆಲ್‌ನಲ್ಲಿ Cook cum supplier ಕೆಲಸಕ್ಕೆ ನುರಿತ ಯುವಕರು ಬೇಕಾಗಿದ್ದಾರೆ.
95388 96927

**Finance Advisor**
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
77959 44991, 96201 50544

**ಚೆಕ್ಕುಗಳು ಕಳೆದಿವೆ**
ನಾಗರಾಜನಾಯ್ಕ ಬಿ.ಆರ್. ತಂದೆ ಸೂರ್ಯ ನಾಯ್ಕ ಬಿ. ಜಿಲ್ಲಾಡಳಿತ ಭವನ ದಾವಣಗೆರೆಯಲ್ಲಿ ಸರ್ಕಾರಿ ನೌಕರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತರಳಬಾಳು ಬಡಾವಣೆ, 1ನೇ ಕ್ರಾಸ್, ವಿದ್ಯಾನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇನೆ. ನಾನು ದಿನಾಂಕ 29.09.2023ರ ಶುಕ್ರವಾರ ಮಧ್ಯಾಹ್ನ 1.30ರ ಸಮಯದಲ್ಲಿ ಕಛೇರಿ ಕೆಲಸ ಮುಗಿಸಿಕೊಂಡು ಊಟಕ್ಕೆ ಮನೆಗೆ ಹೋಗುವಾಗ ವಿದ್ಯಾನಗರದ 1ನೇ ಕ್ರಾಸ್‌ನಲ್ಲಿ ನನ್ನ ಮಕ್ಕಳ ಶಾಲೆಯ ದಾಖಲೆಗಳನ್ನು ಜೆರಾಕ್ಸ್ ಮಾಡಿಸಲಿಕ್ಕೆ ಹೋದಾಗ ನನ್ನ ಬೈಕ್ ಬ್ಯಾಗ್‌ನಲ್ಲಿ ಒಂದು ಕವರ್‌ನಲ್ಲಿದ್ದ ಎರಡು ಖಾಲಿ ಚೆಕ್ಕುಗಳು ಚೆಕ್ ನಂ.312789 ಮತ್ತು 312790 ಚೆಕ್‌ಗಳು ಕಳೆದಿರುತ್ತವೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್ ನಂಬರಿಗೆ ತಿಳಿಸಬೇಕಾಗಿ ವಿನಂತಿ.
ನಾಗರಾಜನಾಯ್ಕ ಬಿ.ಆರ್. 99020 15809

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ ಊಟ, ತಿಂಡಿ ವ್ಯವಸ್ಥೆ ಇರುತ್ತದೆ.
ಎಸ್.ಟಿ. ಸೋಮಶೇಖರ್
98803 37686

**WANTED TEACHERS**
Kids Campus International Pre School Davangere
Wanted : Teachers for Nursery. Fluency in English
99003 78196

**ಬೇಕಾಗಿದ್ದಾರೆ**
ಡಾಬಾ ಹೋಟೆಲ್‌ನಲ್ಲಿ ಸಪ್ಲೈಯರ್ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಬಳ : 12,000/-
ಸಂಪರ್ಕಿಸಿ.
99022 49393

**ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ**
ಆಕರ್ಷಕ ಕಮೀಷನ್ ಹಾಗೂ ಆಕರ್ಷಕ ಬೋನಸ್ ನೀಡಲಾಗುವುದು.
ಸಂಪರ್ಕಿಸಿ : ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ - 577001
99004 38052, 97401 53513

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ಉತ್ತಮ ಚಂದ್ ಬಡಾವಣೆಯಲ್ಲಿ ಪೂರ್ವ ಮತ್ತು ಉತ್ತರ ದಿಕ್ಕಿನ ಕಾರ್ನರ್ ಸೈಟ್ 30x55 ಅಳತೆ ಇದ್ದು ಮಾರಾಟಕ್ಕಿದೆ. ಸಂಪರ್ಕಿಸಿ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
82170 84545

**WANTED**
Lady Receptionist with Computer Knowledge (SSLC/PUC) for Scan Centre
Working Time: 11 am to 8.30 pm
94483 39242

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**2 BHK HOUSE FOR RENT/LEASE**
Near Podar International in J.H. Patel Badavane, Davangere.
95359 99218, 88617 11072

**ಬೇಕಾಗಿದ್ದಾರೆ**
ದಾವಣಗೆರೆ ಬೆಣ್ಣೆ ದೋಸೆ ಮಾಡುವ ಮಾಸ್ಟರ್ ಬೇಕಾಗಿದ್ದಾರೆ
ಸ್ಥಳ : ಮಾರತಹಳ್ಳಿ, ಬೆಂಗಳೂರು.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
63822 95021

**ಮನೆ ಮಾರಾಟಕ್ಕಿದೆ**
3 BHK - 30x63, ಡೋ.ನಂ. 2656/28 ಎಸ್.ಎಸ್. ಲೇಔಟ್, ಬಿ ಬ್ಲಾಕ್, 3ನೇ ಮೇನ್ ರೋಡ್, ವೆಸ್ಟ್ ಫೇಸ್.
84950 88884
98446 67785

**ಹೆಸರು ಬದಲಾವಣೆ**
ಸಿ.ಬಿ. ಶಶಧರಮೂರ್ತಿ ತಂದೆ ಎನ್.ಭೀಮಯ್ಯ ವಯಸ್ಕರು, ವಾಸ ಡೋರ್ ನಂ. 25, 2ನೇ ಮೇನ್, 7ನೇ ಕ್ರಾಸ್ ಸಾಯಿಬಾಬಾ ದೇವಸ್ಥಾನ ಹತ್ತಿರ, ವಿಜಯನಗರ ಬಡಾವಣೆ, ದಾವಣಗೆರೆ ಸಿಟಿ ವಾಸಿಯಾದ ನಾನು ಮೇಲ್ಕಂಡ ವಿಳಾಸದಲ್ಲಿ ಖಾಯಂ ವಾಸಿಯಾಗಿರುತ್ತೇನೆ. ನನ್ನ ಹೆಸರು ಎಲ್ಲಾ ಮೂಲ ದಾಖಲೆಗಳಲ್ಲಿ ಶಶಧರ ಮೂರ್ತಿ ಬಿ. ಎಂದು ನಮೂದಾಗಿರುತ್ತದೆ. ನಾನು ಇನ್ನೂ ಮುಂದೆ ನನ್ನ ಎಲ್ಲಾ ವ್ಯವಹಾರಗಳನ್ನು ಸಿ.ಬಿ. ಶಶಧರಮೂರ್ತಿ ಎಂದು ವ್ಯಯಹರಿಸುತ್ತೇನೆ. ನಾನು ಆರ್.ಟಿ.ಓ ಆಫೀಸಿನಿಂದ ಪಡೆದ ನಂ. ಕೆ.ಎ 1720040002564 ಡೇಟ್ ಆಫ್ ಇಶ್ಯೂಡ್ 27.12.2004ರಂದು ಮಂಜೂರು ಮಾಡಿರುವ ಎಫ್. ಡಿ.ಎಲ್‌ನಲ್ಲಿ ಸಿ.ಬಿ. ಶಶಧರಮೂರ್ತಿ ಎಂಬ ಹೆಸರು ನಮೂದಿಸಲು ವಿನಂತಿ. - ಸಿ.ಬಿ.ಶಶಿಧರಮೂರ್ತಿ

**GOLDEN OPPORTUNITY**
Exclusively for the Retired/ Home Makers / Businessmen from Top MNC. part time/full time Flexible Timing, No. Investment. Age 30 above, Fixed Payout, huge incentives, PF, ESI, International Travel, Reward and recognition.
63632 34430

**WANTED**
SALES BOYS & GIRLS
Education Any Degree
Attractive Salary
KABBUR FURNITURES
P.B. Road, Beside Sultan Diamonds & Gold Showroom,Davanagere.
Ph. : 98444 26800

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ॥ ಎಚ್.ಐಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ದಾವಣಗೆರೆ ನಗರದಲ್ಲಿ ಪೋಸ್ಟರ್ ಅಂಟಿಸಲು ಹುಡುಗರು ಬೇಕಾಗಿದ್ದಾರೆ. ಹೋಟೆಲ್ ನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:
7259660786

**WANTED**
ACCOUNTS EXECUTIVE-2 POST
(2-3 years Experience)
Shamanur Sugars Ltd., 374, P.J. Extension, 4th main, Davangere.
9844120003

**AVOID MOSQUITOES**
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**TUTION**
IGCSE, ICSE, CBSE and State Board from Class 1 to 12, MCC 'A' Block
98444 92888

## ನಗರದಲ್ಲಿ ಇಂದು ಶ್ರೀ ಪಾತಾಳೇಶ್ವರ ವಿನಾಯಕ ಸೇವಾ ಸಂಘದಿಂದ ಹೋಮ



ಶ್ರೀ ಕೃಷ್ಣ ಭವಾನಿ ಗುಡಿ ಗಲ್ಲಿಯಲ್ಲಿ ಶ್ರೀ ಪಾತಾಳೇಶ್ವರಿ ವಿನಾಯಕ ಸೇವಾ ಸಂಘದಿಂದ ಇಂದು ಬೆಳಿಗ್ಗೆ ಗಣ ಹೋಮ, ಮಧ್ಯಾಹ್ನ ಮಧ್ಯಾಹ್ನ 12.30 ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ನಾಡಿದ್ದು ದಿನಾಂಕ 7 ರಂದು ಬೃಹತ್ ಶೋಭಾ ಯಾತ್ರೆ ಮುಖಾಂತರ ಸ್ವಾಮಿಯ ಮೂರ್ತಿಯ ವಿಸರ್ಜನೆ ಮಾಡಲಾಗುವುದು.

## ವಿಕಲಚೇತನ ವಧು-ವರರ ಸಮಾವೇಶ

ದಾವಣಗೆರೆ, ಅ. 4 - ಕೊಪ್ಪಳ ಜಿಲ್ಲೆಯ ಯಲಬುರ್ಗಾದ ಶ್ರೀ ವೀರಭದ್ರೇಶ್ವರ ವಿಕಲಚೇತನರ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆ ವತಿಯಿಂದ ರಾಜ್ಯದಲ್ಲಿ ಪ್ರಥಮ ಬಾರಿಗೆ ವಿಕಲಚೇತನ ವಧು-ವರರ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ವಿವರಗಳನ್ನು ಅಂಚೆ ವಿಳಾಸ ಶ್ರೀ ವೀರಭದ್ರೇಶ್ವರ ವಿಕಲಚೇತನರ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆ ಚನ್ನಮ್ಮ ಸರ್ಕಲ್ ಹತ್ತಿರ, ಅಮರೇಶ್ವರ ಮೆಡಿಕಲ್ ಸ್ಟೋರ್ ಹಿಂದುಗಡೆ, ಮುಧೋಳ ರಸ್ತೆ, ಯಲಬುರ್ಗಾ – 583236 ತಾ, ಜಿ, ಕೊಪ್ಪಳ ಇಲ್ಲಿಗೆ ಕಳುಹಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂ. ಸಂ: 9611282394ಗೆ ಸಂಪರ್ಕಿಸಬಹುದೆಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

# ಡಿಸಿಇಟಿ-ಪಿಜಿಸಿಇಟಿ ಪ್ರವೇಶಾತಿ : ಕಟ್ ಆಫ್ ಬಿಡುಗಡೆಗೆ ಆಗ್ರಹ

## ನಗರದಲ್ಲಿ ಎಬಿವಿಪಿ ಪ್ರತಿಭಟನೆ




ದಾವಣಗೆರೆ, ಅ. 4 - ಡಿಸಿಇಟಿ ಮತ್ತು ಪಿಜಿಸಿಇಟಿ ಪ್ರವೇಶಾತಿಯಲ್ಲಿ 2ನೇ ಸುತ್ತಿನ ಕಟ್ ಆಫ್ ಬಿಡುಗಡೆ ಮಾಡಿ ಮೂರನೇ ಸುತ್ತನ್ನು ನಡೆಸುವಂತೆ ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಉನ್ನತ ಪದವಿಗಳಿಗೆ ಸೇರಬೇಕೆಂಬುದು ಲಕ್ಷಾಂತರ ವಿದ್ಯಾರ್ಥಿಗಳ ಕನಸಾಗಿದ್ದು, ಇದಕ್ಕಾಗಿ ಹಗಲು ಇರುಳು ಶ್ರಮಪಟ್ಟು ಪ್ರವೇಶ ಪರೀಕ್ಷೆಗಳನ್ನು ಬರೆದು ಉತ್ತಮ ರ್‍ಯಾಂಕಿಂಗ್ ಪಡೆದು ಪ್ರತಿಷ್ಠಿತ ಕಾಲೇಜುಗಳಲ್ಲಿ ದಾಖಲಾಗುವ ಕನಸು ಕಂಡಿರುತ್ತಾರೆ. ಇಂತಹ ಕನಸು ಕಂಡ ವಿದ್ಯಾರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪಾರದರ್ಶಕ ಪ್ರಕ್ರಿಯೆ ಮೂಲಕ ಪ್ರೋತ್ಸಾಹವಾಗಿ ನಿಲ್ಲಬೇಕು.

ಆದರೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಈ ಪರೀಕ್ಷೆಗಳನ್ನು ಕೈಗೊಂಡು ಪ್ರವೇಶಾತಿಗಳನ್ನು ನೀಡುವ ನಿಟ್ಟಿನಲ್ಲಿ ಕೆಲವು ಲೋಪದೋಷಗಳನ್ನು ಮಾಡುತ್ತಿದೆ, ಅದರಲ್ಲಿ ಪ್ರಮುಖವಾದದ್ದು ಪ್ರಕ್ರಿಯೆ ಡಿಸಿಇಟಿ ಮತ್ತು ಪಿಜಿಸಿಇಟಿ ಮೊದಲಾಗಿದೆ ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಆರೋಪಿಸಿದರು.

ತಾಂತ್ರಿಕ ಶಿಕ್ಷಣದಲ್ಲಿ ಮುಂದುವರೆ ಯಬೇಕೆಂಬ ಅಪೇಕ್ಷೆಯನ್ನಿಟ್ಟುಕೊಂಡು ಡಿಪ್ಲೋಮಾ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ನೇರ ಎರಡನೇ ವರ್ಷದ ಇಂಜಿನಿಯರಿಂಗ್ ಪದವಿಗೆ ದಾಖಲಾಗುವ ಪ್ರವೇಶಾತಿ ಮತ್ತು ಎಂಬಿಎ, ಎಂಕಾಂನ ಉನ್ನತ ಪದವಿಗಳಿಗೆ ಸೇರುವ ಪ್ರಕ್ರಿಯೆಯಲ್ಲಿ ಪಿಜಿಸಿಇಟಿ ಲೋಪ ದೋಷಗಳು ಕಂಡುಬಂದಿವೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕಳೆದ ಎರಡು ವರ್ಷಗಳಿಂದ ಡಿಸಿಇಟಿ ಮತ್ತು ಪಿಜಿಸಿಇಟಿಯ ಎರಡನೇ ಸುತ್ತಿನ ಕಟ್ ಆಫ್ ಅಂಕಪಟ್ಟಿ ಮತ್ತು ಉಳಿದಿರುವ ವರದಿ ಪ್ರಕಟಿಸದೇ ಇರುವುದು ಅನೇಕ ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಪ್ರಕ್ರಿಯೆ, ಪ್ರವೇಶಾತಿ ಪ್ರಕ್ರಿಯೆ ಬಗ್ಗೆ ಸಂದೇಹ ಉಂಟು ಮಾಡುತ್ತಿದೆ ಎಂದು ಅಸಮಾಧಾನ ಹೊರಹಾಕಿದರು.

ಮೊದಲನೇ ಸುತ್ತಿನಲ್ಲಿ ಪ್ರವೇಶಾತಿ ಸಿಗದ ವಿದ್ಯಾರ್ಥಿಗಳು ಎರಡನೇ ಸುತ್ತಿನಲ್ಲಿ ತಮ್ಮ ಆಯ್ಕೆಗಳನ್ನು ನೀಡುತ್ತಾರೆ. ಆದರೆ ಇಲ್ಲಿಯೂ ಪ್ರವೇಶಾತಿ ಸಿಗದೆ, ಮೂರನೇ ಸುತ್ತಿನಲ್ಲಿ ತಮಗೆ ಬೇಕಾದಂತಹ ಕಾಲೇಜನ್ನು ಆಯ್ದುಕೊಳ್ಳಲು ಅನುಕೂಲವಾಗಲು ಎರಡನೇ ಸುತ್ತಿನ ಕಟ್ ಆಫ್ ಅಂಕ, ಪ್ರಮುಖವಾಗುತ್ತದೆ. ಆದರೆ ಎರಡನೇ ಸುತ್ತಿನಲ್ಲಿ ಪ್ರವೇಶಾತಿ ಪಡೆದ ಕೆಲ ವಿದ್ಯಾರ್ಥಿಗಳು ತಮಗೆ ನೀಡಿದಂತಹ ಕಾಲೇಜುಗಳಿಗೆ ಪ್ರವೇಶಾತಿಯನ್ನು ಪಡೆಯದೇ ಖಾಲಿ ಬಿಡುತ್ತಾರೆ. ಇಂತಹ ಸೀಟುಗಳನ್ನು ಕಾಲೇಜಿನ ಆಡಳಿತ ಮಂಡಳಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ತೋರಿಸಿಲ್ಲ, ಹೀಗಾಗಿ ವಿದ್ಯಾರ್ಥಿಗಳಿಗೆ ಯಾವ ಯಾವ ಕಾಲೇಜಿನಲ್ಲಿ ಎಷ್ಟೆಷ್ಟು ಸೀಟು ಖಾಲಿ ಇವೆ ಎಂಬುದು ತಿಳಿಯುತ್ತಿಲ್ಲ ಎಂದು ದೂರಿದ್ದಾರೆ.

ಕಾಲೇಜಿನ ಕಟ್ ಆಫ್ ತಿಳಿಯದೇ ವಿದ್ಯಾರ್ಥಿಗಳು ತಮ್ಮ ಆಯ್ಕೆಯ ಕೋರ್ಸ್ ಮತ್ತು ಕಾಲೇಜನ್ನು ಆಯ್ದುಕೊಳ್ಳುವುದು ಬಹಳ ಕಷ್ಟವಾಗಿದ್ದು, ಇದರಿಂದ ಸಾವಿರಾರು ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಪ್ರತಿಷ್ಠಿತ ಕಾಲೇಜುಗಳಲ್ಲಿ ಅಥವಾ ತಮ್ಮಿಷ್ಟದ ಕಾಲೇಜುಗಳಲ್ಲಿ ಮುಂದುವರಸಲಾಗುವುದಿಲ್ಲ. ಈ ಪ್ರಕ್ರಿಯೆಯಲ್ಲಿನ ಲೋಪದೋಷವು ಪ್ರವೇಶಾತಿಯಲ್ಲಿ ಪಾರದರ್ಶಕತೆಯ ಕೊರತೆಯನ್ನು ತೋರಿಸುತ್ತದೆ. ಎಬಿವಿಪಿ, ಈ ಹಿಂದೆ ಇದರ ಕುರಿತಾಗಿ ಪ್ರಾಧಿಕಾರದ ಗಮನಕ್ಕೆ ತಂದಿರುತ್ತದೆ, ಆದರೆ ಪರೀಕ್ಷಾ ಪ್ರಾಧಿಕಾರ ಜಾಲತಾಣಗಳಲ್ಲಿ ಎರಡನೇ ಸುತ್ತಿನ ಫಲಿತಾಂಶವನ್ನು ನೀಡುತ್ತಿಲ್ಲ.

ಆದ್ದರಿಂದ ಈ ವರ್ಷ ನಡೆದಂತಹ ಡಿಸಿಇಟಿ ಮತ್ತು ಪಿಜಿಸಿಇಟಿಯ ಪ್ರವೇಶಾತಿ ಪ್ರಕ್ರಿಯೆಯನ್ನು ಅತ್ಯಂತ ಪಾರದರ್ಶಕತೆಯಿಂದ ನಡೆಸುವಂತೆ ಹಾಗೂ ಎರಡು ಸುತ್ತಿನ ಕಟ್ ಆಫ್ ಫಲಿತಾಂಶವನ್ನು ಬಿಡುಗಡೆ ಮಾಡಿ ಮೂರನೇ ಸುತ್ತನ್ನು ನಡೆಸಿ, ಪ್ರಾಧಿಕಾರದ ವೆಬ್ ಸೈಟ್ ನಲ್ಲಿ ಪ್ರಕಟಿಸುವಂತೆ ಒತ್ತಾಯಿಸಿದರು.

ದಾವಣಗೆರೆ ವಿಭಾಗದ ಸಂಘಟನಾ ಕಾರ್ಯದರ್ಶಿ ಮಂಜುನಾಥ ಕೊಳ್ಳೇರ, ನಗರ ಸಂಘಟನಾ ಕಾರ್ಯದರ್ಶಿ ವರುಣ್, ನಗರ ಸಹ ಕಾರ್ಯದರ್ಶಿ ಮೋಹಿತ್, ತನುಷ, ತನೋಜ್, ಪ್ರಜ್ವಲ್ ಮತ್ತಿತರರು ಪ್ರತಿಭಟನೆಯಲ್ಲಿದ್ದರು.

# ಗುರು - ಹಿರಿಯರಿಗೆ ಗೌರವ ವಿದ್ಯಾರ್ಥಿಗಳ ದಿಕ್ಕನ್ನೇ ಬದಲಾಯಿಸುತ್ತದೆ

## ಜಿಎಂ ವಿಶ್ವವಿದ್ಯಾಲಯದ ಕಾರ್ಯಕ್ರಮದಲ್ಲಿ ಮಂಜಮ್ಮ ಜೋಗತಿ



ದಾವಣಗೆರೆ, ಅ.4- ಯಾವ ವಿದ್ಯಾರ್ಥಿಗಳು ನಿಷ್ಠೆ ಮತ್ತು ಶ್ರದ್ಧೆಯಿಂದ ಕೆಲಸ ಮಾಡುತ್ತಾರೋ ಹಾಗೂ ಗುರು-ಹಿರಿಯರಿಗೆ ಗೌರವ ಕೊಡುತ್ತಾರೋ ಅಂತಹ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉನ್ನತ ಸ್ಥಾನಕ್ಕೆ ಹೋಗಬಲ್ಲರು ಎಂದು ಪದ್ಮಶ್ರೀ ಪುರಸ್ಕೃತರೂ, ಕರ್ನಾಟಕ ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷರೂ ಆದ ಮಂಜಮ್ಮ ಜೋಗತಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಜಿಎಂ ವಿಶ್ವವಿದ್ಯಾಲಯದ ಮೊದಲ ವರ್ಷದ ಇಂಜಿನಿಯರಿಂಗ್ ಮತ್ತು ಬಿಸಿಎ ವಿದ್ಯಾರ್ಥಿಗಳಿಗೆ ಇಂದು ಹಮ್ಮಿಕೊಂಡಿದ್ದ ಇಂಡಕ್ಷನ್ ಪ್ರೋಗ್ರಾಮನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಅತಿ ಮುಖ್ಯ, ಶಿಕ್ಷಣದಿಂದ ವಿನಯ, ಶ್ರದ್ಧೆ, ಭಕ್ತಿ ಮತ್ತು ನಿಷ್ಠೆ ಬೆಳೆಸಿಕೊಳ್ಳಬಹುದಾಗಿದೆ. ಶಿಕ್ಷಣ ಅರಿತ ಯಾವುದೇ ವಿದ್ಯಾರ್ಥಿ ಸಮಯವನ್ನು ವ್ಯರ್ಥ ಮಾಡಲಾರ. ನೀವೆಲ್ಲ ಸಮಯಕ್ಕೆ ಗೌರವ ಕೊಡುವುದರ ಮುಖಾಂತರ ಉತ್ತಮ ವಿದ್ಯಾರ್ಥಿ ಗಳಾಗಿ ಹೊರಹೊಮ್ಮಬೇಕೆಂದು ತಿಳಿಸಿದರು.

ತಮ್ಮ ಜೀವನದಲ್ಲಾದ ಕಹಿ ಘಟನೆಗಳನ್ನು ನೆನಪಿಸಿಕೊಳ್ಳುತ್ತಾ, ತಾವು ನಡೆದ ಬಂದ ಹಾದಿ ಮತ್ತು ಇತ್ತೀಚಿಗೆ ಕೊಡ ಮಾಡಿದ ಪದ್ಮಶ್ರೀ ಪ್ರಶಸ್ತಿ ಯವರಿಗೂ ವಿದ್ಯಾರ್ಥಿಗಳಿಗೆ ವಿವರಿಸಿದರು.

ಜಿಎಂ ವಿಶ್ವವಿದ್ಯಾಲಯದ ಸಹ ಉಪಕುಲಪತಿ ಡಾ.ಎಚ್.ಡಿ. ಮಹೇಶಪ್ಪ ಮಾತನಾಡಿ, ವಿದ್ಯಾರ್ಥಿ ಗಳಿಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಮತ್ತು ಸೌಲಭ್ಯಗಳನ್ನು ಒದಗಿಸಿದ್ದು, ವಿದ್ಯಾರ್ಥಿಗಳು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂದು ಕರೆ ಕೊಟ್ಟರು. ಡೀನ್ ಫಾರ್ ಫ್ಯಾಕಲ್ಟಿ ಆಫ್ ಇಂಜಿನಿಯರಿಂಗ್ ಡಾ.ಜಿ. ಎಮ್. ಪಾಟೀಲ್ ಮಾತನಾಡಿದರು.

ಜಿಎಂಎಸ್ ಅಕಾಡೆಮಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಶ್ವೇತಾ ಮರಿಗೌಡರ್, ಜಿಎಂಐಟಿ ಕಾಲೇಜಿನ ಪ್ರಾಂಶುಪಾಲರಾದ ಡಾ ಸಂಜಯ್ ಪಾಂಡೆ ಎಂಬಿ, ಜಿಎಂ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ರಿಜಿಸ್ಟ್ರಾರ್ ಡಾ. ಸುನಿಲ್ ಕುಮಾರ್ ಬಿಎಸ್, ಡೀನ್ ಫಾರ್ ಫ್ಯಾಕಲ್ಟಿ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ಡಾ.ಬಸವರಾಜ ಸ್ವಾಮಿ ಇತರರಿದ್ದರು.

ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ತೇಜಸ್ವಿ ಕಟ್ಟಿಮನಿ ಟಿ.ಆರ್ ನಿರೂಪಿಸಿದರು.

# ಆರನೇಕಲ್ಲು ನಿವಾಸಿಗಳಿಗೆ ಹಕ್ಕುಪತ್ರ ವಿತರಣೆ



ದಾವಣಗೆರೆ, ಅ. 4 - ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆರನೇಕಲ್ಲು (ತರಳಬಾಳು ನಗರ) ಗ್ರಾಮದಲ್ಲಿ ಹಲವು ವರ್ಷಗಳಿಂದ ವಾಸಿಸುತ್ತಿದ್ದ ಅಲೆಮಾರಿಗಳ ಜನಾಂಗದವರಿಗೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಹಕ್ಕುಪತ್ರ ವಿತರಿಸಿದರು.

ಅಲೆಮಾರಿ ಜನಾಂಗದವರು ಹಲವು ವರ್ಷಗಳಿಂದ ಆರನೇಕಲ್ಲು (ತರಳಬಾಳು ನಗರ) ಗ್ರಾಮದ ಖಾಸಗಿ ಜಮೀನಿನಲ್ಲಿ ನೆಲೆಸಿದ್ದು, ಹಕ್ಕುಪತ್ರಕ್ಕಾಗಿ ಶಾಸಕರ ಬಳಿ ಮನವಿ ಮಾಡಿಕೊಂಡಿದ್ದ ಹಿನ್ನೆಲೆಯಲ್ಲಿ ಶಾಸಕರು ಖಾಸಗಿ ಜಮೀನಿನ ಮಾಲೀಕರೊಂದಿಗೆ ಮಾತುಕತೆ ನಡೆಸಿ ಹಕ್ಕುಪತ್ರ ನೀಡಲು ವ್ಯವಸ್ಥೆ ಮಾಡಿದ್ದು, ಇಂದು ಅಧಿಕೃತವಾಗಿ ಹಕ್ಕುಪತ್ರ ವಿತರಿಸಿದರು.

ಈ ಸಂದರ್ಭದಲ್ಲಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಜಿ.ಸಿ.ನಿಂಗಪ್ಪ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಹದಡಿ ಹಾಲಪ್ಪ, ತಾಲ್ಲೂಕು ಪಂಚಾಯತ್ ಮಾಜಿ ಸದಸ್ಯ ಮಂಜಣ್ಣ, ಆರ್.ಎನ್.ಹನುಮಂತಪ್ಪ, ನಿಟುವಳ್ಳಿ ಮಂಜಣ್ಣ, ಆರ್.ಎಸ್. ಹೇಮಣ್ಣ, ಶಿರಮಗೊಂಡನಹಳ್ಳಿ ರುದ್ರೇಶ್, ತುರ್ಚಘಟ್ಟ ರಿಯಾಜ್, ಇರ್ಫಾನ್, ಹದಡಿ ಪಿಡಿಓ ಜಗದೀಶ್ ಮತ್ತಿತರರಿದ್ದರು.

## ಕುರ್ಕಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಅಭಿವೃದ್ಧಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಕೊಡುಗೆ



ದಾವಣಗೆರೆ, ಅ.4- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ ಟ್ರಸ್ಟ್ ದೇವನಗರಿ ಯೋಜನೆ ಕಚೇರಿ ವ್ಯಾಪ್ತಿಯಲ್ಲಿ ಬರುವ ಕುರ್ಕಿ ವಲಯದ ಕುರ್ಕಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಅಭಿವೃದ್ಧಿಗಾಗಿ ಶ್ರೀ ಕ್ಷೇತ್ರದ ವತಿಯಿಂದ 1,50,000 ರೂ. ಮೊತ್ತದ ಡಿ.ಡಿ. ಯನ್ನು ಬಾಡಾ ವಲಯದ ಮೇಲ್ವಿಚಾರಕರಾದ ಈರಣ್ಣ ಅವರು, ದೇವಸ್ಥಾನದ ಅಧ್ಯಕ್ಷರಾದ ನಟರಾಜ ಕೆ.ಎನ್. ಅವರಿಗೆ ವಿತರಿಸಿದರು.

ಈ ಸಂದರ್ಭದಲ್ಲಿ ವಲಯ ಮೇಲ್ವಿಚಾರಕ ಲಕ್ಷ್ಮಣ, ದೇವಸ್ಥಾನ ಕಮಿಟಿಯ ಪದಾಧಿಕಾರಿಗಳು ಮತ್ತು ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು, ಸೇವಾಪ್ರತಿನಿಧಿ ಮಂಜುಳಾ ಮತ್ತು ಇತರರು ಉಪಸ್ಥಿತರಿದ್ದರು.

## ಗಾಂಧಿ ಗ್ರಾಮ ಪುರಸ್ಕಾರ ಪಡೆದ ಕೊಟ್ಟೂರು ತಾಲ್ಲೂಕು ಹ್ಯಾಳ್ಯಾ ಗ್ರಾಮ ಪಂಚಾಯತಿ



ಕೊಟ್ಟೂರು

ಕೊಟ್ಟೂರು, ಅ.. 4 - ಗಾಂಧಿ ಗ್ರಾಮ ಪುರಸ್ಕಾರ ಪಡೆದ ಕೊಟ್ಟೂರು ತಾಲ್ಲೂಕು ಹ್ಯಾಳ್ಯಾ ಗ್ರಾಮ ಪಂಚಾಯತಿಯವರು ಗ್ರಾಮೀಣ ಅಭಿವೃದ್ಧಿ ಸಚಿವ ಪ್ರಿಯಾಂಕಾ ಖರ್ಗೆಯವರಿಂದ ಪ್ರಶಸ್ತಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷ ಪಿ. ಹೆಚ್. ರಾಘವೇಂದ್ರ, ಪಿಡಿಓ ಸಿ. ಹೆಚ್. ಎಂ. ಗಂಗಾಧರಯ್ಯ, ಡಿಇಓ ಸ್ವತಂತ್ರ ಇದ್ದಾರೆ.

## ನೌಕಾ ದಳಕ್ಕೆ ಸಮುದ್ರದಲ್ಲಿ ವಹಿವಾಟು ನಡೆಸುವ ಡೆಬಿಟ್ ಕಾರ್ಡ್

ನವದೆಹಲಿ, ಅ. 4 – ನೌಕಾ ದಳದವರು ಸಮುದ್ರದಲ್ಲಿರುವಾಗ ಆಫ್‌ಲೈನ್ ವಹಿವಾಟು ನಡೆಸಲು ನೆರವಾಗುವ ಎರಡು ಚಿಪ್‌ಗಳ ವಿಶಿಷ್ಟ ಡೆಬಿಟ್ ಕಾರ್ಡನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬಿಡುಗಡೆ ಮಾಡಿದ್ದಾರೆ. ಎಸ್.ಬಿ.ಐ. ನೇವ್‌ಕ್ಯಾಶ್ ಕಾರ್ಡ್ ಅನ್ನು ಬ್ಯಾಂಕುಗಳ ಸಂಪರ್ಕ ಇಲ್ಲದೆಯೂ ಬಳಸಬಹುದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಗಾಂಧೀಜಿ - ಶಾಸ್ತ್ರೀಜಿ ಸದಾ ಸ್ಮರಣೀಯರು

## ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆಯಲ್ಲಿ ಮಹಾತ್ಮರ ಜಯಂತಿ ಆಚರಣೆ



ಎಲೆಬೇತೂರು

ಎಲೆಬೇತೂರು, ಅ. 4- ಇಲ್ಲಿನ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಮತ್ತು ತರಳಬಾಳು ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಯುಕ್ತಾಶ್ರಯದಲ್ಲಿ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಂ. ಬಸವರಾಜಪ್ಪ ಮಾತನಾಡಿ, ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಸಾವಿರಾರು ಜನ ತನು-ಮನ-ಧನ ಅರ್ಪಿಸಿದ್ದಾರೆ. ಅವರಲ್ಲಿ ರಾಷ್ಟ್ರಪಿತ ಮಹತ್ಮಾ ಗಾಂಧೀಜಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರೀಜಿಯವರು ಸದಾ ಸ್ಮರಣೀಯರು. ಅವರ ಬದುಕು-ಬರಹಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ ಎಂದರು.

ಮುಖ್ಯ ಅತಿಥಿಗಳಾಗಿದ್ದ ಪ್ರಾಥಮಿಕ ಶಾಲೆಯ ಸ್ಥಳೀಯ ಸಲಹಾ ಸಮಿತಿಯ ಅಧ್ಯಕ್ಷ ಹೆಚ್. ಬಸವರಾಜಪ್ಪ ಮಾತನಾಡಿ, ಇನ್ನೊಬ್ಬರಿಗಾಗಿ, ಸಮಾಜಕ್ಕಾಗಿ, ದೇಶಕ್ಕಾಗಿ ಯಾರು ತ್ಯಾಗ ಮಾಡುತ್ತಾರೋ ಅವರು ಸತ್ತೂ ಬದುಕಿರುತ್ತಾರೆ. ಅಂಥವರಲ್ಲಿ ಎಲೆಬೇತೂರಿನ ಮಾಳಿಗೇರ ಕುರುವೆತ್ತಪ್ಪ ಮತ್ತು ಮಾಗೋಡರ ಹನುಮಂತಪ್ಪ ಪ್ರಮುಖರು ಎಂದರು.

ಮುಖ್ಯ ಅತಿಥಿಗಳಾದ ಮರುಳ ಸಿದ್ದಪ್ಪ ಜೀವನದಲ್ಲಿ ಬದಲಾವಣೆಯಾಗಲು ಈ ಇಬ್ಬರ ವ್ಯಕ್ತಿತ್ವ ರೂಢಿಸಿಕೊಳ್ಳಬೇಕು. ಸತ್ಯಹರಿಶ್ಚಂದ್ರ ನಾಟಕ ಗಾಂಧೀಜಿಯವರ ಬದುಕಿಗೆ ಬದಲಾವಣೆ ತಂದಿತು. ಸತ್ಯ ಪರಮನಿಷ್ಠವಾದುದು. ಸತ್ಯದ ಹಾದಿ ಎಂದೂ ಕಠಿಣ. ಆದರೆ ಅದರ ಫಲ ಮಾತ್ರ ಮಧುರವಾದುದು. ಗಾಂಧೀಜಿಯಂತೆ ತಪ್ಪುಗಳನ್ನು ತಿದ್ದಿಕೊಳ್ಳುವ ಪ್ರಾಮಾಣಿಕತೆಯನ್ನು ರೂಢಿಸಿಕೊಳ್ಳಬೇಕು. ಅವರು ಶಾಂತಿಯಿಂದ ಸ್ವಾತಂತ್ರ್ಯ ತಂದುಕೊಟ್ಟ ಮಾರ್ಗ ವಿನೂತನವಾದುದು. ಶಾಸ್ತ್ರಿ ಅವರ ಪ್ರಾಮಾಣಿಕತೆ ಇಂದಿನ ರಾಜಕಾರಣದಲ್ಲಿ ಕಾಣುವುದು ವಿರಳ. ಅಂದಿನ ಬಡತನ ಇಂದಿಲ್ಲ. ಮಕ್ಕಳು ಹೆಚ್ಚು ಹೆಚ್ಚು ಓದುಬೇಕು ಎಂದರು.

ಮುಖ್ಯ ಅತಿಥಿಗಳಾಗಿದ್ದ ಎಂ ಷಡಕ್ಷರಪ್ಪ, ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕಿ ಬಿ. ಎಂ. ಶಶಿಕಲಾ, ಕನ್ನಡ ಮಾಧ್ಯಮ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಎಂ.ಬಿ. ಪ್ರೇಮಾ, ವಿದ್ಯಾರ್ಥಿ ಭಾಷಣಕಾರರಾದ ಡಿ. ಎಸ್. ಸುಪ್ರಭೆ, ಚಿನ್ಮಯಿ, ಎಂ. ವಿನುತ, ಅಂಕಿತ ಮತ್ತು ವಿದ್ಯಾ ಮಾತನಾಡಿದರು.

ವೇದಿಕೆಯ ಮೇಲೆ ಕಾರ್ಯದರ್ಶಿ ಸ್ಥಳೀಯ ಸಲಹಾ ಸಮಿತಿಯ ಸದಸ್ಯರಾದ ವಿರೂಪಾಕ್ಷಪ್ಪ ಮತ್ತು ರಾಜಪ್ಪ ಉಪಸ್ಥಿತರಿದ್ದರು. ಪುಟಾಣಿ ದೃಷ್ಟಿ 'ಗಾಂಧೀಜಿ' ಕುರಿತು ಮಾತನಾಡಿದರು. ಬಾಲಗೀತೆ ಹಾಡಿದುದು ಮತ್ತು ಶಿಕ್ಷಕಿ ಪಿ.ಎಂ. ಉಷಾ ಗಾಂಧೀಜಿಯವರ ನೆಚ್ಚಿನ ಪ್ರಾರ್ಥನಾ ಗೀತೆ 'ರಘುಪತಿ ರಾಘವ ರಾಜಾ ರಾಮ್' ಹೇಳಿಕೊಟ್ಟದ್ದು ಎಲ್ಲರ ಗಮನ ಸೆಳೆಯಿತು.

ವರ್ಷಿಣಿ ಮತ್ತು ಸಂಗಡಿಗರು ಪ್ರಾರ್ಥಿಸಿದರೆ, ಶಿಕ್ಷಕ ಎಸ್.ಓ. ಷಣ್ಮುಖಪ್ಪ ಸ್ವಾಗತಿಸಿದರು. ಶಿಕ್ಷಕಿ ಎಲ್.ಎಸ್. ವಸಂತ ವಂದಿಸಿದರು. ಜಿ. ಆರ್. ಸುನಿತಾ ಕಾರ್ಯಕ್ರಮ ನಿರ್ವಹಿಸಿದರು.

## ಜನಸಂಖ್ಯೆ ಆಧರಿತ ಹಕ್ಕು ಪ್ರಶ್ನಿಸಿದ ಸಿಂಘ್ವಿ

### ರಾಹುಲ್ ನಿಲುವಿಗೆ ವ್ಯತಿರಿಕ್ತವಾದ ಟ್ವೀಟ್ ಡಿಲೀಟ್ ಮಾಡಿದ ಕಾಂಗ್ರೆಸ್ ನಾಯಕ

ನವದೆಹಲಿ, ಅ. 4 – ಎಷ್ಟು ಜನಸಂಖ್ಯೆಯೋ ಅಷ್ಟು ಹಕ್ಕು ಎಂಬ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನಿಲುವಿಗೆ ಭಿನ್ನ ಹೇಳಿಕೆ ನೀಡಿದ್ದ ಕಾಂಗ್ರೆಸ್ ಹಿರಿಯ ನಾಯಕ ಅಭಿಷೇಕ್ ಸಿಂಘ್ವಿ, ನಂತರ ತಮ್ಮ ಹೇಳಿಕೆಯನ್ನು ವಾಪಸ್ ಪಡೆದಿದ್ದಾರೆ.

ಸಿಂಘ್ವಿ ಕಾಂಗ್ರೆಸ್ ವಕ್ತಾರರಾಗಿದ್ದಾರೆ ಹಾಗೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ಜಿತ್ನಿ ಆಬಾದಿ ಉತ್ನಾ ಹಕ್' (ಎಷ್ಟು ಜನಸಂಖ್ಯೆಯೋ ಅಷ್ಟು ಹಕ್ಕು) ಎಂದು ಪ್ರತಿಪಾದಿಸುತ್ತಿದ್ದಾರೆ.

ಈ ನಡುವೆ ಹೇಳಿಕೆ ನೀಡಿದ್ದ ಸಿಂಘ್ವಿ, ಅವಕಾಶದಲ್ಲಿ ಸಮಾನತೆ ಹಾಗೂ ಫಲಿತಾಂಶದಲ್ಲಿ ಸಮಾನತೆ ಒಂದೇ ಅಲ್ಲ. ಎಷ್ಟು ಜನಸಂಖ್ಯೆಯೋ ಅಷ್ಟೇ ಹಕ್ಕು ಎಂದು ಹೇಳುವವರು ಅದರ ಪರಿಣಾಮಗಳನ್ನು ಮೊದಲು ತಿಳಿದುಕೊಳ್ಳಬೇಕು. ಅಂತಿಮವಾಗಿ ಈ ನೀತಿ ಬಹುಮತವಾದಕ್ಕೆ ದಾರಿಮಾಡಿಕೊಡುತ್ತದೆ ಎಂದಿದ್ದರು. ಟ್ವೀಟ್ ಮೂಲಕ ನೀಡಿದ್ದ ಹೇಳಿಕೆಯನ್ನು ಸಿಂಘ್ವಿ ನಂತರ ಅಳಿಸಿದ್ದಾರೆ.

## 26ಕ್ಕೆ ಸಾರಿಗೆ ಪ್ರಾಧಿಕಾರದ ಸಭೆ

ದಾವಣಗೆರೆ, ಅ. 4 - ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಇದೇ ದಿನಾಂಕ 26 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ಏರ್ಪಡಿಸಲಾಗಿದೆ.

ರಹದಾರಿಗೆ ಅರ್ಜಿ ಸಲ್ಲಿಸಲು ಇದೇ ದಿನಾಂಕ 13 ಕೊನೆ ದಿನ. ಅರ್ಜಿ ಸಲ್ಲಿಸಿದ ರಹದಾರಿದಾರರು ಸಭೆಗೆ ಹಾಜರಾಗಬೇಕು ಎಂದು ಆರ್‌ಟಿಓ ಕಾರ್ಯದರ್ಶಿ ಶ್ರೀಧರ್ ತಿಳಿಸಿದ್ದಾರೆ.

## ಓದುಗರ ಪತ್ರ

### ದುಬಾರಿ ಶುಲ್ಕ ಇಳಿಸಿ

**ಮಾನ್ಯರೇ,**

ಚಿತ್ರದುರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಲ್ಲಿ 65 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಒಟ್ಟು ಆರು ದರ್ಜೆಯ ಎಲ್ಲಾ ಹುದ್ದೆಗಳಿಗೂ ದುಬಾರಿ ಶುಲ್ಕ ವಿಧಿಸಿರುವುದು ಸರಿಯಲ್ಲ. ಸಾಮಾನ್ಯ ವರ್ಗ, ಹಿಂದುಳಿದ ವರ್ಗದವರಿಗೆ 1500 ರೂಪಾಯಿ ಇದ್ದು, ಎಸ್ ಸಿ, ಎಸ್ ಟಿ ಅಭ್ಯರ್ಥಿಗಳಿಗೆ 750 ರೂಪಾಯಿ ನಿಗದಿಪಡಿಸಲಾಗಿದೆ. ಕೆ.ಪಿ.ಎಸ್.ಸಿ ಪರೀಕ್ಷೆಗಳಿಗೆ ಹೋಲಿಸಿದರೆ ಈ ಶುಲ್ಕ ತುಸು ದುಬಾರಿ ಎನಿಸುತ್ತದೆ. ಕಳೆದ ತಿಂಗಳು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಲ್ಲಿಯೂ ಅರ್ಜಿ ಆಹ್ವಾನಿಸಿದ್ದು ಶುಲ್ಕ 500, 1000 ರೂಪಾಯಿ ಇತ್ತು. ಕೊನೆಯ ಪಕ್ಷ ಹುದ್ದೆಯ ದರ್ಜೆಯ ಮೇಲೆಯಾದರೂ ಶುಲ್ಕ ನಿಗದಿಪಡಿಸಲಿ. ಸಹಾಯಕ ಪ್ರಧಾನ ವ್ಯವಸ್ಥಾಪಕರಿಗೂ ಒಂದೇ ಶುಲ್ಕ, ಅಟೆಂಡರ್, ಚಾಲಕ ಹುದ್ದೆಗಳಿಗೂ ಒಂದೇ ಶುಲ್ಕ ಎಂದರೆ ಹೇಗೆ? ಪರೀಕ್ಷಾ ಅಭ್ಯರ್ಥಿಗಳು ಕೆಲಸಕ್ಕೆ ಹೋಗುವಂತವರಾದರೇನೊ ಸರಿ. ಆದರೆ ಯಾವುದೇ ಕೆಲಸ ಮಾಡದೇ, ಉದ್ಯೋಗದ ನಿರೀಕ್ಷೆಯಲ್ಲಿರುವ ಆಕಾಂಕ್ಷಿಗಳಿಗೆ ಈ ಶುಲ್ಕ ತುಸು ಜಾಸ್ತಿಯೇ ಆಗುತ್ತದೆ. ದಯವಿಟ್ಟು ಸರ್ಕಾರ ಈ ದುಬಾರಿ ಶುಲ್ಕವನ್ನು ಇಳಿಸಿ, ಉದ್ಯೋಗ ಆಕಾಂಕ್ಷಿಗಳ ನೆರವಿಗೆ ನಿಲ್ಲಬೇಕಾಗಿದೆ.

**- ಮುರುಗೇಶ ಡಿ.,** ದಾವಣಗೆರೆ.

# ಜಿಲ್ಲೆಯಾದ್ಯಂತ ಆರೋಗ್ಯ ದಾಸೋಹ ವಿಸ್ತರಣೆ

## ಪ್ರೀತಿ ಆರೈಕೆ ಟ್ರಸ್ಟ್‌ನಿಂದ ನ್ಯಾಮತಿಯಲ್ಲಿ ಆರೋಗ್ಯ ಉಚಿತ ಶಿಬಿರ : ಡಾ. ರವಿಕುಮಾರ್



ನ್ಯಾಮತಿ, ಅ. 4 - ದಾವಣಗೆರೆ ಜಿಲ್ಲೆಯಾದ್ಯಂತ ಪ್ರತಿ ಹಳ್ಳಿ, ಹೋಬಳಿ ಕ್ಷೇತ್ರದಲ್ಲಿಯೂ ಉಚಿತವಾಗಿ ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜಿಸುವ ಮೂಲಕ ಆರೋಗ್ಯ ದಾಸೋಹದ ಸಂಕಲ್ಪ ಮಾಡಲಾಗಿದೆ ಎಂದು ದಾವಣಗೆರೆಯ ಪ್ರೀತಿ ಆರೈಕೆ ಟ್ರಸ್ಟ್ ಕಾರ್ಯದರ್ಶಿಯೂ ಆದ ಹಿರಿಯ ವೈದ್ಯ ಡಾ. ರವಿಕುಮಾರ್ ಟಿ.ಜಿ ಹೇಳಿದರು.

ಹೊನ್ನಾಳಿ ಸಮೀಪದ ನ್ಯಾಮತಿಯ ಶ್ರೀ ಮಹಾಂತೇಶ್ವರ ಕಲ್ಯಾಣ ಮಂಟಪದಲ್ಲಿ ಪ್ರೀತಿ ಆರೈಕೆ ಟ್ರಸ್ಟ್ ಮತ್ತು ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ನಿನ್ನೆ ನಡೆದ ಆರೋಗ್ಯ ತಪಾಸಣೆ ಉಚಿತ ಶಿಬಿರದಲ್ಲಿ ಅವರು ಮಾತನಾಡಿದರು.

ಭಾರತದ ಸಂಸ್ಕೃತಿಯಲ್ಲಿ ಶಿಕ್ಷಣ ಮತ್ತು ಆಹಾರವನ್ನು ದಾಸೋಹದ ರೂಪದಲ್ಲಿ ನೀಡಲಾಗುತ್ತಿದೆ. ಇದರ ಪ್ರೇರಣೆ ಪಡೆದು ಪ್ರೀತಿ ಆರೈಕೆ ಟ್ರಸ್ಟ್ ಮೂಲಕ ಆರೋಗ್ಯದ ತಪಾಸಣೆಯನ್ನು ಉಚಿತವಾಗಿ ಮಾಡಲಾಗುವುದು. ನಗರ ಪ್ರದೇಶದಿಂದ ದೂರವಿರುವ ಗ್ರಾಮೀಣರಿಗೆ ಬೇರೆ ಬೇರೆ ಕಾರಣಗಳಿಂದ ಆರೋಗ್ಯದ ತಪಾಸಣೆ ಮಾಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇದನ್ನು ಗಮನದಲ್ಲಿ ಇರಿಸಿಕೊಂಡು ಮನೆ ಬಾಗಿಲಿಗೇ ಬಂದು ಉಚಿತವಾಗಿ ಆರೋಗ್ಯ ತಪಾಸಣೆ ಮಾಡುವ ಕಾರ್ಯಕ್ಕೆ ಮುಂದಾಗಿದ್ದೇವೆ ಎಂದರು.

ಪಟ್ಟಣ ಪಂಚಾಯಿತಿ ಅಧಿಕಾರಿ ಗಣೇಶ್ ರಾವ್, ಆರೋಗ್ಯ ಇಲಾಖೆಯ ಹರ್ಷವರ್ಧನ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ರವಿ ಎಸ್. ಟಿ. ಮತ್ತು ಸಿಬ್ಬಂದಿ ಶಿಬಿರದ ಸಂಯೋಜಕ ವಿನೋದ್, ಉದ್ಯಮಿಗಳಾದ ನಾಗರಾಜಸ್ವಾಮಿ, ವೈದ್ಯರಾದ ಡಾ. ಶಾಹಿದ್ ಅಹ್ಮದ್, ಟ್ರಸ್ಟ್ ಸಿಬ್ಬಂದಿಗಳಾದ ರವಿಕುಮಾರ್, ವಿಜಯ್, ಬಿ. ಆರ್. ಕಲ್ಲೇಶ್, ಎಚ್.ಡಿ.ಕುಮಾರ್, ಸುದೀಪ್ ಇನ್ನಿತರರು ಇದ್ದರು.

## ದೇಶೀಯ ಕ್ರೀಡೋತ್ಸವಕ್ಕೆ ಒಲವು

ರಾಣೇಬೆನ್ನೂರು

ರಾಣೇಬೆನ್ನೂರು, 4 - ದೇಶೀಯ ಆಟಗಳು ಕಣ್ಮರೆಯಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಯುವಕರು ಕೇವಲ ಮೊಬೈಲ್‌ಗಳ ದಾಸರಾಗದೇ ಕಬಡ್ಡಿ, ಖೋಖೋ ದಂತಹ ದೇಶೀಯ ಕ್ರೀಡೆಗಳನ್ನಾಡಬೇಕು ಎಂದು ಕ್ರೀಡೋತ್ಸವ ಉದ್ಘಾಟಿಸಿ ಶ್ರೀ ಸತ್ಯನಾರಾಯಣ ಹೊಳಬಾಗಿಲ ಕರೆ ನೀಡಿದರು.

ನಗರದ ದೀನಬಂಧು ಸೇವಾ ಸಮಿತಿ ವತಿಯಿಂದ ದೇವರಗುಡ್ಡ ಗ್ರಾಮದಲ್ಲಿ ಗ್ರಾಮಾಂತರ ಕ್ರೀಡೋತ್ಸವ ನಡೆಯಿತು.

ಈ ಸಂದರ್ಭದಲ್ಲಿ ದೀನಬಂಧು ಸೇವಾ ಸಮಿತಿ ಮುಖ್ಯಸ್ಥರಾದ ಅಶೋಕ ನಾಡಿಗೇರ, ಹಾಗೂ ಮಹೇಶ ಶೇಪೂರ, ಮಾರ್ತಾಂಡ ಕುಲಕರ್ಣಿ, ರಾಘವೇಂದ್ರ, ವಿನಾಯಕ ತಳಗೇರಿ, ಪ್ರಭು ಪಾಟೀಲ್, ನಾಗರಾಜ ಹೊನ್ನಜೋಗಿ, ನವೀನ ಹೊನ್ನಜೋಗಿ, ಉಮೇಶ ಹರಿಸತ್ಯನವರ ಮುಂತಾದವರು ಉಪಸ್ಥಿತರಿದ್ದರು.



ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)
ಅಥಣಿ ಸ್ನಾತಕೋತ್ತರ ಕೇಂದ್ರ, ದಾವಣಗೆರೆ.
ಎಸ್.ಎಸ್. ಲೇಔಟ್, 'ಎ' ಬ್ಲಾಕ್, ದಾವಣಗೆರೆ-04. PH : 08192 221669 Mob : 98444 82100 www.sbcfgc.com email: sbcdvg12@rediffmail.com
ಪ್ರವೇಶ ಪ್ರಕಟಣೆ : 2023-24 : ಎಂ.ಕಾಂ. ಎಂ.ಎ.ಅರ್ಥಶಾಸ್ತ್ರ ಮತ್ತು ಎಂ.ಎ.ಇಂಗ್ಲಿಷ್
2023-24 ನೇ ಸಾಲಿನ ದಾವಣಗೆರೆ ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಗೊಂಡ ಮತ್ತು ಕರ್ನಾಟಕ ಸರ್ಕಾರದ ಅನುಮತಿಯೊಂದಿಗೆ ನಮ್ಮ ಕಾಲೇಜಿನಲ್ಲಿ ಎಂ.ಕಾಂ., ಎಂ.ಎ.ಅರ್ಥಶಾಸ್ತ್ರ ಮತ್ತು ಎಂ.ಎ.ಇಂಗ್ಲಿಷ್ ಸ್ನಾತಕೋತ್ತರ ಪದವಿಗಳಿಗೆ ಆಡಳಿತ ಮಂಡಳಿ ಕೋಟಾದಲ್ಲಿ (Management Quota) ಪ್ರವೇಶ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಹಾಗೂ ಆಡಳಿತ ಮಂಡಳಿಯ ಕೋಟಾದಲ್ಲಿ ಪ್ರವೇಶ ಪಡೆದುಕೊಳ್ಳುವ ವಿದ್ಯಾರ್ಥಿಗಳಿಗೆ ದಾವಣಗೆರೆ ವಿಶ್ವವಿದ್ಯಾನಿಲಯ ನಡೆಸುವ ಪರೀಕ್ಷೆಯು(PG Entrence Exam) ಕಡ್ಡಾಯವಾಗಿರುತ್ತದೆ.
ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ಇತರೆ ವಿಶ್ವವಿದ್ಯಾನಿಲಯದ ಅಭ್ಯರ್ಥಿಗಳು ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಆದ್ದರಿಂದ ಪ್ರವೇಶ ಪಡೆಯಲು ಇಚ್ಚಿಸುವ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗೆ ಕಾಲೇಜಿನ ಕಚೇರಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಆಫ್‌ಲೈನ್ (ವಿಶ್ವವಿದ್ಯಾನಿಲಯಕ್ಕೆ ಖುದ್ದಾಗಿ)
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 13.10.2023
Web: http://www.davangereuniversity.ac.in
www.davangereuniversity.ac.in
ಪ್ರವೇಶಕ್ಕೆ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
98444-82100, 99646-75300,
98445-08476, 83103-26223

# ಜನಪ್ರತಿನಿಧಿಗಳ ಅಪರಾಧಕ್ಕೆ ವಿನಾಯಿತಿ ನೀಡಬಹುದೇ ?

## ಸುಪ್ರೀಂ ಕೋರ್ಟ್‌ನ ಏಳು ಸದಸ್ಯರ ಪೀಠದಿಂದ ವಿಚಾರಣೆ



ನವದೆಹಲಿ, ಅ. 4 - ಜನಪ್ರತಿನಿಧಿಗಳು ನಡೆಸಿದ ಕೃತ್ಯದಲ್ಲಿ ಅಪರಾಧ ಇದ್ದರೂ ಅವರಿಗೆ ವಿನಾಯಿತಿ ನೀಡಬಹುದೇ? ಎಂಬ ವಿಷಯವನ್ನು ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ಏಳು ಸದಸ್ಯರ ಪೀಠ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಈ ಬಗ್ಗೆ ವಿಚಾರಣೆ ನಡೆಸಲಿದೆ. ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಭಾಷಣ ಮಾಡಲು ಲಂಚ ಪಡೆದ ಸಂಸದರು ಹಾಗೂ ಶಾಸಕರಿಗೆ ಪ್ರಕರಣದಿಂದ ವಿನಾಯಿತಿ ಇದೆ ಎಂದು 1998ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಈ ಬಗ್ಗೆ ನ್ಯಾಯಾಲಯ ಮರು ಪರಿಶೀಲಿಸಲಿದೆ.

ಜನಪ್ರತಿನಿಧಿಯೊಬ್ಬರು ಲಂಚ ಪಡೆದಾಗ ಅದು ಭ್ರಷ್ಟಾಚಾರ ತಡೆ ಕಾಯ್ದೆಯಡಿ ಬರುತ್ತದೆ. ಇದಕ್ಕೆ ವಿನಾಯಿತಿ ನೀಡುವ ಪ್ರಶ್ನೆಯೇ ಬರುವುದಿಲ್ಲ ಎಂದು ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ ಹೇಳಿದ್ದಾರೆ.

1993ರಲ್ಲಿ ಆಗಿನ ಪಿ.ವಿ. ನರಸಿಂಹ ರಾವ್ ಸರ್ಕಾರ ಎದುರಿಸಿದ ಅವಿಶ್ವಾಸ ನಿಲುವಳಿಯ ವಿರುದ್ಧ ಮತ ಚಲಾಯಿಸಲು ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ಹಾಗೂ ಇತರೆ ನಾಲ್ವರು ಸಂಸದರು ಲಂಚ ಪಡೆದಿದ್ದರು. ಆದರೆ, ಸಂವಿಧಾನದ 105 (2) ವಿಧಿಯ ಅನ್ವಯ ಸಂಸದರಿಗೆ ಪ್ರಕರಣದಿಂದ ವಿನಾಯಿತಿ ಇದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

2012ರಲ್ಲಿ ಶಿಬು ಸೊರೇನ್ ಅವರ ಸೊಸೆ ಸೀತಾ ಸೊರೇನ್ ಅವರು ರಾಜ್ಯಸಭೆಯಲ್ಲಿ ನಿರ್ದಿಷ್ಟ ಅಭ್ಯರ್ಥಿಯೊಬ್ಬರ ಪರವಾಗಿ ಮತ ಚಲಾಯಿ ಸಲು ಲಂಚ ಪಡೆದಿದ್ದಾರೆ ಎಂದು ಆರೋಪಿಸಲಾಗಿತ್ತು. ಆದರೆ, ತಮ್ಮ ಮಾವನಿಗೆ ಜೆ.ಎಂ.ಎಂ. ಲಂಚ ಪ್ರಕರಣದಿಂದ ವಿನಾಯಿತಿ ಇರುವ ಹಾಗೆ ತಮಗೂ ವಿನಾಯಿತಿ ಇದೆ ಎಂದು ಸೀತಾ ಸೊರೇನ್ ವಾದ ಮಂಡಿಸಿದ್ದರು.

ಈ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠ, 1998ರ ತೀರ್ಪು ಮರು ಪರಿಶೀಲಿಸುವುದಾಗಿ ತಿಳಿಸಿತ್ತು. ಈ ಬಗ್ಗೆ ಏಳು ಸದಸ್ಯರ ಪೀಠ ವಿಚಾರಣೆ ನಡೆಸಲಿದೆ.

# ಹರಿಹರದಲ್ಲಿ ಮೊಬೈಲ್ ಸುಲಿಗೆ : ಇಬ್ಬರ ಬಂಧನ

ಹರಿಹರ, ಅ.4- ಹರಿಹರದ ಪ್ರೊ.ಬಿ. ಕೃಷ್ಣಪ್ಪ ಸ್ಮಾರಕದ ಬಳಿ ಮೊಬೈಲ್ ಸುಲಿಗೆ ಮಾಡಿರುವ ಕುರಿತು ದಾಖಲಾಗಿದ್ದ ಪ್ರಕರಣವನ್ನು ಪತ್ತೆ ಹಚ್ಚಿರುವ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ಹರಿಹರದ ಪ್ರವೀಣ್, ಬನ್ನಿಕೋಡು ಗ್ರಾಮದ ಅನಿಲ್ ಕುಮಾರ್ ಬಂಧಿತರು. ಇವರಿಂದ ಕೃತ್ಯಕ್ಕೆ ಬಳಸಿದ ಬೈಕ್, ಕಿತ್ತುಕೊಂಡು ಹೋಗಿದ್ದ ಮೊಬೈಲ್ ವಶ ಪಡಿಸಿಕೊಳ್ಳಲಾಗಿದೆ.

ಆರೋಪಿ ಪತ್ತೆಯಲ್ಲಿ ಹರಿಹರ ಗ್ರಾಮಾಂತರ ಪಿಎಸ್‌ಐಗಳಾದ ಅರವಿಂದ ಬಿ.ಎಸ್, ಅಬ್ದುಲ್ ಖಾದರ್ ಜಿಲಾನಿ, ಎಎಸ್‌ಐ ರಾಮಚಂದ್ರಪ್ಪ ಹಾಗೂ ಸಿಬ್ಬಂದಿಗಳಾದ ನಾಗರಾಜ್, ರಮೇಶ್ ಎನ್., ಬಣಕಾರ ಶ್ರೀಧರ, ಅನಿಲ್ ನಾಯ್ಕ, ಶೇಖರಪ್ಪ, ಹನುಮಂತ, ಶ್ರೀಮತಿ ಸುಶೀಲ ಶ್ರಮಿಸಿದ್ದರು.

# ಬದ್ಧತೆ ಇಲ್ಲದಿರುವ ಮನುಷ್ಯ ಏನನ್ನೂ ಸಾಧಿಸಲಾರ

## 'ಬುದ್ಧನ ಬೆಳಕು' ನಾಟಕ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಸಾಣೇಹಳ್ಳಿ ಶ್ರೀಗಳ ಪ್ರತಿಪಾದನೆ



ದಾವಣಗೆರೆ, ಅ.4- ನಾಮ್ಮ ನಾಡಿನಲ್ಲಿ ಮಾತಿಗೆ ಬರ ಇಲ್ಲ. ಕೃತಿಗೆ ಬರ ಇದೆ. ಮಾನವ ಬಂಧುತ್ವ ವೇದಿಕೆ ಹೊಸ ಪರಂಪರೆ ಹಾಕಿಕೊಟ್ಟಿದೆ. ಕಡಿಮೆ ಮಾತು ಹೆಚ್ಚು ಕೃತಿ. ಎಲ್ಲಾ ಸಂತರು, ಸಾಧುಗಳು ಹೇಳುತ್ತಾ ಬಂದಿದ್ದೆ ಮಾತು ಕಡಿಮೆ ಆಗಲಿ, ಕೃತಿ ಹೆಚ್ಚಾಗಲಿ ಎಂದು. ಅದರಲ್ಲು ಬುದ್ದ ಮಾತನ್ನೇ ಹೆಚ್ಚು ಆಡಿದ್ದರೂ ಮಾತಿನ ಮೂಲಕ ಮನಸ್ಸನ್ನು ಅರಳಿಸುವಂತಹ ಕಾರ್ಯವನ್ನು ಮಾಡಿದ ಎಂದು ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಬಿಐಇಟಿ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಭವನದಲ್ಲಿ ಜಾರಕಿಹೊಳಿ ಫೌಂಡೇಶನ್ ಹಾಗೂ ಮಾನವ ಬಂಧುತ್ವ ವೇದಿಕೆ ವತಿಯಿಂದ ಇಂದು ಸಂಜೆ ಹಮ್ಮಿಕೊಂಡಿದ್ದ 'ಬುದ್ದನ ಬೆಳಕು' ನಾಟಕ ಪ್ರದರ್ಶನ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ನಾವು ಎಷ್ಟು ಒಳ್ಳೆಯ ಮಾತನ್ನು ಹೇಳುತ್ತೇವೆ ಎನ್ನುವುದು ಮುಖ್ಯವಲ್ಲ. ಆಡಿದ ಮಾತನ್ನು ನಮ್ಮ ಬದುಕಿನಲ್ಲಿ ಸಾಕಾರಗೊಳಿಸಿಕೊಳ್ಳುತ್ತೇವೆ ಎನ್ನುವಂತಹದ್ದು, ಈ ನಾಡಿನಲ್ಲಿ ಮಾತಿಗೇನು ಕೊರತೆ ಇಲ್ಲ. ಹಿತವಾದ, ಅದ್ಭುತವಾದ ಎಲ್ಲರೂ ಚಪ್ಪಾಳೆ ತಟ್ಟುವಂತಹ ಮಾತುಗಳನ್ನು ಸ್ವಾಮಿಗಳು, ಸಾಹಿತಿಗಳು, ರಾಜಕಾರಣಿಗಳು ಆಡುತ್ತಾರೆ. ಆದರೆ ಆ ಮಾತುಗಳಿಗೆ ಅನುಗುಣವಾದ ವರ್ತನೆ ಇದೆಯಾ ಅಂಥ ಪ್ರಶ್ನೆ ಹಾಕಿದರೆ, ಇಲ್ಲ ಎಂಬ ಉತ್ತರನೇ ಬರುತ್ತದೆ. ಈ ಸಂದರ್ಭದಲ್ಲಿ ಮಾನವ ಬಂಧುತ್ವ ವೇದಿಕೆ ಹೊಸ ಪರಂಪರೆ ಹಾಕುವ ಪ್ರಯತ್ನ ಮಾಡುತ್ತಿದೆ ಎಂದರು.

ಜಾರಕಿಹೊಳಿ ಸ್ಮಶಾನದಲ್ಲೇ ಅಪರೂಪದ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದ್ದಾರೆ. ಅಲ್ಲಿ ಸಾಹಿತ್ಯ, ಸಂಗೀತ, ಕಲೆಗಳ ರಸದೌತಣ ಇರುತ್ತದೆ. ಮನುಷ್ಯನಿಗೆ ಒಂದು ಕಡೆ ಸಾವು, ಒಂದು ಕಡೆ ಬದುಕು, ಇನ್ನೊಂದು ಕಡೆ ಆದರ್ಶ. ಇವುಗಳ ನೆಲೆಯಲ್ಲಿ ಸಂಸ್ಥೆ ಉತ್ತಮ ಕಾರ್ಯಗಳನ್ನು ಮಾಡುತ್ತಾ ಬಂದಿದ್ದು, ಮತ್ತೊಂದು ಸಾಹಸಕ್ಕೆ ಕೈ ಹಾಕಿದೆ. ಕಲಾವಿದರನ್ನು ಕಲೆ ಹಾಕಿ, ತರಬೇತಿ ನೀಡಿ ಕಲೆಯ ಮೂಲಕ ಕ್ರಾಂತಿಯನ್ನು ಮಾಡುವುದು. ಬೇರೆ ಬೇರೆ ರೀತಿಯ ಕ್ರಾಂತಿಗಳು ನಡೆದಿವೆ. ಆದರೆ ಆ ಕ್ರಾಂತಿಗಳು ಕಳೆಯನ್ನು ಕಳೆದುಕೊಂಡಿವೆ ಎಂದು ಹೇಳಿದರು.

ಕ್ರಾಂತಿಯನ್ನು ಮಾಡುವ ಜನರಲ್ಲಿ ಬದ್ಧತೆ ಇಲ್ಲದಿರುವುದು. ಮನುಷ್ಯನಿಗೆ ಬೇಕಾಗಿರುವುದು ಬದ್ಧತೆ, ಬದ್ದತೆ ಇಲ್ಲದೇ ಏನನ್ನೂ ಕೂಡ ಮಾಡಲಾಗದು. ಈ ನಿಟ್ಟಿನಲ್ಲಿ ಮಾನವ ಬಂಧುತ್ವ ವೇದಿಕೆ ಬದ್ಧತೆಯೊಂದಿಗೆ ಹೆಜ್ಜೆಗಳನ್ನು ಇಡುತ್ತಿದೆ. 'ಬುದ್ಧನ ಬೆಳಕು' ಎನ್ನುವ ಅಪರೂಪದ ನಾಟಕ ಆಯ್ಕೆ ಮಾಡಿಕೊಂಡಿದ್ದಾರೆ. ಬುದ್ದ ತನಗೆ ತಾನೇ ಬೆಳಕಾದವನು. ತನ್ಮೂಲಕ ಲೋಕಕ್ಕೆ ಬೆಳಕಾದವನು. ಹಾಗಾಗಿ ಬುದ್ಧನನ್ನು ಏಷ್ಯಾದ ಬೆಳಕು ಎಂದು ಕರೆಯಲಾಗುತ್ತಿದೆ ಎಂದು ತಿಳಿಸಿದರು.

ವಿಷಾದದ ಸಂಗತಿ ಎಂದರೆ, ಬುದ್ದ ಈ ನಾಡಿನಿಂದಲೇ ಹೋಗಿ ಬಿಟ್ಟ ಎಂಬುದು. ಬುದ್ಧನ ಅಸ್ತಿತ್ವ ಭಾರತಕ್ಕಿಂತ ಹೊರ ದೇಶದಲ್ಲಿ ಹೆಚ್ಚಾಗಿದೆ. ಬುದ್ಧನ ಬೆಳಕನ್ನು ಎಲ್ಲರೂ ಪಡೆದುಕೊಳ್ಳೋಣ, ನಾಟಕ ಯಶಸ್ವಿಯಾಗಲಿ ಎಂದು ಹಾರೈಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ.ಎ.ಬಿ. ರಾಮಚಂದ್ರಪ್ಪ ಮಾತನಾಡಿ, ರಂಗ ಪ್ರಯೋಗವನ್ನು ಮೊದಲ ಬಾರಿಗೆ ಮಾಡುತ್ತಿದ್ದು, ಸತೀಶ್ ಜಾರಕಿ ಹೊಳಿ ಫೌಂಡೇಶನ್ ಹಾಗೂ ಮಾನವ ಬಂಧುತ್ವ ವೇದಿಕೆ ಈ ಎರಡೂ ವೇದಿಕೆಗಳು ನಿರಂತರವಾಗಿ ಸ್ವಸ್ಥ ಸಮಾಜಕ್ಕೆ ಬೇಕಾದ ಚಿಂತನೆಗಳನ್ನು ಬೇರೆ ಬೇರೆ ಆಯಾಮದ ಮೂಲಕ ಬಿತ್ತುವ ಕೆಲಸ ಮಾಡುತ್ತಾ ಬರುತ್ತಿವೆ ಎಂದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಜಗತ್ತಿನ ಎಲ್ಲಾ ಸಮಸ್ಯೆಗಳಿಗೆ ಬುದ್ಧನ ಚಿಂತನೆಗಳು ಪರಿಹಾರ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಒಂದು ರೀತಿ ಬುದ್ದನನ್ನು ಓದಿಕೊಂಡರೆ ಅವರ ಹಾಗೆಯೇ ನಡೆದುಕೊಂಡರೆ ಖಂಡಿತ ರಾಜಕೀಯ ಸಮಸ್ಯೆಗಳು, ಧರ್ಮ ಮತ್ತು ಜಾತಿಯ ಸಮಸ್ಯೆಗಳು ತನ್ನ ತಾನೇ ನಿವಾರಣೆ ಆಗುತ್ತವೆ ಎಂಬುದು ನನ್ನ ನಂಬಿಕೆ ಎಂದರು.

ಇವತ್ತು ಓದುವ ವ್ಯವಧಾನ, ಆಸಕ್ತಿ ಕಡಿಮೆಯಾಗಿದೆ. ಹೊರಗಿನ ಕಸವನ್ನು ಸ್ವಚ್ಛ ಮಾಡುತ್ತೇವೆ. ಆದರೆ ನಮ್ಮ ಮನಸ್ಸಿನ ಕಸವನ್ನು ಹೊರ ಹಾಕುತ್ತಿಲ್ಲ. ಶಾಂತಿಯೊಂದೇ ಎಲ್ಲದಕ್ಕೂ ಪರಿಹಾರ ಎಂಬುದು ಬುದ್ಧನ ಬೆಳಕು ನಾಟಕದ ಪ್ರಮುಖ ಅಂಶವಾಗಿದೆ ಎಂದು ಹೇಳಿದರು.

ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಮಾತನಾಡಿ, ಬುದ್ದನ ಬೆಳಕು ಎಂಬ ನಾಟಕದ ಹೆಸರೇ ರೋಚಕ ಮತ್ತು ಆಕರ್ಷಕವಾಗಿದೆ. ಇವತ್ತು ನಮ್ಮ ದೇಶವನ್ನು ಬೆಳೆಸಬೇಕು, ಉಳಿಸಬೇಕು. ಪ್ರವರ್ಧಮಾನಕ್ಕೆ ತರಬೇಕು ಅನ್ನುವುದಾದರೆ ಒಂದು ಮೂರ್ನಾಲ್ಕು ಜನರಿಂದ ಮಾತ್ರ ಸಾಧ್ಯ. ಬುದ್ಧ, ಬಸವಣ್ಣ, ಗಾಂಧಿ, ಅಂಬೇಡ್ಕರ್. ಇವರ ಚಿಂತನೆಗಳು ನಮಗೆ ಮಾರ್ಗದರ್ಶಕ ಎಂದರು.

ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ ಮಾತನಾಡಿದರು. ರಘು ದೊಡ್ಡಮನಿ ಸ್ವಾಗತಿಸಿದರು. ರವೀಂದ್ರ ನಾಯ್ಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಂಜಿನಪ್ಪ ಕಾರ್ಯಕ್ರಮ ನಿರೂಪಿಸಿದರು.

# ವೀರಶೈವ ಲಿಂಗಾಯತ ಮಹಾಸಭಾದ ಅಧಿವೇಶನ

## ನಗರದಲ್ಲಿ ನಾಳೆ ಪೂರ್ವಭಾವಿ ಸಭೆ

ದಾವಣಗೆರೆ, ಅ.4- ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಮಹಾಸಭಾದ 24ನೇ ಮಹಾ ಅಧಿವೇಶನವು ಬರುವ ಡಿಸೆಂಬರ್ ತಿಂಗಳಲ್ಲಿ ನಗರದಲ್ಲಿ ನಡೆಯಲಿದ್ದು, ಇದರ ಪೂರ್ವಭಾವಿ ಸಭೆಯನ್ನು ನಾಡಿದ್ದು ದಿನಾಂಕ 6ರ ಶುಕ್ರವಾರ ಕರೆಯಲಾಗಿದೆ.

ಅಂದು ಮಧ್ಯಾಹ್ನ 12.30 ಗಂಟೆಗೆ ಸ್ಥಳೀಯ ಎಂ.ಬಿ.ಎ.ಕಾಲೇಜು ಆವರಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪನವರ ಅಧ್ಯಕ್ಷತೆಯಲ್ಲಿ ಈ ಸಭೆ ಏರ್ಪಾಡಾಗಿದೆ.

ಈ ಸಭೆಯಲ್ಲಿ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ, ರಾಷ್ಟ್ರೀಯ ಉಪಾಧ್ಯಕ್ಷರುಗಳಾದ ಎನ್. ತಿಪ್ಪಣ್ಣ, ಅಥಣಿ ವೀರಣ್ಣ, ಎಸ್.ಎಸ್.ಗಣೇಶ್, ಅಣಬೇರು ರಾಜಣ್ಣ, ವಿನಯ್ ಕುಲಕರ್ಣಿ, ಪ್ರಭಾಕರ್ ಕೋರೆ, ರಾಷ್ಟ್ರೀಯ ಕಾರ್ಯದರ್ಶಿ ರೇಣುಕಾ ಪ್ರಸನ್ನ ಮತ್ತಿತರರು ಉಪಸ್ಥಿತರಿರುತ್ತಾರೆ.

ವೀರಶೈವ ಲಿಂಗಾಯತ ಸಮಾಜದ ಮುಖಂಡರು, ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು ಭಾಗವಹಿಸಬೇಕಾಗಿ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ಕೋರಿದ್ದಾರೆ.

# ಡೆಂಗ್ಯೂ ನಿಯಂತ್ರಣಕ್ಕಾಗಿ ಮುನ್ನೆಚ್ಚರಿಕೆ ಅನುಸರಿಸಲು ಸಲಹೆ



ದಾವಣಗೆರೆ, ಅ. 4 - ಕೀಟಜನ್ಯ ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ಸಾರ್ವಜನಿಕ ಜಾಗೃತಿ ಅಗತ್ಯವಾದುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಷಣ್ಮುಖಪ್ಪ ತಿಳಿಸಿದ್ದಾರೆ.

ಕೀಟಜನ್ಯ ರೋಗಗಳ ನಿಯಂತ್ರಣಕ್ಕಾಗಿ ಸಮುದಾಯದಲ್ಲಿ ಜಾಗೃತಿ ಮೂಡಿಸಲು ಮತ್ತು ಸಾರ್ವಜನಿಕರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಮನೆ-ಮನೆ ಭೇಟಿ ನೀಡಿ ಜ್ವರ ಸಮೀಕ್ಷೆ ಮತ್ತು ಲಾರ್ವಾ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಹೆಚ್ಚಿನ ಜ್ವರ ಪ್ರಕರಣಗಳು ಕಂಡುಬಂದಲ್ಲಿ ರಕ್ತದ ಮಾದರಿ, ರಕ್ತಲೇಪನ ಸಂಗ್ರಹಿಸಿ ಪರೀಕ್ಷೆಗೊಳಪಡಿಸಲಾಗುತ್ತದೆ. ವಿಶೇಷವಾಗಿ ವಲಸಿಗರ ಕಾವಲು ಸಮೀಕ್ಷೆಯನ್ನು ನಡೆಸಲಾಗುತ್ತಿದ್ದು, ಈ ವರ್ಷ ವಲಸಿಗರಲ್ಲಿ 9 ಮಲೇರಿಯಾ ಪ್ರಕರಣಗಳು ಕಂಡುಬಂದಿವೆ.

ಈಡೀಸ್ ಲಾರ್ವಾ ಪ್ರಾತ್ಯಕ್ಷಿಕೆಯೊಂದಿಗೆ ಆರೋಗ್ಯ ಶಿಕ್ಷಣ ನೀಡಿ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದ್ದು. ಡೆಂಗ್ಯೂ ನಿಯಂತ್ರಣ ಕ್ರಮಗಳ ಅನುಷ್ಠಾನದಲ್ಲಿ ಸಮುದಾಯದ ಸಹಕಾರ ಅತ್ಯಗತ್ಯ. ಮಳೆಗಾಲದಲ್ಲಿ ಡೆಂಗ್ಯು ಪ್ರಕರಣಗಳು ಹೆಚ್ಚು ಕಂಡುಬರುತ್ತವೆ. ಆದ್ದರಿಂದ ಜನರು ಮಳೆ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಟೈರು, ತೆಂಗಿನ ಚಿಪ್ಪು ಸೇರಿದಂತೆ ನೀರು ಇಂಗದೆ ಸಂಗ್ರಹವಾಗುವ ಅಲ್ಲಲ್ಲಿ ಬಿದ್ದ ಪ್ಲಾಸ್ಟಿಕ್‌ಗಳ ಬಗ್ಗೆ ಹೆಚ್ಚು ಗಮನ ಹರಿಸಬೇಕು ಮತ್ತು ನೀರಿನ ತೊಟ್ಟಿ ಡ್ರಮ್‌ಗಳನ್ನು ಪದೇ ಪದೇ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ತಿಳಿಸಿದ್ದಾರೆ.

# ಎನ್.ಸಿ.ಪಿ. ಸಂಸದ ಎರಡನೇ ಬಾರಿ ಅನರ್ಹ

ನವದೆಹಲಿ, ಅ. 4 – ಎನ್.ಪಿ.ಪಿ. ನಾಯಕ ಮೊಹಮ್ಮದ್ ಫೈಜಲ್ ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆ. ಹತ್ಯೆ ಯತ್ನ ಪ್ರಕರಣದಲ್ಲಿ ವಿಧಿಸಲಾಗಿರುವ ಶಿಕ್ಷೆಯನ್ನು ಅಮಾನತ್ತು ಮಾಡಬೇಕು ಎಂಬ ಮನವಿಯನ್ನು ಕೇರಳ ಹೈಕೋರ್ಟ್ ತಳ್ಳಿ ಹಾಕಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಲಕ್ಷದ್ವೀಪ ಪ್ರತಿನಿಧಿಸುತ್ತಿದ್ದ ಸಂಸದ ಫೈಜಲ್ ಅವರನ್ನು ಅನರ್ಹಗೊಳಿಸಲಾಗಿದೆ. ಫೈಜಲ್ ಅನರ್ಹಗೊಳ್ಳುತ್ತಿರುವುದು ಎರಡನೇ ಬಾರಿ.

ಕವರತ್ತಿ ಸೆಷನ್ಸ್ ನ್ಯಾಯಾಲಯ ಶಿಕ್ಷೆ ವಿಧಿಸಿದ ನಂತರ ಜನವರಿ 25ರಂದು ಅವರನ್ನು ಅನರ್ಹಗೊಳಿಸಲಾಗಿತ್ತು. ಕೇರಳ ಹೈಕೋರ್ಟ್ ಅವರ ಶಿಕ್ಷೆಯನ್ನು ಅಮಾನತ್ತುಗೊಳಿಸಿದ ನಂತರ ಮಾರ್ಚ್ 29ರಂದು ಅವರ ಸದಸ್ಯತ್ವವನ್ನು ಮತ್ತೆ ನೆಲೆಗೊಳಿಸಲಾಗಿತ್ತು. ಆದರೆ, ಹೈಕೋರ್ಟ್ ಆದೇಶ ಲೋಪದಿಂದ ಕೂಡಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿತ್ತು. ಮರು ವಿಚಾರಣೆ ನಡೆಸಿದ ಹೈಕೋರ್ಟ್, ಶಿಕ್ಷೆ ಅಮಾನತ್ತುಗೊಳಿಸದಿರಲು ನಿರ್ಧರಿಸಿದೆ.

# ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಅಹವಾಲು ಸ್ವೀಕಾರ

ದಾವಣಗೆರೆ, ಅ. 4 - ಲೋಕಾಯುಕ್ತ ಪೊಲೀಸ್ ಅಧೀಕ್ಷಕದ ಎಂ.ಎಸ್ ಕೌಲಾಪೂರೆ ಅವರು ಇದೇ ದಿನಾಂಕ 11 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ತುಂಗಭದ್ರಾ ಸಭಾಂಗಣದ ಕಂದಾಯ ಭವನದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.

# 'ರಾಜ್ಯೋತ್ಸವ' ಪ್ರಶಸ್ತಿ : ನೋಂದಣಿಗೆ ಕರೆ

ದಾವಣಗೆರೆ, ಅ. 4 - ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ವಿವಿಧ ಕ್ಷೇತ್ರಗಳ ಸಾಧಕರ ಹೆಸರುಗಳನ್ನು ಸಾರ್ವಜನಿಕರು ಸೇವಾ ಸಿಂಧು ಪೋರ್ಟಲ್ http://sevasindhu.karnataka.gov.in ನಲ್ಲಿ ನಾಮನಿರ್ದೇಶನ ಮಾಡಬಹುದಾಗಿದೆ. ನಾಮನಿರ್ದೇಶನ ಮಾಡಲು ಇದೇ ದಿನಾಂಕ 15 ಕೊನೆ ದಿನವಾಗಿರುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

HAPPY BIRTHDAY
ಇಂದು ತನ್ನ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಪುಟಾಣಿ
ಕು|| ಪರಿಣಿತ ಕಟೀಲ್. ವಿ
ಅವಳಿಗೆ ಜನ್ಮ ದಿನದ ಶುಭಾಶಯಗಳು.

ಅಜ್ಜಿ : ಶ್ರೀಮತಿ ರೇಖಾ ಎಂ.ಸಿ. ರಾಜು
ತಂದೆ-ತಾಯಿ : ಶ್ರೀಮತಿ ಪೂರ್ವಿ ವಾಗೀಶ್, ಕಿಯಾರ. ವಿ
ಮಾವಂದಿರು : ಕಾರ್ತಿಕ್ ಕೃಷ್ಣ, ಸುನೀಲ್‌ಕುಮಾರ್ ಬಿ.ಕೆ.
ಮತ್ತು ಸ್ನೇಹಿತರು ಹಾಗೂ ಹಿತೈಷಿಗಳು

# ಸ್ವಾತಂತ್ರ್ಯ ಚಳವಳಿಯಲ್ಲಿ ರಂಗಭೂಮಿ ಕಲಾವಿದರ ಕೊಡುಗೆ ಅನನ್ಯ

## ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಶ್ಲಾಘನೆ



ದಾವಣಗೆರೆ, ಅ. 4 - ಕಲೆ ಈ ನಾಡಿನ ಸಾಂಸ್ಕೃತಿಕ ಸಂಪತ್ತು. ಟಿ.ವಿ. ಹಾಗೂ ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ರಂಗಭೂಮಿ ಕಲೆ ನಶಿಸುತ್ತಿದ್ದು, ಕಲೆಯನ್ನೇ ನಂಬಿದ ಕಲಾವಿದರ ಬದುಕು ಶೋಚನೀಯವಾಗಿದೆ. ಆದ್ದರಿಂದ ಕಲಾಭಿಮಾನಿಗಳು, ಸಂಘ - ಸಂಸ್ಥೆಗಳು ನಾಟಕ ಪ್ರದರ್ಶನಗಳಿಗೆ ಹೆಚ್ಚು ಪ್ರೋತ್ಸಾಹ ನೀಡುವುದರ ಮೂಲಕ, ಪಾರಂಪರಿಕ ರಂಗಕಲೆಯನ್ನು ಉಳಿಸಿ- ಬೆಳೆಸಲು ಮುಂದಾಗಬೇಕೆಂದು ಆವರಗೊಳ್ಳ ಪುರವರ್ಗ ಹಿರೇ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಆಶಯ ನುಡಿಗಳನ್ನಾಡಿದರು.

ನಗರದ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಬಳಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀ ದುರ್ಗಾಂಬಿಕಾ ನಾಟಕ ಸಂಘದ 47ನೇ ವರ್ಷದ ವಾರ್ಷಿಕೋತ್ಸವ ಹಾಗೂ 'ಕಂಬನಿ' ನಾಟಕ ಪ್ರದರ್ಶನದ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕಲೆ, ರಂಜನೆಯೊಂದಿಗೆ ಮೌಲ್ಯಯುತ ಸಂದೇಶವನ್ನು ನೀಡಿ, ಸಮಾಜ ಸುಧಾರಣೆಗೆ ಹಾಗೂ ಜನರ ಮನ ಪರಿವರ್ತನೆಗೆ ಪ್ರೇರಣೆಯಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲೂ ರಂಗಭೂಮಿ ಕಲಾವಿದರ ಕೊಡುಗೆ ಅನನ್ಯವಾಗಿದೆ.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ಮುಖಂಡ ಯಶವಂತರಾವ್ ಜಾಧವ್ ಮಾತನಾಡಿ, ನಾಟಕಗಳು ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ನೀತಿ ಬೋಧನೆಯನ್ನು ಹೇಳುತ್ತಾ, ಇತಿಹಾಸಕಾರರ ಸಾಧನೆಗಳನ್ನು ಬಿಂಬಿಸುತ್ತ ಜನಮನ ಸೆಳೆಯುತ್ತಿವೆ ಎಂದರು.

ಮರಾಠ ಸಮಾಜದ ಅಧ್ಯಕ್ಷ ಡಿ. ಮಾಲತೇಶರಾವ್ ಜಾಧವ್, ಶ್ರೀ ಅಂಬಾಭವಾನಿ ಕೋ ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಗೋಪಾಲರಾವ್ ಮಾನೆ, ಕಲಾವಿದರ ಸಂಘದ ಗೌರವ ಅಧ್ಯಕ್ಷ ತಿಪ್ಪೇಶರಾವ್ ಚವಾಣ್, ಪ್ರಭಾಕರ್ ಸಾಳಂಕಿ, ಹಿರಿಯ ಕಲಾವಿದ ಕಾಳೆ ನಾಗೇಶ್ ರಾವ್, ಶ್ರೀ ದುರ್ಗಾಂಬಿಕಾ ನಾಟಕ ಸಂಘದ ಅಧ್ಯಕ್ಷ ಜಿ . ಹನುಮಂತರಾವ್ ಪವಾರ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಹಿರಿಯ ಪತ್ರಕರ್ತ, ಕಲಾವಿದ ಬಸವರಾಜ ಐರಣಿ ಅವರು ಸಂಘದ ಬೆಳವಣಿಗೆಯ ಕುರಿತು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಂಘದ ವತಿಯಿಂದ ಹಿರಿಯ ರಂಗ ಕಲಾವಿದ ಕಾಳೆ ನಾಗೇಶ್‌ರಾವ್ ಅವರನ್ನು ಸನ್ಮಾನಿಸಲಾಯಿತು. ನಾಟಕದ ಎಲ್ಲಾ ಕಲಾವಿದರಿಗೂ ಹಾಗೂ ತಂತ್ರಜ್ಞರಿಗೂ 'ಅಭಿನಂದನಾ ಪತ್ರ'ದೊಂದಿಗೆ ಸತ್ಕರಿಸಲಾಯಿತು.

ಸಮಾರಂಭದ ನಂತರ ಬೇಲೂರು ಕೃಷ್ಣಮೂರ್ತಿ ವಿರಚಿತ 'ಕಂಬನಿ' ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸಲಾಯಿತು. ಕಲಾವಿದರಾದ ಪಿ. ಮಲ್ಲಿಕಾರ್ಜುನ ಐರಣಿ, ಕಂಚಿಕೆರೆ ಕೊಟ್ರೇಶ್, ಕಾರ್ಯಕ್ರಮ ನಿರ್ವಹಿಸಿದರು.

ನಮ್ಮ ಕ್ಯಾನ್ಸರ್ ಮತ್ತು ಕಿಡ್ನಿ ಸ್ಪೆಷಲಿಸ್ಟ್‌ರಿಂದ ಸಮಾಲೋಚನೆ
ಸಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ
• ಮೆಡಿಕಲ್ ಆಂಕೊಲಾಜಿಸ್ಟ್
ಡಾ|| ನಮ್ರತಾ ಉಡುಪ: ಪ್ರತಿ ಗುರುವಾರ
ಡಾ|| ಈರಪ್ಪ ಮದಭಾವಿ: ಪ್ರತಿ ಶನಿವಾರ
• ಕಿಡ್ನಿ (ಮೂತ್ರಪಿಂಡ ಶಾಸ್ತ್ರಜ್ಞರು) ತಜ್ಞರು
ಡಾ|| ಹರೀಶ್ ಕೆ ಆರ್: ಪ್ರತಿ ಗುರುವಾರ
• ಸರ್ಜಿಕಲ್ ಆಂಕೊಲಾಜಿಸ್ಟ್
ಡಾ|| ನಿಶ್ಚಲ್ – ಸೋಮವಾರದಿಂದ ಶನಿವಾರದ ವರೆಗೆ
• ರೇಡಿಯೇಷನ್ ಆಂಕೊಲಾಜಿಸ್ಟ್
ಡಾ|| ಶರಶ್ಚಂದ್ರ – ಪ್ರತಿ ತಿಂಗಳ 2ನೇ ಮತ್ತು 4ನೇ ಗುರುವಾರ
"ಆಯುಷ್ಮಾನ್ ಭಾರತ್ ಹಾಗೂ ಯಶಸ್ವಿನಿ ಯೋಜನೆಯಡಿ ಕ್ಯಾನ್ಸರ್ ಚಿಕಿತ್ಸೆಗಳು ಲಭ್ಯವಿದೆ."

ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ 08192-260111 / 7022260111